# ಹಗಲುಗನಸು

ಗಿಜುಭಾಯ್ ಬಧೇಕಾ



# ಹಗಲುಗನಸು

ಗಿಜುಭಾಯ್ ಬಧೇಕಾ

ಚಿತ್ರಗಳು
ಅನಂತ ಮನಕಾಪುರೆ

ಅನುವಾದ
ಡಿ. ಆರ್. ಬಳೂರಗಿ

ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ

ಈ ಪುಸ್ತಕದ ಮುದ್ರಣಕ್ಕೆ ಪುನರ್‌ಸಂಸ್ಕರಿಸಿದ ಪರಿಸರ ಸ್ನೇಹಪರ ಕಾಗದವನ್ನು ಬಳಸಲಾಗಿದೆ.

ISBN 81-237-1423-8

ಮೊದಲ ಮುದ್ರಣ: 1995 (ಶಕ 1916)
ಕನ್ನಡ ಅನುವಾದ ©: ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ, 1995
Original Title: Diwaswapna (Gujarati)
Kannada Translation : Hagaluganasu
ರೂ. 21.00
ನಿರ್ದೇಶಕರು, ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ
ಎ–5, ಗ್ರೀನ್ ಪಾರ್ಕ್, ಹೊಸ ದೆಹಲಿ–110016
ಇವರಿಂದ ಪ್ರಕಟಿತ

# ಪೀಠಿಕೆ

ಮಕ್ಕಳ ಶಿಕ್ಷಕರನ್ನು ಸುಮಾರು ನೂರೈವತ್ತು ವರ್ಷಗಳ ವಸಾಹತುಶಾಹಿ ಶಾಸನ ಜಡ್ಡುಹಿಡಿಸುವ ಕಟ್ಟುಪಾಡುಗಳಲ್ಲಿ ಹಿಡಿದಿಟ್ಟಿತ್ತು. ಇದಕ್ಕೆ ಇನ್ನೂ ಮುಕ್ತಿ ಸಿಕ್ಕಿಲ್ಲ. ಶಿಕ್ಷಕರು ವಿವಶರಾಗಿದ್ದಾರೆ. ಈ ಮಧ್ಯೆ ಶಾಲಾ ಶಿಕ್ಷಣ ವ್ಯವಸ್ಥೆ ದೇಶದ ಮೂಲೆ ಮೂಲೆಗೂ ಹಬ್ಬಿದೆ. ಅಧ್ಯಾಪಕರ ಉದಾಸ ಮಾನಸಿಕ ಸ್ಥಿತಿಯನ್ನು ಸಹಿಸಬೇಕಾಗಿ ಬಂದಿರುವುದು ಕೋಟ್ಯಾಂತರ ಮಕ್ಕಳ ವಿವಶತೆಯಾಗಿದೆ. ಮಕ್ಕಳಿಗೆ ಸುತ್ತ–ಮುತ್ತಲಿನ ಪ್ರಪಂಚದ ಆಗುಹೋಗುಗಳ ಬಗ್ಗೆ ತಿಳುವಳಿಕೆ ಮೂಡಿಸದಂಥ ಯಾವ ಶಿಕ್ಷಕನೂ ಇರಲಾರ. ಆದರೆ ಶಾಲಾ ಸಂಸ್ಕೃತಿ ಹೇಗಾಗಿದೆಯೆಂದರೆ ಕ್ರಿಮಿ–ಕೀಟಗಳಿಂದ ಹಿಡಿದು ನಕ್ಷತ್ರಗಳ ವರೆಗಿನ ಎಲ್ಲ ವಸ್ತು–ವಿಷಯಗಳನ್ನು ತರಗತಿ ಹೊರಗಿನ ವಿಷಯಗಳೆಂದು ಪರಿಗಣಿಸಲಾಗುತ್ತದೆ. ಸಾಮಾನ್ಯ ಶಿಕ್ಷಕ ತನ್ನ ಕೆಲಸ ಪಠ್ಯಕ್ರಮವನ್ನು ಮುಗಿಸುವುದು ಹಾಗೂ ಮಕ್ಕಳನ್ನು ಪರೀಕ್ಷೆಗೆ ಸಿದ್ಧಗೊಳಿಸುವುದಕ್ಕೆ ಮಾತ್ರ ಸೀಮಿತವೆಂಬ ನಂಬಿಕೆಯನ್ನು ಹೊಂದಿರುತ್ತಾನೆ. ಮಕ್ಕಳ ಕುತೂಹಲ, ಉತ್ಸುಕತೆ, ಇವುಗಳನ್ನು ವಿಕಾಸಗೊಳಿಸುವುದು ತನ್ನ ಕೆಲಸವೂ ಅಲ್ಲ, ಇಂಥ ಜವಾಬ್ದಾರಿಯನ್ನು ವಹಿಸಿಕೊಳ್ಳುವಂಥ ಪರಿಸ್ಥಿತಿಗಳೂ ಶಾಲೆಯಲ್ಲಿಲ್ಲವೆಂದು ತಿಳಿಯುತ್ತಾನೆ. ಇದು ಯಥಾರ್ಥ.

ಗುಜರಾತಿನ ಮಹಾನ್ ಶಿಕ್ಷಣ ತಜ್ಞ ಹಾಗೂ ಮಕ್ಕಳ ಶಿಕ್ಷಕ ಗಿಜುಭಾಯಿ ಬಧೇಕಾ (1885-1939) ಅವರ ಪುಸ್ತಕ ದಿವಾಸ್ವಪ್ನ (ಹಗಲುಗನಸು) ವನ್ನು ಪುನರ್‌ಮುದ್ರಣ ಮಾಡಿ, ಪ್ರಸಾರ ಮಾಡಲು ಇಂದಿನ ಸ್ಥಿತಿಯೂ ಪ್ರಸಕ್ತ. ಈ ಪುಸ್ತಕವನ್ನು ಮೊದಲು 1932ರಲ್ಲಿ ಮೂಲತಃ ಗುಜರಾತಿ ಭಾಷೆಯಲ್ಲಿ ಪ್ರಕಟಿಸಲಾಯಿತು. ಅದೇ ವರ್ಷ ಮಧ್ಯ ಪ್ರದೇಶದ ಯಶಸ್ವಿ ಶಿಕ್ಷಣ ತಜ್ಞರಾದ ಕಾಶಿನಾಥ ತ್ರಿವೇದಿ ಅವರು ಇದರ ಹಿಂದಿ ಅನುವಾದ ಮಾಡಿ ಸ್ವತಃ ಪ್ರಕಟಿಸಿದರು. ತ್ರಿವೇದಿ ಅವರು ಒಳ್ಳೆಯ ಕೆಲಸಕ್ಕೆ ಸಫಲತೆ ಸಿಗುವುದೆಂಬ ಧೈರ್ಯವನ್ನು ಗಾಂಧಿಜೀ ಅವರಿಂದ ಕಲಿತರು. ದಿವಾಸ್ವಪ್ನ ದೊಂದಿಗೆ ಗಿಜುಭಾಯಿ ಅವರ ಸಮಗ್ರ ಶಿಕ್ಷಣ ಸಾಹಿತ್ಯದ ವ್ಯಾಪಕ ಪ್ರಸಾರದ ಬಗೆಗಿನ ಅವರ ಕನಸು ಇಂದು ನನಸಾಗುವ ಹಂತಕ್ಕೆ ತಲುಪಿದೆ.

ಆದರೆ ಶಿಕ್ಷಣದಲ್ಲಿ ಪರಿವರ್ತನೆ ತರುವ ಈ ಕನಸು ನನಸಾಗಲು ಈ ನಿಟ್ಟಿನಲ್ಲಿ ಸಾಕಷ್ಟು ಸಂಘರ್ಷ ಮಾಡಬೇಕಾಗುತ್ತದೆ; ಈ ಹಾದಿಯಲ್ಲಿ ಗಾಂಧಿಜೀ, ಟ್ಯಾಗೂರ್ ಮತ್ತು ಗಿಜುಭಾಯಿ ಮುನ್ನಡೆದಿದ್ದರು. ಈ ಮೂವರೂ ಕಂಡುಕೊಂಡ ಶಿಕ್ಷಣ ಶಾಸ್ತ್ರದ

ಸಾರವೆಂದರೆ ಮಕ್ಕಳಿಗೆ ಸ್ವಾತಂತ್ರ್ಯ ಹಾಗೂ ಸ್ವಾವಲಂಬನೆಯ ಪರಿಸ್ಥಿತಿಯನ್ನು ಒದಗಿಸುವುದು. ಗಿಜುಭಾಯಿ ಅವರು 1920ರಲ್ಲಿ ತಮ್ಮ "ಬಾಲಮಂದಿರ"ವನ್ನು ಸ್ಥಾಪಿಸಿ ಈ ಮೂಲ ಸಿದ್ಧಾಂತಕ್ಕೆ ಒಂದು ಶಾಶ್ವತ ನೆಲೆಗಟ್ಟನ್ನು ಹಾಕಿದರು. ಬಳಿಕ ತಮ್ಮ ದೈನಂದಿನ ವ್ಯವಹಾರದಲ್ಲಿ ಹಾಗೂ ಲೇಖನಗಳಲ್ಲಿ ಇದರ ನಾನಾಮುಖಗಳನ್ನು ಗುರುತಿಸಿದರು. ಒಬೀರಾಯನ ಕಾಲದ ಸಂಸ್ಕೃತಿಯನ್ನು ಸ್ವೀಕರಿಸದೆ, ಪರಂಪರಾನುಗತ ವಿಧಾನಗಳು ಹಾಗೂ ಪಠ್ಯ ಪುಸ್ತಕಗಳನ್ನು ಬದಿಗೊತ್ತಿ ಮಕ್ಕಳೊಂದಿಗೆ ಸರಸದಿಂದ ಇದ್ದು ಪ್ರಯೋಗಶೀಲನಾಗಿರುವಂಥ ಕಾಲ್ಪನಿಕ ಶಿಕ್ಷಕನೊಬ್ಬನ ಕಥೆಯೇ ಈ ಹಗಲುಗನಸು. ಈ ಶಿಕ್ಷಕನ ಪ್ರಯೋಗಗಳ ಸೈದ್ಧಾಂತಿಕ ಹಿನ್ನೆಲೆ ಮಾಂಟಿಸ್ಸೋರಿಯಲ್ಲಿ ಇದ್ದರೂ ಸಿದ್ಧತೆ ಹಾಗೂ ಕಾರ್ಯರೂಪಕ್ಕೆ ತರುವ ವಿಧಾನ ಅಪ್ಪಟ ದೇಸಿ. ಹಗಲುಗನಸು ಪುಸ್ತಕವನ್ನು ಓದುತ್ತಾ ಹೋದಂತೆ ಮನಸ್ಸು ನಿಚ್ಚಳವಾಗುತ್ತಾ, ಜಡ್ಡುಗಟ್ಟಿದ ಪ್ರಾಥಮಿಕ ಶಾಲೆಗಳ ನಿಸ್ತೇಜತೆಯನ್ನು ಭೇದಿಸಿಕೊಂಡು ಉಲ್ಲಾಸ ಹಾಗೂ ಜಿಜ್ಞಾಸೆಯ ಮಿಂಚಿನಲ್ಲಿ ತೇಲಿಹೋಗುತ್ತದೆ ಹಾಗೂ ದೇಶದ ಲಕ್ಷಾಂತರ ಶಾಲೆಗಳಲ್ಲಿ ಬಂಧಿಸಲ್ಪಟ್ಟ ಪ್ರತಿಭೆ ಹೊರಬಂದು ಮಕ್ಕಳು ತಮ್ಮ ಶಿಕ್ಷಕರೊಂದಿಗೆ ತರಗತಿಯಲ್ಲಿ ಕುಳಿತು ಶಾಲೆಯ ಸುತ್ತ-ಮುತ್ತಲಿನ, ಹೊರ ಜಗತ್ತಿನ ಪರಿಶೋಧನೆಯನ್ನು ಆನಂದದಿಂದ ನಡೆಸುತ್ತಿರುವ ಚಿತ್ರಣವನ್ನು ಕಲ್ಪಿಸಿಕೊಳ್ಳಲು ತೊಡಗುತ್ತದೆ.

ಮೇ 1, 1989

**ಕೃಷ್ಣ ಕುಮಾರ್**

ಅಧ್ಯಕ್ಷ, ಶಿಕ್ಷಣ ವಿಭಾಗ
ದೆಹಲಿ ವಿಶ್ವವಿದ್ಯಾಲಯ, ದೆಹಲಿ.

ಆಳವಾದ ಹಾಗೂ ಗಹನವಾದ ತಾತ್ವಿಕ ಲೇಖನಗಳ ಬದಲು ಕಥಾಶೈಲಿಯಲ್ಲಿ ತಾವು ಶಿಕ್ಷಣಕ್ಕೆ ಸಂಬಂಧಿಸಿದ ತಮ್ಮ ವಿಚಾರಗಳನ್ನು ಚಿತ್ರಿಸಿದರೆ ಹೇಗೆ? – ಎಂದು ನನಗೆ ಯಾರೋ ಹೇಳಿದರು. ಇದರಿಂದ ನನಗೆ ಈ ನಿಟ್ಟಿನಲ್ಲಿ ಪ್ರಯತ್ನಿಸಲು ಪ್ರೇರಣೆ ಬಂತು; ಫಲಸ್ವರೂಪವಾಗಿ ದಿವಾಸ್ವಪ್ನ (ಹಗಲುಗನಸು) ಮೂಡಿಬಂತು.

ಹಗಲು ಕನಸುಗಳ ಮೂಲದಲ್ಲಿ ವಾಸ್ತವಿಕ ಅನುಭವಗಳಿದ್ದಲ್ಲಿ ಇವು ಮಿಥ್ಯೆಯಾಗಲು ಸಾಧ್ಯವಿಲ್ಲ. ಈ ಹಗಲುಗನಸು ನನ್ನ ಜೀವಂತ ಅನುಭವಗಳಿಂದ ಹುಟ್ಟಿದೆ. ಇದನ್ನು ಜೀವಂತ, ಕ್ರಿಯಾತ್ಮಕ ಹಾಗೂ ನಿಷ್ಠಾವಂತ ಶಿಕ್ಷಕನಾದವನು ಮನಗಂಡು ಇದಕ್ಕೆ ವಾಸ್ತವಿಕ ಸ್ವರೂಪ ನೀಡುವನೆಂಬ ವಿಶ್ವಾಸ ನನಗಿದೆ.

**ಗಿಜುಭಾಯಿ**

# ಪ್ರಥಮ ಖಂಡ

# ಪ್ರಯೋಗದ ಪ್ರಾರಂಭ

## 1

ನಾನು ಓದಿದ್ದು, ಚಿಂತಿಸಿದ್ದು ಸಾಕಷ್ಟಾಗಿದ್ದರೂ, ಅನುಭವಶೂನ್ಯನಾಗಿದ್ದೆ. ಸ್ವಲ್ಪವಾದರೂ ಅನುಭವ ಪಡೆದರೆ ನನ್ನ ವಿಚಾರಧಾರೆಯಲ್ಲಿ ಪಕ್ವತೆ ಬಂದೀತು ಎಂದು ಯೋಚಿಸಿದೆ. ಆಗಲೇ ನನ್ನ ಕಲ್ಪನೆಯಲ್ಲಿ ಟೊಳ್ಳೆಷ್ಟು, ಗಟ್ಟಿಯೆಷ್ಟು, ಎಂಬುದು ತಿಳಿದೀತು.

ಅದಕ್ಕಾಗಿ ಶಿಕ್ಷಣ ವಿಭಾಗದ ಮೇಲಧಿಕಾರಿಗಳ ಬಳಿಗೆ ಹೋಗಿ ನನ್ನ ಪ್ರಯೋಗಕ್ಕಾಗಿ ಪ್ರಾಥಮಿಕ ಶಾಲೆಯ ಒಂದು ವರ್ಗವನ್ನು ನೀಡಲು ವಿನಂತಿಸಿದೆ.

ಅಧಿಕಾರಿಗಳು ಮುಗುಳ್ನಕ್ಕು ನುಡಿದರು: 'ಅದು ನಿಮ್ಮಿಂದ ಆಗಲಾರದು. ಹುಡುಗರಿಗೆ ಕಲಿಸುವುದು, ಅದರಲ್ಲಿಯೂ ಪ್ರಾಥಮಿಕ ಶಾಲೆಯ ಹುಡುಗರಿಗೆ ಕಲಿಸುವುದು ಬಹಳ ಪರಿಶ್ರಮದ ಕೆಲಸ; ಸಾಕಷ್ಟು ಜವಾಬ್ದಾರಿ ವಹಿಸಿದರೂ ಆಗದ ಕಲಸ. ನೀವೋ ಬರಹಗಾರರು, ಚಿಂತಕರು, ಮೇಜಿನೆದುರು ಕುಳಿತು ಲೇಖನ ಬರೆಯುವುದು ಸುಲಭ; ಕಲ್ಪನೆಯಲ್ಲಿ ಕಲಿಸುವುದು ಸುಲಭ. ಆದರೆ ಪ್ರತ್ಯಕ್ಷವಾಗಿ ಅದನ್ನು ರೂಢಿಯಲ್ಲಿ ತರುವುದು ಬಹಳ ಕಠಿಣ ಕಾರ್ಯ'.

'ಆಗಲಿ, ನಿಮ್ಮ ಇಚ್ಛೆ ಅಷ್ಟು ಪ್ರಬಲವಾಗಿದ್ದರೆ, ಸಂತೋಷವಾಗಿ ಒಂದು ವರ್ಷದ ಅನುಭವ ಪಡೆಯಬಹುದು. ಪ್ರಾಥಮಿಕ ಶಾಲೆಯ ನಾಲ್ಕನೇ ವರ್ಗವನ್ನು ನಿಮಗೆ ಕೊಡುವೆ. ಆದರ ಪಠ್ಯಕ್ರಮ, ಆ ವರ್ಗದ ಪಠ್ಯ ಪುಸ್ತಕಗಳು, ಶಿಕ್ಷಣ ವಿಭಾಗದ ರಜೆಯ ದಿನ ಇತ್ಯಾದಿ ವಿವರಗಳ ನಿಯಮಾವಳಿಗಳಿವೆ, ತೆಗೆದುಕೊಳ್ಳಿ' ಎಂದರು ಅಧಿಕಾರಿಗಳು.

ನಾನು ಅವೆಲ್ಲವುಗಳನ್ನು ನೋಡಿ ಪಠ್ಯಕ್ರಮವನ್ನು ಮಾತ್ರ ಜೇಬಿನಲ್ಲಿರಿಸಿ ಉಳಿದವುಗಳನ್ನು ಕಟ್ಟಿಟ್ಟೆ.

ಅಧಿಕಾರಿಗಳೆಂದರು: 'ಇಲ್ಲಿ ನೋಡಿ, ನಿಮಗೆ ಹೇಗೆ ಬೇಕೋ ಹಾಗೆ ಪ್ರಯೋಗ ಮಾಡಬಹುದು. ಆದರೆ ವರ್ಷದ ಕೊನೆಯಲ್ಲಿ ಪರೀಕ್ಷೆಯನ್ನು ತೆಗೆದು

ಕೊಳ್ಳಲಾಗುವುದೆಂಬ ಸಂಗತಿ ನೆನಪಿರಲಿ. ನಿಮ್ಮ ಕೆಲಸದ ಗುಣಮಟ್ಟ ನಿರ್ಧಾರವಾಗುವುದು ಅದರಿಂದ.'

"ಒಪ್ಪಿಗೆ" . ಆದರೆ ನನ್ನದೊಂದು ಬೇಡಿಕೆ. ಪರೀಕ್ಷೆಯನ್ನು ತಾವೇ ತೆಗೆದುಕೊಳ್ಳಬೇಕು. ನನ್ನ ಕೆಲಸವನ್ನು ಗಮನಿಸಿ, ಪ್ರಯೋಗ ಮಾಡಲು ತಾವು ನನಗೆ ಸ್ವಾತಂತ್ರ್ಯ ಕೊಟ್ಟಿರುವುದರಿಂದ ತಾವೇ ನನ್ನ ಕೆಲಸವನ್ನು ನೋಡಬೇಕು. ತಾವೇ ನನ್ನ ಸಾಫಲ್ಯ-ವೈಫಲ್ಯಗಳ ಕಾರಣ ತಿಳಿಯಬಲ್ಲಿರಿ....'

ಅಧಿಕಾರಿಗಳು ನಗುತ್ತ ಒಪ್ಪಿಗೆ ಸೂಚಿಸಿದರು. ನಾನು ಆಫೀಸಿನಿಂದ ಹೊರಬಿದ್ದೆ.

## 2

ನಾನು ಇಡೀ ಪಠ್ಯಕ್ರಮ ಓದಿದೆ; ಅನೇಕ ಬದಲಾವಣೆಗಳನ್ನು ಮಾಡಬಹುದು ಎಂದು ನನಗನಿಸಿತು. ಪಠ್ಯ ಪುಸ್ತಕಗಳನ್ನು ಒಮ್ಮೆ ಸ್ಥೂಲವಾಗಿ ಅವಲೋಕಿಸಿದೆ. ಗುಣದೋಷಗಳು ಗೋಚರವಾದುವು. ಏನು ಬದಲಾವಣೆ ಮಾಡಬಹುದು, ಎಷ್ಟು ಸುಧಾರಣೆ ಮಾಡಬಹುದು, ಎಂದು ಯೋಚಿಸಿದೆ. ಮೊದಲಿನಿಂದ ಕೊನೆಯ ದಿನದ ಚಿತ್ರ ಮನದಲ್ಲಿ ಮೂಡಿತು. ಪರೀಕ್ಷೆ ಮತ್ತು ಅದರ ಪರಿಣಾಮದ ದಿನವನ್ನೂ ಕಲ್ಪಿಸಿಕೊಂಡೆ. ಎಲ್ಲದರ ಬಗ್ಗೆ ಕನಸು ಕಂಡೆ. ಹೀಗೆಯೇ ಕೆಲಸ ನಡೆಯುವುದು, ಇದರ ಫಲಿತಾಂಶ ಕೂಡ ಹೀಗೆಯೇ ಆಗುವುದು ಎಂದು ಊಹಿಸಿದೆ. ಯೋಚಿಸುತ್ತಾ ರಾತ್ರಿ 2 ಗಂಟೆ ಹೊಡೆದದ್ದೇ ತಿಳಿಯಲಿಲ್ಲ. ಕೊನೆಗೆ ಮರುದಿನ ಕಾರ್ಯಕ್ರಮವನ್ನು ಕಾಗದದಲ್ಲಿ ಗುರುತುಹಾಕಿ ಮೂರು ಗಂಟೆಯ ಹೊತ್ತಿಗೆ ಮಲಗಿಕೊಂಡೆ.

ಬೆಳಗಾಯಿತು. ನನ್ನ ಉತ್ಸಾಹ, ಶ್ರದ್ಧೆಗಳು ಗರಿಗೆದರಿದ್ದವು. ಸ್ನಾನ, ಉಪಾಹಾರ ಮುಗಿಸಿ ಸರಿಯಾದ ವೇಳೆಗೆ ಮೂರನೇ ನಂಬರ್ ಶಾಲೆಗೆ ಹೋದೆ. ಇನ್ನೂ ಬಾಗಿಲು ತೆರೆದಿರಲಿಲ್ಲ, ಮುಖ್ಯೋಪಾಧ್ಯಾಯರು ಬಂದಿರಲಿಲ್ಲ. ನೌಕರನು ಬೀಗದ ಕೈ ತರಲು ಅವರ ಮನೆಗೆ ಹೋಗಿದ್ದ. ಹುಡುಗರು ಬರುತ್ತಿದ್ದರು. ರಸ್ತೆಯಲ್ಲಿ ಸಾಕಷ್ಟು ಗದ್ದಲವಿತ್ತು. ಯಾವಾಗ ಶಾಲೆ ಪ್ರಾರಂಭವಾದೀತು, ಯಾವಾಗ ನಾನು ನನ್ನ ಕೆಲಸ ಆರಂಭಿಸಲಿ ಎಂಬ ಆತುರ ನನಗಿತ್ತು. ರಸವತ್ತಾಗಿ ಪಾಠಮಾಡಿ ಬಾಲಕರ ಮನಸ್ಸನ್ನು ಆಕರ್ಷಿಸುವ ಯೋಚನೆ ಬಂದು ಪುಳಕಿತನಾದೆ.

ಗಂಟೆ ಬಾರಿಸಿತು. ಬಾಲಕರು ವರ್ಗದಲ್ಲಿ ಬಂದು ಕುಳಿತರು. ಮುಖ್ಯೋಪಾಧ್ಯಾಯರು ನನ್ನೊಡನೆ ಬಂದು ನನಗೆ ವರ್ಗವನ್ನು ತೋರಿಸಿ, ವಿದ್ಯಾರ್ಥಿಗಳಿಗೆ 'ನೋಡಿ, ಇವರು ಲಕ್ಷ್ಮೀಶಂಕರ್. ಇಂದಿನಿಂದ ಇವರು ನಿಮ್ಮ ಗುರುಗಳು. ಅವರು ಹೇಳಿದ ಹಾಗೆ ಕೇಳಬೇಕು. ಗದ್ದಲ ಮಾಡಕೂಡದು' ಎಂದು ಹೇಳಿದರು.

ಮುಖ್ಯೋಪಾಧ್ಯಾಯರು ಮಾತನಾಡುತ್ತಿದ್ದಾಗ ನಾನು ನನ್ನ ಮುಂದಿನ ಒಂದು



ವರುಷದ ಸಂಗಡಿಗರನ್ನು ಗಮನಿಸುತ್ತಿದ್ದೆ. ಒಬ್ಬ ನಗುತ್ತಿದ್ದ, ಇನ್ನೊಬ್ಬ ಕಣ್ಣು ಮಿಟುಕಿಸಿದ, ಮತ್ತೊಬ್ಬ ಗತ್ತಿನಿಂದ ತಲೆ ಆಡಿಸಿದ. ಕೆಲವರು ಆಶ್ಚರ್ಯದಿಂದ ನೋಡುತ್ತಿದ್ದರು.

ಈ ಹುಡುಗರಿಗೆ ನಾನು ಕಲಿಸಬೇಕು. ಈ ಚಿತ್ರ ವಿಚಿತ್ರ ತುಂಟ ಹುಡುಗರನ್ನು ನೋಡಿ ಮನಸ್ಸಿನ ಒಂದು ಮೂಲೆಯಲ್ಲಿ ಏನೋ ಒಂದು ಬಗೆಯ ಕಿರಿಕಿರಿ ಆಯಿತು. ಎದೆ ಬಡಿದುಕೊಳ್ಳತೊಡಗಿತು. ಆದರೂ ಅಡ್ಡಿ ಇಲ್ಲ, ಮೆಲ್ಲಗೆ ಎಲ್ಲರನ್ನು ವಿಚಾರಿಸಿಕೊಳ್ಳೋಣವೆಂದು ಧೈರ್ಯ ತಂದುಕೊಂಡೆ.

ರಾತ್ರಿ ಬರೆದ ಚೀಟಿ ತೆರೆದು ನೋಡಿದೆ. ಮೊದಲು ಶಾಂತಿಯ ಆಟ. ಆಮೇಲೆ ವರ್ಗದ ಚೊಕ್ಕಟತನದ ಪರೀಕ್ಷೆ. ನಂತರ ಸಹಗಾನ. ಕೊನೆಗೆ ಮಾತುಕತೆ...ಇತ್ಯಾದಿ.

ನಾನು ಹುಡುಗರಿಗೆ ಹೇಳಿದೆ: 'ಬನ್ನಿ, ನಾವೆಲ್ಲ ಶಾಂತಿಯ ಆಟ ಆಡೋಣ. ನೋಡಿ, ನಾನು 'ಓಂ ಶಾಂತಿ' ಎಂದು ಹೇಳಿದ ಕೂಡಲೇ ನೀವೆಲ್ಲ ಸುಮ್ಮನೆ ಕುಳಿತುಕೊಳ್ಳಬೇಕು. ಯಾರೂ ಅಲ್ಲಾಡಬಾರದು. ನಾನು ಬಾಗಿಲು ಹಾಕುವೆ. ಆಗ ಎಲ್ಲ ಕಡೆ ಕತ್ತಲೆಯಾಗುತ್ತದೆ. ನೀವೆಲ್ಲರೂ ಶಾಂತರಾಗಿರಬೇಕು. ಆಗ ನಿಮಗೆ ಸುತ್ತಲಿನ ಗದ್ದಲ ಕೇಳಿ ಬರುತ್ತದೆ. ಅದನ್ನು ಕೇಳುವುದೇ ಒಂದು ಮೋಜು, ನೊಣಗಳ ಹಾರಾಟದ ಸದ್ದನ್ನು ನೀವು ಕೇಳಬಹುದು. ನಿಮ್ಮ ಉಸಿರಾಟದ ಶಬ್ದ ನಿಮಗೆ ಕೇಳಿಸುತ್ತದೆ. ಆನಂತರ ನಾನು ಹಾಡುವೆ. ನೀವೆಲ್ಲ ಕೇಳಿ.'

ಇಷ್ಟು ಹೇಳಿ ನಾನು ಶಾಂತಿಯ ಆಟ ಪ್ರಾರಂಭಿಸಿದೆ. 'ಓಂ ಶಾಂತಿ' ಎಂದೆ. ಆದರೆ



ಈ ತುಂಟ ಹುಡುಗರನ್ನು ನೋಡಿ ಸ್ವಲ್ಪ ಹೆದರಿಕೆ ಆಯಿತು. ಎದೆ ಬಡಿದುಕೊಂಡಿತು.

ಹುಡುಗರು ಮಾತ್ರ ಗದ್ದಲ ನಡೆಸಿಯೇ ಇದ್ದರು. ನಾಲ್ಕಾರು ಬಾರಿ ಹೇಳಿದರೂ ಪ್ರಯೋಜನವಾಗಲಿಲ್ಲ. ನಾನು ಮುಂದಾಗಿ ಕಿಟಕಿ ಬಾಗಿಲುಗಳನ್ನು ಹಾಕಿದೆ, ಕತ್ತಲಾಯಿತು. ಆದರೆ ಧ್ಯಾನ? ಏನೋ ನಡೆಯಿತು. ಒಬ್ಬ "ಊಂ" ಎಂದ, ಇನ್ನೊಬ್ಬ "ಹಾಂ" ಎಂದ, ಮತ್ತೊಬ್ಬ 'ಓ' ಎಂದ, ಕೆಲವರು 'ಧಪಧಪ' ಕಾಲಪ್ಪಳಿಸತೊಡಗಿದರು. ಅಷ್ಟರಲ್ಲಿ ಒಬ್ಬ ಚಪ್ಪಾಳೆ ತಟ್ಟಿದ. ಎಲ್ಲರೂ ಅವನನ್ನು ಅನುಸರಿಸಿದರು. ನಂತರ ಎಲ್ಲರೂ ಜೋರಾಗಿ ನಗಲಾರಂಭಿಸಿದರು. ನನಗೆ ಮುಖಕ್ಕೆ ಹೊಡೆದ ಹಾಗಾಯಿತು. ಎಲ್ಲ ಕಿಟಕಿಗಳನ್ನು ತೆರೆದೆ. ಸ್ವಲ್ಪ ಹೊತ್ತು ಹೊರಗೆ ಹೋಗಿ ಬಂದೆ. ಇಡೀ ವರ್ಗವೇ ಗಲಾಟೆ ಮಾಡುತ್ತಿತ್ತು. ಹುಡುಗರು ಒಬ್ಬರೊಬ್ಬರಿಗೆ 'ಓಂ ಶಾಂತಿ' ಎನ್ನುತ್ತಿದ್ದರು. ಕೆಲವರು ತಾವೇ ಎದ್ದು ಕಿಟಕಿಯ ಬಾಗಿಲು ಹಾಕುತ್ತಿದ್ದರು.

'ನನ್ನ ಟಿಪ್ಪಣಿ ವ್ಯರ್ಥವಾಯಿತು. ಮನೆಯಲ್ಲಿ ಕುಳಿತು ಕಲ್ಪನೆಯಲ್ಲಿ ಕಲಿಸುವುದು ಸುಲಭ. ಇವರೆದುರಿಗೆ ಶಾಂತಿಯ ಆಟ ಕಬ್ಬಿಣದ ಕಡಲೆ ಆಗಿದಂತೆ; ಕೋಣನೆದುರು ಕಿನ್ನರಿ ಬಾರಿಸಿದಂತೆ. ಚಿಂತೆ ಇಲ್ಲ. ಮೊದಲನೆಯ ತುತ್ತಿಗೇ ನೊಣ ಬಂದದ್ದು ಒಳ್ಳೆಯದಾಯಿತು. ನಾಳೆಯಿಂದ ಹೊಸ ಕೆಲಸ ಪ್ರಾರಂಭಿಸುತ್ತೇನೆ.' ಎಂದು ಯೋಚಿಸತೊಡಗಿದೆ.

ಹುಡುಗರಿಗೆ ಹೇಳಿದೆ: 'ಮಕ್ಕಳೇ, ಇಂದು ಹೆಚ್ಚು ಕೆಲಸ ಮಾಡುವುದು ಬೇಡ. ನಾಳಿನಿಂದ ಹೊಸ ಕೆಲಸ ಪ್ರಾರಂಭ. ಇವತ್ತು ರಜೆ.'

ರಜೆ ಎಂಬ ಶಬ್ದ ಕೇಳಿದೊಡನೆ ಎಲ್ಲ ಹುಡುಗರು 'ಹೋ' ಎಂದು ಕೂಗುತ್ತ ವರ್ಗದ ಹೊರಗೋಡಿದರು. ಇಡೀ ಶಾಲೆಯಲ್ಲಿ ಗಲಾಟೆಯೋ ಗಲಾಟೆ. ಶಾಲೆ 'ರಜೆ ರಜೆ' ಎಂಬ ಧ್ವನಿಯಿಂದ ತುಂಬಿಹೋಯಿತು. ಹುಡುಗರು ಕುಣಿಯುತ್ತ, ಕುಪ್ಪಳಿಸುತ್ತ ಮನೆಕಡೆಗೆ ಓಡಲಾರಂಭಿಸಿದರು. ಪಕ್ಕದ ಕ್ಲಾಸಿನ ಶಿಕ್ಷಕರು ಇದೇನು ಎಂದು ನೋಡಲಾರಂಭಿಸಿದರು. ಮುಖ್ಯೋಪಾಧ್ಯಾಯರು ನನ್ನ ಬಳಿ ಬಂದು ಹುಬ್ಬೇರಿಸಿ ಕೇಳಿದರು. 'ಇವರಿಗೆ ರಜೆ ಹೇಗೆ ನೀಡಿದಿರಿ? ಇನ್ನೂ ಎರಡು ಗಂಟೆ ಸಮಯವಿದೆ.'

ನಾನೆಂದೆ: 'ಇಲ್ಲ ಅವರು ಇಂದು ಏಕಾಗ್ರಚಿತ್ತರಾಗಿದ್ದಿಲ್ಲ. ಶಾಂತಿಯ ಆಟ ಆಡುವಾಗ ನನಗಿದು ಕಂಡು ಬಂತು. ಅದಕ್ಕೆ ರಜೆ ನೀಡಿದೆ.'

ಮುಖ್ಯೋಪಾಧ್ಯಾಯರು ಕಠಿಣ ಸ್ವರದಲ್ಲಿ ನುಡಿದರು: 'ನೀವು ಹೇಳದೆ ಕೇಳದೆ ರಜೆ ಕೊಡಬಾರದು. ಒಂದು ವರ್ಗದ ಹುಡುಗರು ಮನೆಗೆ ಹೋದರೆ ಉಳಿದವರು ಹೇಗೆ ಓದಿಯಾರು? ನಿಮ್ಮ ಈ ಪ್ರಯೋಗಗಳು ಇಲ್ಲಿ ನಡೆಯಲಾರವು.' ಪುನಃ ಸಿಟ್ಟಿನಿಂದ ಮುಂದುವರಿಸಿದರು: 'ರೀ ಏಕಾಗ್ರ–ಗೀಕಾಗ್ರ ಬಿಡಿ. ಶಾಂತಿ ಆಟ ಮಾಂಟಿಸ್ಸೋರಿ ಶಾಲೆಯಲ್ಲಿ ಸರಿ. ಇಲ್ಲಿ ಪ್ರಾಥಮಿಕ ಶಾಲೆಯಲ್ಲಿ ಕಪಾಳಕ್ಕೆ ಹೊಡೆದರೇ ಎಲ್ಲರೂ ಸುಮ್ಮನಾಗೋದು. ಆಮೇಲೇನೇ ಎಲ್ಲರೂ ಸರಿಯಾಗಿ ಓದುವುದು. ನೀವು ಹೀಗೇ ಕಲಿಸಿದರೆ ಹನ್ನೆರಡು ತಿಂಗಳಾದ ಮೇಲೆ ಬೇಳೆ ಬೆಂದಿರುವುದು ಕಂಡು ಬರುವುದು. ಇನ್ನು ಮುಂದೆ ಹೀಗಾಗದಂತೆ ನೋಡಿಕೊಳ್ಳಿ.'



ನನಗೆ ನಮ್ಮ ಮುಖ್ಯೋಪಾಧ್ಯಾಯರ ಬಗ್ಗೆ ಕನಿಕರವುಂಟಾಯಿತು. ನಾನೆಂದೆ, 'ಸರ್, ಕಪಾಳಕ್ಕೆ ಹೊಡೆದು ಕಲಿಸುವ ಕೆಲಸ ಬೇರೆಯವರು ಈಗಾಗಲೇ ಮಾಡ್ತಾನೇ ಇದ್ದಾರೆ. ಅದರ ಪರಿಣಾಮ ನಾನೂ ನೋಡುತ್ತಾ ಇದ್ದೇನೆ. ಹುಡುಗರು ಕಾಡು ಕಪಿಗಳಂತಾಗಿದ್ದಾರೆ. ಈ ನಾಲ್ಕು ವರ್ಷಗಳಲ್ಲಿ ಹುಡುಗರು ಕೇವಲ ಕೇಕೆ ಹಾಕುವುದು, ಚಪ್ಪಾಳೆ ತಟ್ಟುವುದನ್ನು ಮಾತ್ರ ಕಲಿತಿದ್ದಾರೆ. ಅವರಿಗೆ ತಮ್ಮ ಶಾಲೆಯ ಬಗ್ಗೆ ಪ್ರೀತಿಯೇ ಇಲ್ಲ. ರಜೆ ಅಂದಕೂಡಲೇ ಕುಣಿಯುತ್ತ ಓಡಿ ಹೋಗ್ತಾರೆ.' ಇದಕ್ಕೆ ಉತ್ತರವಾಗಿ 'ನೀವೇನು ಮಾಡ್ತೀರಿ ನಾವೂ ನೋಡ್ತೀವಿ.' ಎಂದು ಹೇಳಿ ಮುಖ್ಯೋಪಾಧ್ಯಾಯರು ಹೊರಗೆ ಹೋದರು.

ನಾನು ಮೆಲ್ಲಗೆ ಕಾಲು ಹಾಕುತ್ತ ನಿರಾಶೆಯಿಂದ ಮನೆಗೆ ಮರಳಿದೆ. ಮಲಗಿಕೊಂಡೇ ಯೋಚಿಸತೊಡಗಿದೆ: 'ಇದೊಳ್ಳೆ ಪೀಕಲಾಟವಾಯಿತು. ಆದರೆ ಇದರಲ್ಲಿಯೇ ನನ್ನ ನಿಜವಾದ ಪರೀಕ್ಷೆ ಇರುವುದು. ಧೈರ್ಯಗೆಡಬಾರದು. ಶಾಂತಿಯ ಆಟವನ್ನು ಹೀಗೆ ಎಂದಾದರೂ ಆಡುತ್ತಾರೆಯೇ? ಮೊದಲನೇ ದಿನವೇ ಈ ಆಟ ಪ್ರಾರಂಭ ಮಾಡಿದೆ. ಮೊದಲು ನಾನು ಮಕ್ಕಳ ಪರಿಚಯ ಬೆಳಸಿಕೊಳ್ಳಬೇಕು. ನನ್ನ ಬಗ್ಗೆ ಅವರ ಮನಸ್ಸಿನಲ್ಲಿ ಪ್ರೀತಿ ಉಂಟಾಗಬೇಕು. ಆಗ ಅವರು ನನ್ನ ಮಾತು ಕೇಳಿ, ಅದರಂತೆ ನಡೆದಾರು. ಶಾಲೆಯಲ್ಲಿ ರಜೆ ಇಷ್ಟಪಡುವ ಹುಡುಗರೊಡನೆ ಕೆಲಸ ಮಾಡುವುದೆಂದರೆ ಭಗೀರಥನು ಗಂಗೆಯನ್ನು ಭೂಮಿಗೆ ತಂದಂತೆಯೇ ಸರಿ.'

ಎರಡನೇ ದಿನ ಏನು ಕೆಲಸ ಮಾಡಬೇಕು ಎಂಬುದನ್ನು ನಿಶ್ಚಯಿಸಿಕೊಂಡು ಮಲಗಿದೆ. ಆ ರಾತ್ರಿ ಅಂದಿನ ಹಾಗೂ ನಾಳಿನ ಕೆಲಸದ ಕನಸು ಕಾಣುವುದರಲ್ಲಿ ಕಳೆಯಿತು.

## 3

ಶಾಲೆ ಪ್ರಾರಂಭವಾಯಿತು. ನಾನು ತರಗತಿಗೆ ಹೋದೆ. ಹುಡುಗರೆಲ್ಲರೂ ನನ್ನನ್ನು ಸುತ್ತುವರಿದು ನಿಂತುಕೊಂಡು ಯಾವ ಹೆದರಿಕೆಯಿಲ್ಲದೆ ಚೇಷ್ಟೆಮಾಡುತ್ತ ಕೇಳತೊಡಗಿದರು: 'ಗುರುಗಳೇ ಇಂದೂ ರಜೆ ಕೊಡುವಿರಲ್ಲ? ಇಂದೂ ರಜೆ, ರಜೆ, ರಜೆ.'

'ಆಗಲಿ ಇಂದೂ ರಜೆ ಕೊಡುವೆ, ಆದರೆ ಇಡೀ ದಿನ ಅಲ್ಲ, ಕೇವಲ ಎರಡು ಗಂಟೆ. ಮೊದಲು ಒಂದು ಕತೆ ಹೇಳುವೆ. ಎಲ್ಲರೂ ಕೇಳಿ. ಆಮೇಲೆ ಬೇರೆ ವಿಷಯ ಮಾತಾಡೋಣ.'

ನಾನು ಕತೆ ಪ್ರಾರಂಭಿಸಿದೆ. 'ಒಬ್ಬ ರಾಜನಿದ್ದ. ಅವನಿಗೆ ಏಳು ಜನ ರಾಣಿಯರು. ಏಳು ಜನರಿಗೂ ಏಳು ಗಂಡು, ಏಳು ಹೆಣ್ಣು ಮಕ್ಕಳು.'

ಗಡಿಬಿಡಿ, ಗಲಾಟೆಗಳ ಮಧ್ಯದಲ್ಲಿ ಮಕ್ಕಳೆಲ್ಲರೂ ನನ್ನನ್ನು ಮುತ್ತಿದರು. ನಾನು ಕತೆ ಹೇಳುವುದನ್ನು ನಿಲ್ಲಿಸಿ 'ಎಲ್ಲರೂ ಸರಿಯಾಗಿ ಕುಳಿತುಕೊಳ್ಳಿ. ಹೀಗಾದರೆ ನಡೆಯೊಲ್ಲ' ಎಂದೆ. ಹುಡುಗರೆಲ್ಲಾ ನನ್ನ ಸುತ್ತ ಕುಳಿತು ಕತೆ ಹೇಳಬೇಕೆಂದು ಕೇಳಿದರು.

ನಾನು ಮುಗುಳುನಗುತ್ತ ಕತೆ ಪ್ರಾರಂಭಿಸಿದೆ.

'ಆ ಏಳು ರಾಜಕುಮಾರಿಯರಿಗೆ ಏಳು ಅರಮನೆಗಳು, ಅವುಗಳಲ್ಲಿ ಏಳೇಳು ಮುತ್ತಿನ ಗಿಡಗಳು.' ಮಕ್ಕಳು ಬಿಟ್ಟ ಕಣ್ಣು ಬಿಟ್ಟಂತೇ ಕತೆ ಕೇಳುತ್ತಿದ್ದರು. ಇಡೀ ವರ್ಗದಲ್ಲಿ ಶಾಂತಿ ನೆಲೆಸಿತ್ತು. ಯಾರೂ ಮಾತನಾಡುತ್ತಿರಲಿಲ್ಲ. ಮುಖ್ಯೋಪಾಧ್ಯಾಯರು ಇದೇನು ಈ ದಿನ ತರಗತಿಯಲ್ಲಿ ಇಷ್ಟೊಂದು ಶಾಂತಿಯಿದೆ ಎಂದು ನೋಡಲು ತರಗತಿಗೆ ಬಂದರು. 'ಕತೆ ಹೇಳುತ್ತಿದ್ದೀರಾ' ಎಂದು ಕೇಳಿದರು.


'ಹೌದು, ಕತೆ ಮತ್ತು ಈ ಹೊಸ ಬಗೆಯ ಶಾಂತಿಯ ಆಟ ಎರಡೂ ನಡೆದಿವೆ.'

ಅವರು ಹೊರಟು ಹೋದರು. ನನ್ನ ಕತೆ ಮುಂದುವರೆಯಿತು. ಪಕ್ಕದ ತರಗತಿಯಲ್ಲಿ ಸಾಕಷ್ಟು ಕೋಲಾಹಲ ನಡೆದಿತ್ತು. ನಾನೆಂದೆ: 'ನೋಡಿ, ಈ ಗಲಾಟೆಯಿಂದ ನಮಗೆ ತೊಂದರೆಯಾಗಿದೆ.' ಮಕ್ಕಳೆಲ್ಲಾ ನನ್ನ ಮಾತನ್ನು ಒಪ್ಪಿದರು.

ಕತೆಯನ್ನು ಅರ್ಧ ಹೇಳಿದ ನಂತರ ನಿಲ್ಲಿಸಿ 'ಮಕ್ಕಳೇ, ರಜೆ ಬೇಕಾದರೆ ಹೇಳಿ. ಕತೆಯನ್ನು ಇಲ್ಲಿಗೇ ನಿಲ್ಲಿಸುತ್ತೇನೆ. ಇಲ್ಲದಿದ್ದರೆ ಮುಂದುವರೆಸುತ್ತೇನೆ' ಎಂದೆ.

ಎಲ್ಲರೂ 'ಕತೆ ಬೇಕು, ನಮಗೆ ರಜೆ ಬೇಡ' ಎಂದರು.

'ಆಗಲಿ, ಕತೆಯನ್ನೇ ಕೇಳಿ. ಆದರೆ ನಡುವೆ ಸ್ವಲ್ಪ ಬೇರೆ ವಿಷಯ ಚರ್ಚಿಸೋಣ. ಆಮೇಲೆ ಗಂಟೆ ಬಾರಿಸುವವರೆಗೂ ಕತೆಯನ್ನೇ ಹೇಳುವೆ.'



ಹುಡುಗರು ಕಣ್ಣು ಮಿಟುಕಿಸದೆ ಕತೆ ಕೇಳುತ್ತಿದ್ದರು.
ಯಾರೂ ಮಾತಾಡುತ್ತಿರಲಿಲ್ಲ, ಅಲುಗಾಡುತ್ತಿರಲಿಲ್ಲ. ತರಗತಿಯಲ್ಲಿ ಶಾಂತಿ ನೆಲೆಸಿತ್ತು.



ಒಬ್ಬ ಹುಡುಗನೆಂದ: 'ನಾಳೆ ಚರ್ಚೆ ಮಾಡೋಣ ಗುರುಗಳೆ, ಈಗಲೇ ಕತೆ ಮುಗಿಸಿಬಿಡಿ.'

ಕತೆ ಬಹಳ ದೊಡ್ಡದಿದೆ. ನಾಲ್ಕು ದಿನಗಳವರೆಗೆ....

ಆಗ ಎಲ್ಲರೂ 'ಓ....ಹೊ.... ಇಷ್ಟು ದೊಡ್ಡದಿದೆಯೆ? ಅಂದರೆ ಬಹಳ ಒಳ್ಳೆಯದಾಯಿತು.' ಎಂದು ಕುಣಿದಾಡಿದರು.

ನಾನು ಹಾಜರಿ ಪುಸ್ತಕ ತೆಗೆದು ಹೆಸರುಗಳನ್ನು ಬರೆಯಲು ಪ್ರಾರಂಭಿಸಿದೆ. ಎಲ್ಲರೂ ಬೇಗ ಬೇಗನೆ ತಮ್ಮ ಹೆಸರು ಹೇಳಿ ಬರೆಸಿದರು. 'ನೋಡಿ ಇನ್ನು ಮೇಲೆ ನಾವು ಕತೆ ಪ್ರಾರಂಭ ಮಾಡುವುದಕ್ಕಿಂತ ಮೊದಲು, ಹಾಜರಿ ಹಾಕೋಣ, ಆಮೇಲೆ ಕತೆ ಹೇಳುವೆ.' ಅನಂತರ ಗಂಟೆ ಬಾರಿಸುವವರೆಗೂ ನಾನು ಕತೆ ಮುಂದುವರೆಸಿದೆ. ವೇಳೆಯಾಗಿತ್ತು, ಆದರೆ ಮಕ್ಕಳು ಇನ್ನೂ ಕುಳಿತು ಕೊಂಡು 'ಕತೆ ಹೇಳಿ' ಎಂದು ಆಗ್ರಹ ಪಡಿಸುತ್ತಿದ್ದರು.ನಾನು ಹೇಳಿದೆ 'ಮಕ್ಕಳೇ ಈಗ ಸಾಕು, ಉಳಿದದ್ದು ನಾಳೆ. ನಾಳೆ ನಿಮಗೆ ರಜೆ ಬೇಕೋ? ಕತೆ ಬೇಕೋ? ಎಲ್ಲರೂ ಕೂಡಲೇ 'ಕತೆ, ಕತೆ, ಕತೆ' ಎಂದು ಹೇಳುತ್ತಾ ಹೊರಟು ಹೋದರು.

ನಿನ್ನೆ 'ರಜೆ...ರಜೆ...ರಜೆ...' ಎಂಬ ಶಬ್ದ ಪ್ರತಿಧ್ವನಿಸಿದ್ದ ವಾತಾವರಣದಲ್ಲಿಯೇ ಇಂದು 'ಕತೆ, ಕತೆ, ಕತೆ' ಎಂಬ ಶಬ್ದಗಳು ಮೊಳಗಿದವು.

ಅಂತೂ ಒಂದು ದಿನ ಚೆನ್ನಾಗಿ ಕಳೆಯಿತು. ಕತೆ ಒಂದು ಚಮತ್ಕಾರ ಎನ್ನುವುದು ಹದಿನಾರಾಣೆ ಸತ್ಯ.

## 4

ಮರುದಿನ ಬೆಳಿಗ್ಗೆ ಎಲ್ಲ ಹುಡುಗರು ನಗುನಗುತ್ತ ಬಂದರು. ನಾನು ವರ್ಗದಲ್ಲಿ ಹೋದೊಡನೆಯೇ ಹುಡುಗರು ಒಬ್ಬರ ಮೇಲೊಬ್ಬರು ಬೀಳುತ್ತ ನನ್ನನ್ನು ಸುತ್ತುವರಿದು ಕುಳಿತುಕೊಂಡರು.

'ಗುರುಗಳೆ, ಈಗ ಕತೆ ಹೇಳಿರಿ' ಎಂದರು. 'ಮೊದಲು ಹಾಜರಿ, ಸ್ವಲ್ಪ ಮಾತುಕತೆ, ಆಮೇಲೆ ನಮ್ಮ ಕತೆ' ಎಂದು ಹೇಳಿ, ಜೇಬಿನಿಂದ ಬಳಪವನ್ನು ತೆಗೆದು ಒಂದು ವರ್ತುಲವನ್ನು ಬರೆದೆ. 'ನೋಡಿ, ಇನ್ನು ಮೇಲೆ ಎಲ್ಲರೂ ಇದರ ಮೇಲೆ ಬಂದು ಕುಳಿತುಕೊಳ್ಳಬೇಕು, ಇದು ನನ್ನ ಸ್ಥಳ. ಇಲ್ಲಿ ಕುಳಿತು ನಾನು ಕತೆ ಹೇಳುವೆ.'

ಎಲ್ಲರೂ ಕುಳಿತ ನಂತರ ನಾನು ಕುಳಿತು, ಹಾಜರಿಯ ನಂತರ, ಕತೆ ಹೇಳಲಾರಂಭಿಸಿದೆ. ಮಂತ್ರಮುಗ್ಧರಾಗಿ ಕತೆ ಕೇಳುತ್ತಿದ್ದರು. ನಡುವೆ ಕತೆ ನಿಲ್ಲಿಸಿ, ಕತೆ ನಿಮಗೆ ಹೇಗೆ ಅನಿಸುತ್ತದೆ? ಎಂದು ಕೇಳಿದೆ.

'ಕತೆ ನಮಗೆ ಬಹಳ ಇಷ್ಟವೆನಿಸುತ್ತದೆ, ಗುರುಗಳೆ.'

‘ಕತೆ ಕೇಳುವುದು ನಿಮಗೆ ಹೇಗೆ ಇಷ್ಟವೊ ಹಾಗೆಯೇ ಅಂತಹ ಕತೆಗಳನ್ನು ಓದುವುದು ನಿಮಗೆ ಸೇರುತ್ತದೆಯೇ?’

‘ಹೌದು ನಮಗೆ ಓದುವುದು ಇಷ್ಟ. ಆದರೆ ಅಂತಹ ಪುಸ್ತಕಗಳು ಎಲ್ಲಿ ಸಿಗುತ್ತವೆ?’

‘ನಾನು ಕತೆ ಪುಸ್ತಕಗಳನ್ನು ತಂದು ಕೊಟ್ಟರೆ ನೀವು ಓದುವಿರಾ?’

‘ಅವಶ್ಯವಾಗಿ.’

ಅಷ್ಟರಲ್ಲಿ ಒಬ್ಬ ಜಾಣ ಹುಡುಗನೆಂದ ‘ಆದರೆ ನೀವು ಕತೆ ಹೇಳಲೇ ಬೇಕು. ನಮ್ಮಷ್ಟಕ್ಕೆ ನಾವೇ ಓದುವುದೆಂದರೆ ಆಗುವುದಿಲ್ಲ, ತಿಳಿಯುವುದಿಲ್ಲ ಕೂಡ.’

ನಾನು ‘ಆಗಲಿ’ ಎಂದು ಕತೆ ಮುಂದುವರೆಸಿದೆ.

ಗಂಟೆ ಬಾರಿಸಿತು, ನನ್ನ ಕತೆ ಅರ್ಧ ಉಳಿಯಿತು. ಎಲ್ಲರೂ ನನ್ನನ್ನು ಸುತ್ತುವರೆದು ನಿಂತುಕೊಂಡರು. ಕೆಲವರು ನನ್ನನ್ನು ಪ್ರೀತಿಯಿಂದ ನೋಡತೊಡಗಿದರು. ಇನ್ನು ಹಲವರು ಮೆಲ್ಲಗೆ ನನ್ನ ಕೈಯನ್ನು ಮುಟ್ಟಿ ಮನಸ್ಸಿನಲ್ಲಿಯೇ ಆನಂದ ಪಟ್ಟರು.

ಆಗ ನಾನು ‘ಹೋಗಿ .....ಎಲ್ಲರೂ ಮನೆಗೆ ಹೋಗಿ’ ಎಂದೆ.

‘ಇಲ್ಲ ... ನಾವು ಹೋಗುವುದಿಲ್ಲ, ಸಂಜೆಯವರೆಗೆ ಕುಳಿತುಕೊಳ್ಳುತ್ತೇವೆ’ ಎಂದರು ಹುಡುಗರು.

ಅಂತೂ ಹುಡುಗರು ಹೋದರು. ಕೆಲವು ಶಿಕ್ಷಕರು ನನ್ನ ಬಳಿ ಬಂದು, ‘ಏನು ಸ್ವಾಮಿ.. ಇದೇನಿದು ನೀವು ಮಾಡುತ್ತಿರುವುದು? ನಮ್ಮ ವರ್ಗದ ಹುಡುಗರೂ ಕತೆ ಬೇಕು ಎಂದು ಆರಂಭಿಸಿದ್ದಾರೆ. ಓದುವುದರಲ್ಲಿ ಲಕ್ಷ್ಯವೇ ಇಲ್ಲ, ಅವರು ನಾವು ಕತೆ ಕೇಳಲು ಹೋಗುತ್ತೇವೆ , ಇಲ್ಲವಾದರೆ ನೀವೇ ಕತೆ ಹೇಳಿ ಎಂದು ಪೀಡಿಸುತ್ತಾರೆ.’ ಎಂದು ಹೇಳಿದರು.

‘ಏನಾದರೂ ಸ್ವಲ್ಪ ಹೇಳಿ’ ಎಂದೆ.

ಅವರೆಂದರು ‘ಇಲ್ಲಿ ಕತೆ ಹೇಳಲು ಯಾರಿಗೆ ಬರುತ್ತದೆ?’

ನಾನು ಮೀಸೆಯಲ್ಲಿಯೇ ಮುಗುಳ್ನಕ್ಕೆ.

## 5

ಮರುದಿನ ಭಾನುವಾರ. ನಾನು ಅಂದು ಮೇಲಧಿಕಾರಿಗಳನ್ನು ಕಾಣಲು ಹೋದೆ.

‘ಏನ್ರೀ ಇಡೀ ದಿನ ನೀವು ಕತೆ ಹೇಳುವುದರಲ್ಲಿಯೇ ಕಳೆಯುತ್ತೀರೆಂದು ಮುಖ್ಯೋಪಾಧ್ಯಾಯರು ದೂರಿದ್ದಾರೆ.’

‘ಹೌದು ಈಗಂತೂ ಕತೆಯೇ ನಡೆದಿದೆ.’

‘ಅಂದರೆ ನೀವಂದುಕೊಂಡ ಪ್ರಯೋಗಗಳನ್ನು ಯಾವಾಗ ಮಾಡುವಿರಿ? ಅಭ್ಯಾಸ ಹೇಗೆ ಪೂರ್ಣವಾಗುವುದು?’



‘ಸರ್, ಪ್ರಯೋಗ ಈಗಲೂ ನಡೆದಿದೆ. ಮಕ್ಕಳನ್ನು ಹಾಗೂ ಶಿಕ್ಷಕರನ್ನು ಪರಸ್ಪರ ಸಮೀಪಕ್ಕೆ ತರುವುದರಲ್ಲಿ ಕತೆಯು ಎಷ್ಟು ಚಮತ್ಕಾರಿಯಾಗಿದೆ ಎಂಬುದರ ಅನುಭವವನ್ನು ಸ್ವತಃ ನಾನು ಪಡೆಯುತ್ತಿದ್ದೇನೆ. ಮೊದಲನೇ ದಿನ ನನ್ನ ಮಾತನ್ನು ಕೇಳದೆ ಹಾಹಾ, ಹಿಹಿ ಎಂದು ನನ್ನನ್ನು ಪೀಡಿಸಿದವರೇ ಕತೆ ಕೇಳುತ್ತ ಶಾಂತರಾಗಿದ್ದರೆ. ನನ್ನ ಕಡೆಗೆ ಪ್ರೀತಿಯಿಂದ ನೋಡುತ್ತಾರೆ. ನಾನು ಹೇಳಿದ್ದನ್ನು ಕೇಳುತ್ತಾರೆ. ಹೇಳಿದ ಹಾಗೆ ಕುಳಿತುಕೊಳ್ಳುತ್ತಾರೆ. ಸುಮ್ಮನಿರಿ, ಗಲಾಟೆ ಮಾಡಬೇಡಿ ಎಂದು ಹೇಳುವ ಪ್ರಸಂಗವೇ ನನಗೆ ಬರುವುದಿಲ್ಲ. ವರ್ಗದಿಂದ ಹೊರಗೆ ಹಾಕಿದರೂ ಹೋಗುವುದಿಲ್ಲ.’

‘ಓಹೋ ತಿಳಿಯಿತು, ಸರಿ ನೀವು ಹೊಸರೀತಿಯಿಂದ ಯಾವಾಗ ಕಲಿಸಲು ಆರಂಭಿಸುವಿರಿ?’

‘ಇದೇ ಹೊಸ ರೀತಿಯಿಂದ ಕಲಿಸುವ ಉಪಾಯ. ಕತೆಯಿಂದ ಶಿಸ್ತಿನ ಪಾಠ ಕಲಿಸುತ್ತೇನೆ. ಏಕಾಗ್ರತೆ ಬರುತ್ತದೆ. ಭಾಷಾಶುದ್ಧಿ ಮತ್ತು ಸಾಹಿತ್ಯದ ಪರಿಚಯವನ್ನು ಮಾಡಿಕೊಡುತ್ತಿರುವೆ. ನಾಳಿನಿಂದ ಇನ್ನೂ ಕೆಲವು ಸಂಗತಿಗಳನ್ನು ಕಲಿಸಲಾರಂಭಿಸುವೆ.’

‘ಆದರೆ ಕತೆ ಹೇಳುವುದರಲ್ಲಿಯೇ ಇಡೀ ವರ್ಷ ಕಳೆಯಬೇಡಿ.’

‘ತಾವು ಅದರ ಚಿಂತೆ ಬಿಡಿ ಸರ್.’

## 6

ಕತೆ ಕೇಳಲು ಎಲ್ಲ ಮಕ್ಕಳು ಗೋಲಾಕಾರವಾಗಿ ಕುಳಿತಿದ್ದರು. ನಾನು ಬೋರ್ಡಿನ ಮೇಲೆ ಬರೆದೆ.

‘ಇಂದಿನ ಕೆಲಸ – ಹಾಜರಿ, ಮಾತುಕತೆ ನಂತರ ಕತೆ.’ ಹಾಜರಿ ತೆಗೆದುಕೊಂಡ ಮೇಲೆ ನಾನು ಕೇಳಿದೆ ‘ಎಲ್ಲಿ, ನಿಮ್ಮ ಉಗುರುಗಳು ಎಷ್ಟು ಬೆಳೆದಿವೆ ನೋಡೋಣ. ಎಲ್ಲರೂ ಎದ್ದು ನಿಂತು ನಿಮ್ಮ ಕೈ ತೋರಿಸಿರಿ.’

ಪ್ರತಿಯೊಬ್ಬ ಬಾಲಕನ ಉಗುರುಗಳು ಬೆಳೆದಿದ್ದವು. ಅವುಗಳಲ್ಲಿ ಸಾಕಷ್ಟು ಕೊಳೆ ತುಂಬಿತ್ತು.

ಪುನಃ ನಾನೆಂದೆ, ‘ನಿಮ್ಮ ಟೊಪ್ಪಿಗೆಗಳನ್ನು ಕೈಯಲ್ಲಿ ತೆಗೆದುಕೊಂಡು ನೋಡಿ. ಎಷ್ಟು ಹೊಲಸಾಗಿವೆ, ಎಷ್ಟು ಹರಿದಿವೆ.’

ಎಲ್ಲರೂ ತಮ್ಮ ಟೊಪ್ಪಿಗೆಗಳನ್ನು ನೋಡಿಕೊಂಡರು. ಕೆಲವರ ಟೊಪ್ಪಿಗೆಗಳು ಮಾತ್ರ ಸ್ವಚ್ಛವಾಗಿದ್ದವು.

‘ನಿಮ್ಮ ಅಂಗಿಯ ಗುಂಡಿಗಳು ಸರಿಯಾಗಿದೆಯೇ ನೋಡಿಕೊಳ್ಳಿ. ಇಂದು ಇಷ್ಟು ಸಾಕು. ಹೆಚ್ಚಿನ ಪರೀಕ್ಷೆ ಬೇಡ. ಕತೆಗೆ ವಿಳಂಬವಾಗುತ್ತದೆ. ಇಷ್ಟು ಹೇಳಿ ನಾನು ಕತೆ ಪ್ರಾರಂಭಿಸಿದೆ.

ಕತೆ ನಡೆದಾಗ ಒಬ್ಬ ಬಾಲಕ ಕೇಳಿದ 'ಕತೆಗಳ ಪುಸ್ತಕ ಯಾವಾಗ ಕೊಡುವಿರಿ ಗುರುಗಳೇ?'

'ಒಂದೆರಡು ದಿನಗಳಲ್ಲಿ ತರುವೆ. ಕತೆ ಪುಸ್ತಕಗಳನ್ನು ಓದಲು ಬಯಸುವವರು ಯಾರು ಕೈ ಎತ್ತಿ.'

ಪ್ರತಿಯೊಬ್ಬ ಬಾಲಕನೂ ಕೈ ಎತ್ತಿದ.

ಈಗಾಗಲೇ ಕೆಲವರು ಮಾತ್ರ 3, 4 ಕತೆಗಳನ್ನು ಓದಿದ್ದರು. ಅವರು ನಾಲ್ಕನೆಯ ವರ್ಗಕ್ಕೆ ಬಂದಿದ್ದರೂ ತಮ್ಮ ಪಠ್ಯ ಪುಸ್ತಕಗಳನ್ನು ಬಿಟ್ಟು ಬೇರೆ ಪುಸ್ತಕಗಳನ್ನು ಓದಿದ್ದು ಬಹಳ ಕಡಿಮೆ.

'ಮಾಸಪತ್ರಿಕೆಗಳನ್ನು ಯಾರಾದರೂ ಓದಿದ್ದೀರಾ?', ಇಬ್ಬರು ಹುಡುಗರು ಹೇಳಿದರು.

'ನಾವು ಬಾಲಸುಧಾ ಓದುತ್ತೇವೆ ಗುರುಗಳೇ...'

'ಒಳ್ಳೆಯದು, ನಾನು ಕತೆ ಪುಸ್ತಕಗಳನ್ನು ತಂದುಕೊಡುವೆ, ನೀವು ಚೆನ್ನಾಗಿ ಓದಿ. ಕತೆ ಓದಿ ಓದಿ ಬೇಜಾರಾಗಬೇಕು, ಅಷ್ಟೊಂದು ಕತೆ ಪುಸ್ತಕಗಳನ್ನು ತಂದು ಕೊಡುವೆ...'

ಎಲ್ಲರಿಗೂ ಬಹಳ ಸಂತೋಷವಾಯಿತು.

ಆಮೇಲೆ ಕತೆ ಮುಂದುವರೆಯಿತು. ಶಾಲೆ ಬಿಟ್ಟಿತು. 'ಮಕ್ಕಳೇ ಕೇಳಿ, ನಾಳೆ ಈ ಉಗುರುಗಳನ್ನು ಸರಿಯಾಗಿ ಕತ್ತರಿಸಿಕೊಂಡು ಬನ್ನಿ' ಎಂದು ಹೇಳಿದೆ.

ಒಬ್ಬನೆಂದ: 'ನಾನು ಹಲ್ಲಿನಿಂದ ಕತ್ತರಿಸಿಕೊಳ್ಳುವೆ...'

'ಹಾಗೆಲ್ಲ ಮಾಡಬಾರದು ಮಗು. ಉಗುರನ್ನು ಯಾವಾಗಲೂ ಕತ್ತರಿ ಅಥವಾ ಚಾಕುವಿನಿಂದ ಕತ್ತರಿಸಿಕೊಳ್ಳಬೇಕು.'

ಪುನಃ ಹೇಳಿದೆ. 'ಈಗ ನಾವೊಂದು ತಮಾಷೆ ಮಾಡೋಣ'. ಎಲ್ಲರೂ 'ಅದೇನು ಗುರುಗಳೇ..' ಎಂದು ಪ್ರಶ್ನಿಸಿದರು.

'ನೀವೆಲ್ಲ ಬಕ್ಕತಲೆಯಿಂದ ಶಾಲೆಗೆ ಬನ್ನಿ. ಈ ಹೊಲಸು ಟೊಪ್ಪಿಗೆ ಯಾಕೆ? ನಮಗೆ ಟೊಪ್ಪಿಗೆಯ ಅವಶ್ಯಕತೆಯಾದರೂ ಏನಿದೆ?.

ಎಲ್ಲರೂ ನಕ್ಕುಬಿಟ್ಟರು. 'ಸರಿ ಇದೊಳ್ಳೆ ಮಾತು. ಯಾರಾದರೂ ಬಕ್ಕತಲೆಯಿಂದ ಶಾಲೆಗೆ ಬರುತ್ತಾರೆಯೇ? ಆ ಮುಖ್ಯೋಪಾಧ್ಯಾಯರು ಸಿಟ್ಟಾಗುವುದಿಲ್ಲವೇ?'

'ನಾನು ನಾಳೆಯಿಂದ ಬಕ್ಕತಲೆಯಿಂದ ಬರುವೆ. ನೀವೆಲ್ಲರೂ ಹಾಗೆಯೇ ಬನ್ನಿ.'

'ತಂದೆಯವರು ಬೇಡವೆಂದರೆ?'

'ಹೇಳಿಬಿಡಿ– ಈ ವ್ಯರ್ಥ ಭಾರ ಯಾಕೆ ಎಂದು. ಹೊಲಸು ಟೊಪ್ಪಿಗೆ ಹಾಕಿಕೊಳ್ಳುವುದಕ್ಕಿಂತ ಹಾಕಿಕೊಳ್ಳದಿರುವುದೇ ಲೇಸು.'

ನಾನು ಪುನಃ ಹೇಳಿದೆ, 'ನೋಡಿ, ಎಲ್ಲರೂ ಅಂಗಿಯ ಗುಂಡಿಗಳನ್ನು ಹಚ್ಚಿಕೊಂಡು ಬನ್ನಿ. ಹೀಗೆಯೇ ಸರಿ ಕಾಣುವುದಿಲ್ಲ.'

ಎಲ್ಲರೂ ಯೋಚನಾಮಗ್ನರಾಗಿ ಮನೆಗೆ ಹೋದರು.



ದಾರಿಯಲ್ಲಿ ಮುಖ್ಯೋಪಾಧ್ಯಾಯರು ಭೆಟ್ಟಿಯಾದರು. 'ನೀವು ಏನಾದರೊಂದು ಮಾಡುತ್ತಲೇ ಇರುವಿರಿ. ಈ ಎಲ್ಲ ನಾಟಕ ಯಾಕೆ? ಉಗುರು ಕತ್ತರಿಸುವುದು, ಗುಂಡಿ ಹಚ್ಚುವುದು ಅದು, ಇದು? ಹೊಸರೀತಿಯಿಂದ ಪಾಠಮಾಡಲು ಬಂದಿರುವಿರಿ ಅಂದ ಮೇಲೆ ಪಾಠಮಾಡಿ; ಇವು ಅವರ ತಾಯಿ ತಂದೆಯ ಕೆಲಸ. ಅವರು ಮಾಡುತ್ತಾರೆ. ಅದನ್ನೆಲ್ಲಾ ಕಟ್ಟಿಕೊಂಡು ನಮಗೇನಾಗಬೇಕು? ಹುಡುಗರಿಗೆ ಬಕ್ಕತಲೆಯಿಂದ ಶಾಲೆಗೆ ಬರಲಿಕ್ಕೆ ನಾನು ಅವಕಾಶ ಕೊಡವುದಿಲ್ಲ. ಇದು ಅಸಭ್ಯತೆ ಆಗುತ್ತದೆ. ಇದಕ್ಕೆಲ್ಲ ಮೇಲಿನ ಅಧಿಕಾರಿಗಳ ಅಪ್ಪಣೆ ಬೇಕಾಗುತ್ತದೆ.'

'ಸರ್, ಕಲಿಸುವ ಹೊಸ ರೀತಿಗಳೆಂದರೆ ಇವೇ. ಹೊಲಸು ಮತ್ತು ಅಸಭ್ಯ ಹುಡುಗರಿಗೆ ಮೊದಲು ಕಲಿಸುವುದಾದರೂ ಏನು? ನೀವೇ ನೋಡಿ. ನಾನು ಇದನ್ನು ಅವರಿಗೆ ಹೇಳಿದಾಗ ಅವರೆಲ್ಲ ನಾಚಿಕೊಂಡರು. ಈ ರೀತಿ ಹೊಲಸು ಸರಿಯಲ್ಲ ಅನ್ನುವ ವಿಚಾರ ಅವರಲ್ಲೂ ಬಂದಿದೆ. ಮುಂದೆ ಬಹಳಷ್ಟು ಜನ ಸ್ವಚ್ಛವಾಗಿರಲು ಪ್ರಯತ್ನಿಸುತ್ತಾರೆಂದು ನನಗನಿಸುತ್ತದೆ. ಇನ್ನು ಟೊಪ್ಪಿಗೆಯ ವಿಚಾರ. ನಾನು ಮೇಲಧಿಕಾರಿಗಳ ಅಭಿಪ್ರಾಯ ತಿಳಿದುಕೊಳ್ಳುತ್ತೇನೆ. ಅವರ ಅಜ್ಞೆ ದೊರೆಯಲಿಲ್ಲ ಅಂದರೆ ಈ ಬದಲಾವಣೆ ತರೋದಿಲ್ಲ.'

ನಾನು ಮನೆಗೆ ಹೋಗಿ ಊಟ ಮಾಡಿದ ಕೂಡಲೇ ಮೇಲಧಿಕಾರಿಗಳ ಮನೆಗೆ ಹೋದೆ.

'ಏನು ಈಗ ಬಂದಿರಿ..'

'ಒಂದು ವಿಷಯದಲ್ಲಿ ತಮ್ಮ ಅಭಿಪ್ರಾಯ ತಿಳಿದುಕೊಳ್ಳಬೇಕಾಗಿತ್ತು...'

'ಹೇಳಿ, ಏನು ಸಮಾಚಾರ?'

'ವರ್ಗದಲ್ಲಿ ನನ್ನ ವಿದ್ಯಾರ್ಥಿಗಳು ಬಕ್ಕತಲೆಯಿಂದ ಬರಬಹುದಲ್ಲವೇ?...'

'ಯಾಕೆ?'

'ಅವರ ಟೊಪ್ಪಿಗೆಗಳು ಚಿತ್ರ ವಿಚಿತ್ರವಾಗಿಯೂ, ಹೊಲಸಾಗಿಯೂ ಇರುತ್ತವೆ. ಆದ್ದರಿಂದ ಟೊಪ್ಪಿಗೆ ಇಲ್ಲದೆ ಬಂದರೆ ಏನು ಕೆಡುಕು? ಈ ವಯಸ್ಸಿನಲ್ಲಿ ಅವರ ತಲೆಯ ಮೇಲೆ ಈ ಭಾರ ಇರದೇ ಹೋದರೆ ಏನು ತೊಂದರೆ?'

'ಆದರೆ ಜನರಿಗೆ ಈ ವಿಷಯ ವಿಚಿತ್ರ ಹಾಗೂ ಹಾಸ್ಯಾಸ್ಪದ ಅಂತ ಅನ್ನಿಸುವಿದಿಲ್ಲವೇ?'

'ಅದು ಸರಿಯೇ. ಇದರ ಬಗ್ಗೆ ತಮ್ಮ ಅಭಿಪ್ರಾಯವೇನು?'

'ನನ್ನ ಅಭಿಪ್ರಾಯವಿಷ್ಟೇ. ತಾವು ಪ್ರಯೋಗದ ಕ್ರಮದಲ್ಲಿ ಇಂಥ ಸಾಮಾಜಿಕ ವಿಷಯಗಳನ್ನು ಮುಟ್ಟದಿರುವುದೇ ಒಳ್ಳೆಯದು. ಪಾಠಶಾಲೆಯ ಗೋಡೆಗಳ ಮಧ್ಯದಲ್ಲಿಯೇ ಕುಳಿತುಕೊಂಡು ಇಂದಿನ ಶಿಕ್ಷಣ ವ್ಯವಸ್ಥೆಯಲ್ಲಿ ಯಾವ ಬದಲಾವಣೆ ತರಬಹುದು ಎಂಬುದನ್ನಷ್ಟೇ ಯೋಚಿಸಬೇಕು. ಟೊಪ್ಪಿಗೆ ಗಿಪ್ಪಿಗೆ ಕೈ ಬಿಡಿ.'

ನಾನು ಪುನಃ ಹೇಳಿದೆ: 'ತರಗತಿಯ ಒಳಗೆ ಹುಡುಗರು ಟೊಪ್ಪಿಗೆ ತೆಗೆದಿಟ್ಟು ಕೆಲಸ ಮಾಡಿದರೆ ತಮ್ಮ ಆಕ್ಷೇಪಣೆ ಏನೂ ಇಲ್ಲವಷ್ಟೆ?'

‘ಇಲ್ಲ, ಇಲ್ಲ, ಎಳ್ಳಷ್ಟೂ ಇಲ್ಲ. ತರಗತಿಯಲ್ಲಿ ತಮಗೆ ಬೇಕಾದ ಸುಧಾರಣೆ ಮಾಡಿಕೊಳ್ಳಿ. ಹೀಗೆ ಮಾಡುತ್ತಾ ಮಾಡುತ್ತಾ ಎಲ್ಲರಿಗೂ ಒಪ್ಪಿಗೆ ಆದರೆ ಟೊಪ್ಪಿಗೆ ಧರಿಸಲೇಬೇಕು ಎಂಬ ಹಟವೇನೂ ನನಗಿಲ್ಲ..’

‘ಆಗಲಿ, ಇನ್ನೊಂದು ಮಾತು. ತರಗತಿಯಲ್ಲಿ ಒಂದು ಚಿಕ್ಕ ಪುಸ್ತಕಾಲಯವನ್ನು ಸ್ಥಾಪಿಸಬೇಕಾಗಿದೆ. ಅದಕ್ಕೆ ಸ್ವಲ್ಪ ಹಣ ಸಿಗಬಹುದೇ?...’

ಅಧಿಕಾರಿಗಳೆಂದರು: ‘ಹಣ? ಹಣ ಹೇಗೆ ದೊರೆತೀತು? ಈ ಪ್ರಯೋಗ ಒಂದು ದೃಷ್ಟಿಯಿಂದ ನಿಮ್ಮ ನಮ್ಮ ನಡುವಿನದು. ಬಜೆಟಿನಲ್ಲಿ ಎಷ್ಟು ಹಣವಿದೆಯೋ ಅದರಿಂದಲೇ ಶಾಲೆ ನಡೆಸಬೇಕು. ನಿಮ್ಮ ವರ್ಗಕ್ಕೆ 8-10 ಆಣೆ ದೊರೆಯುವುದು. ಅಷ್ಟರಲ್ಲಿಯೇ ಸಾಗಿಸಬೇಕು.’

‘ಹೇಗೆ ಮಾಡುವುದು?’ ಎಂದು ನಾನಂದೆ.

ಅಧಿಕಾರಿಗಳೆಂದರು. "ಈಗ ಈ ವಿಚಾರ ಅಲ್ಲಿಯೇ ಬಿಡಿ." ನಾನು ಹೇಳಿದೆ ‘ನನ್ನ ಬಳಿ ಇನ್ನೂ ಒಂದು ಯೋಜನೆ ಇದೆ. ಅದೇನೆಂದರೆ ಪ್ರತಿಯೊಬ್ಬ ಬಾಲಕನೂ ಪಠ್ಯ ಪುಸ್ತಕಗಳನ್ನು ಕೊಂಡುಕೊಳ್ಳಲೇಬೇಕಾಗುತ್ತದೆ. ನಾಲ್ಕನೆಯ ತರಗತಿಯ ಹಿಂದೀ ಪುಸ್ತಕ, ಅದರ ಗೈಡ್ ಮತ್ತು ಇತಿಹಾಸದ ಎಲ್ಲ ಪುಸ್ತಕಗಳನ್ನು ಕೊಂಡುಕೊಳ್ಳಲೇಬೇಕು. ಅವುಗಳ ಬದಲು ಅದೇ ದುಡ್ಡಿನಲ್ಲಿ ಒಳ್ಳೆಯ ಇತರೆ ಪುಸ್ತಕಗಳನ್ನು ಖರೀದಿಸಿ ಒಂದು ಪುಸ್ತಕಾಲಯವನ್ನು ಮಾಡಬಹುದು.’

‘ಸರಿ. ಪಠ್ಯ ಪುಸ್ತಕಗಳಿಲ್ಲದೇ ನೀವು ಹೇಗೆ ಕಲಿಸುವಿರಿ?’

‘ಇದರ ಬಗ್ಗೆ ನಾನು ಆಲೋಚಿಸಿದ್ದೇನೆ. ಓದುವ ಪದ್ಧತಿಯಲ್ಲೇ ಬದಲಾವಣೆ ಮಾಡುವುದರ ಬಗೆಗೆ ನನಗೆ ಪೂರ್ಣ ವಿಶ್ವಾಸವಿದೆ. ನಾನು ತಮಗೆ ಈ ಕೆಲಸ ಮಾಡಿ ತೋರಿಸಿ ತಮ್ಮ ಪೂರ್ಣ ವಿಶ್ವಾಸ ಗಳಿಸಬಲ್ಲೆ.’

‘ಆಗಲಿ, ಪ್ರಯೋಗ ನಿಮ್ಮದು. ಫಲಿತಾಂಶವನ್ನು ನೀವೇ ತೋರಿಸುವವರು. ಆದರೂ ನಾನೊಂದು ಕಿವಿಮಾತು ನಿಮಗೆ ಹೇಳಲೇಬೇಕು. ಹುಡುಗರನ್ನು ಉಂಡಾಡಿಗಳನ್ನಾಗಿ ಮಾಡಬೇಡಿ. ಪ್ರಯೋಗದ ಬಗ್ಗೆ ನಾನು ನಿಮ್ಮ ಜೊತೆಯೇ ಇರುವೆ. ಆದರೂ ಮನಸ್ಸು ಏಕೋ ಗಲಿಬಿಲಿಗೊಂಡಿದೆ.’

‘ಸರ್, ನೀವೇನೂ ಚಿಂತೆ ಮಾಡಬೇಡಿ. ನನ್ನಲ್ಲಿ ವಿಶ್ವಾಸವಿಡಿ. ಪ್ರಯತ್ನವೆಲ್ಲ ನಮ್ಮದು, ಈಶ್ವರನು ಬಯಸಿದರೆ ಯಶಸ್ಸೂ ನಮ್ಮದಾಗುತ್ತದೆ.’

‘ಅದು ಸರಿ. ವರ್ಷದ ಕೊನೆಗೆ ನಿಮ್ಮ ಪುಸ್ತಕಾಲಯದ ಗತಿ ಏನು? ಮಕ್ಕಳಿಗೆ ಪುಸ್ತಕಗಳನ್ನು ಹಂಚಿಬಿಡುವಿರಾ?’

‘ಒಂದು ರೀತಿಯಿಂದ ಪುಸ್ತಕಾಲಯ ಇಡೀ ತರಗತಿಯದು. ಆ ಪುಸ್ತಕಗಳು ಅವರಿಗೇ ಮರಳಿ ದೊರೆಯಬೇಕು; ಆದರೆ ನಾನು ಪಾಲಕರ ಮನವೊಲಿಸಿ ಪುಸ್ತಕಗಳನ್ನು ಮರಳಿ ಬೇಡದಿರಿ, ಇವು ಶಾಲೆಯಲ್ಲಿಯೇ ಉಳಿಯಲಿ. ಆಗ



ಪುಸ್ತಕಾಲಯ ಖಾಯಂ ಆಗುವುದು ಮತ್ತು ಪ್ರತಿವರ್ಷ ಅದರಲ್ಲಿ ಹೊಸ ಹೊಸ ಪುಸ್ತಕಗಳನ್ನು ಸೇರಿಸಬಹುದು ಎಂದು ಒಪ್ಪಿಸುವೆ.’

ಎಷ್ಟು ಜನರಿಗೆ ನಿಮ್ಮ ಮಾತು ಹಿಡಿಸುವುದೋ. ವಿಚಾರವೇನೋ ಸುಂದರವಾಗಿದೆ. ಇದನ್ನು ಕಾರ್ಯಗತಗೊಳಿಸಿ. ಅದರೂ ಪಠ್ಯಪುಸ್ತಕಗಳಿಲ್ಲದೆ ನೀವು ಹೇಗೆ ಕಲಿಸುವಿರಿ ಎಂಬುದೇ ಸಮಸ್ಯೆ.’

‘ನಾನು ಅದರ ಬಗ್ಗೆ ಆಲೋಚಿಸಿದ್ದೇನೆ’ ಎಂದು ಹೇಳಿ ಮನೆಗೆ ಬಂದೆ.

## 7

ಮರುದಿನ ಶಾಲೆ ಪ್ರಾರಂಭವಾಯಿತು. ಎಲ್ಲರೂ ಬಕ್ಕತಲೆಯಿಂದ ಬರುವರೆಂದು ಅಂದುಕೊಂಡಿದ್ದೆ. ಆದರೆ ನನ್ನ ಕಣ್ಣು ತೆರೆದವು. ತಾಯಿ–ತಂದೆ ಹಾಗೆ ಮಾಡಲು ನಿರಾಕರಿಸಿದ್ದಾರೆಂದು ತಿಳಿದುಬಂತು. ಬಕ್ಕತಲೆಯಿಂದ ಯಾರಾದರೂ ಹೋಗುವರೇ. ನಿಮ್ಮ ಮಾಸ್ತರನೊಬ್ಬ ಹುಚ್ಚ ಎಂದರಂತೆ ಅವರು. ನಾನು ಉಗುರು ನೋಡಿದೆ. ಒಂದಿಬ್ಬರು ಮಾತ್ರ ಕತ್ತರಿಸಿಕೊಂಡು ಬಂದಿದ್ದರು. ಮನೆಯ ನಾನಾ ರೀತಿಯ ತೊಂದರೆಗಳು ಇದಕ್ಕೆ ಕಾರಣವಾಗಿದ್ದವು. ಅಂಗಿಯ ಗುಂಡಿಗಳನ್ನು ಹಚ್ಚಿಕೊಡುವಷ್ಟು ವ್ಯವಧಾನ ಯಾರಿಗಿತ್ತು? ಒಬ್ಬ ತಾಯಿಯಂತೂ ಹೀಗೆ ಹೇಳಿ ಕಳಿಸಿದ್ದಳು. ‘ಗುರುಗಳೇ ನೀವು ಕಲಿಸಲು ಬಂದಿರುವಿರಿ, ಕಲಿಸಿ. ಈ ಹೊಸ ಹೊಸ ಆಟವನ್ನೇನು ನಡೆಸಿರುವಿರಿ? ಹುಡುಗರ ಉಗುರು ಕತ್ತರಿಸುವುದು, ಅವರ ಅಂಗಿಗಳಿಗೆ ಗುಂಡಿಹಚ್ಚಿ ಕೊಡಲು ನಮಗೇನು ಬೇರೆ ಕೆಲಸವಿಲ್ಲವೆಂದು ತಿಳಿದಿರುವಿರೋ ಹೇಗೆ? ನಮ್ಮ ಹುಡುಗರು ಇರುವುದೇ ಹೀಗೆ. ನಮಗಿಲ್ಲಿ ಸಾಯಲಿಕ್ಕೂ ಸಮಯವಿಲ್ಲ. ನಿಮ್ಮ ಈ ವ್ಯರ್ಥವಾದ ಕೆಲಸ ಯಾರು ಮಾಡುವರು?’

ನನಗೆ ಆಶ್ಚರ್ಯವಾಯಿತು. ಶಾಲೆ ಪ್ರಾರಂಭವಾದ ಕೂಡಲೇ ಎಲ್ಲ ಮಕ್ಕಳು ಶಿಸ್ತು, ಸ್ವಚ್ಛತೆಯಿಂದ ಶಾಲೆಗೆ ಬಂದಿರುತ್ತಾರೆಂದು ನಾನಂದುಕೊಂಡಿದ್ದೆ. ಆದರೆ ಪರಿಸ್ಥಿತಿ ಬೇರೆಯೇ ಇತ್ತು. ಇರಲಿ, ಅಡ್ಡಿ ಇಲ್ಲ. ನಾನು ಯೋಚಿಸಿದಂತೆ ಕೆಲಸ ನಡೆಯುವುದಿಲ್ಲ. ತಂದೆ–ತಾಯಿಗಳ ಸಹಕಾರ ಪಡೆದು ಮಕ್ಕಳಿಗೆ ಸ್ವತಃ ಇಂಥ ವಿಷಯಗಳಲ್ಲಿ ಆಸಕ್ತಿ ಮೂಡಿಸಲು ಶಾಲೆಯಲ್ಲಿ ಕೆಲಸಮಾಡಬೇಕು.

ಆ ದಿನ ನಾನು ಅವರೊಡನೆ ಬೇರೆ ಯಾವ ಮಾತೂ ಆಡಲಿಲ್ಲ. ನೇರವಾಗಿ ಕತೆಯನ್ನೇ ಪ್ರಾರಂಭಿಸಿದೆ. ಕತೆಯನ್ನು ಮುಗಿಸಿಯೂ ಬಿಟ್ಟೆ.

ಮಕ್ಕಳು – ಬೇರೆ ಕತೆಯನ್ನೂ ಹೇಳಿ ಎಂದು ಆಗ್ರಹ ಪಡಿಸತೊಡಗಿದರು.

ನಾನು ಹೇಳಿದೆ, ನಾಳೆಯಿಂದ ಬೇರೆ ಕತೆ ಪ್ರಾರಂಭಿಸೋಣ, ಇಂದು ಸ್ವಲ್ಪ ಆಟ ಆಡೋಣ.

ಆಟ? ಹುಡುಗರು ಆಶ್ಚರ್ಯದಿಂದ ನನ್ನ ಮುಖ ನೋಡತೊಡಗಿದರು.

ಹೌದು ಆಟ. ನಿಮಗೆ ಯಾವ ಆಟ ಆಡಲು ಬರುತ್ತದೆ?

'ಎಷ್ಟೋ ಅಟಗಳನ್ನು ಅಡಬಲ್ಲೆವು. ಆದರೆ ತರಗತಿಯಲ್ಲಿ ಹೇಗೆ ಆಡುವುದು?'

'ಯಾಕೆ, ಆಡಲು ಬರುವುದಿಲ್ಲವೇ?'

'ಇದು ಶಾಲೆಯ ಸಮಯ. ಈಗ ಯಾರಾದರೂ ಆಟ ಆಡುವರೇ? ಎಂದಾದರೂ ಆಡುವುದನ್ನು ನೋಡಿದ್ದೀರಾ?

'ಆದರೆ ನಾವು ಆಟ ಆಡೋಣ, ನಾನೂ ನಿಮ್ಮೊಡನೆ ಆಡುವೆ, ಬನ್ನಿ ಆಡೋಣ....'

ಕೆಲವರು ಮೂರ್ತಿಗಳಂತೆ ನಿಂತಿದ್ದರು. ಇನ್ನು ಕೆಲವರು 'ಹಾ.... ಹೋ' ಎಂದು ಆಡಲು ಓಡಿದರು. ಸ್ವಲ್ಪ ಸಮಯದಲ್ಲಿ ಗಲಾಟೆಯೇ ಪ್ರಾರಂಭವಾಯಿತು. ಬೇರೆ ತರಗತಿಗಳ ಹುಡುಗರು ಬಗ್ಗಿ ಬಗ್ಗಿ ನೋಡತೊಡಗಿದರು. ನನ್ನ ಸಹ ಶಿಕ್ಷಕರೂ ನನ್ನನ್ನೇ ನೋಡತೊಡಗಿದರು.

ಇಷ್ಟರಲ್ಲಿ ಮುಖ್ಯೋಪಾಧ್ಯಾಯರು ಬಂದು ನನ್ನನ್ನು ತಡೆದರು. 'ನೋಡಿ, ಇಲ್ಲಿ ಆಡಗೊಡುವುದಿಲ್ಲ. ಬೇಕಾದರೆ ದೂರದ ಬಯಲಿಗೆ ಹೋಗಿ. ಇಲ್ಲಿ ಬೇರೆಯವರಿಗೆ ತೊಂದರೆ ಆಗುತ್ತದೆ...'

ನಾನು ಮಕ್ಕಳನ್ನು ಕರೆದುಕೊಂಡು ಬಯಲಿಗೆ ಹೋದೆ.

ಮಕ್ಕಳು ಲಗಾಮಿಲ್ಲದ ಕುದುರೆಗಳಂತೆ ಅಟ, ಆಟ ಎಂದು ಕುಣಿದಾಡ ತೊಡಗಿದರು.

'ಯಾವ ಆಟ ಅಡುವಿರಿ?' ನಾನು ಕೇಳಿದೆ.

ಒಬ್ಬನೆಂದ – 'ಖೋ ಖೋ'

'ಅಲ್ಲ, ಕಬಡ್ಡಿ', ಇನ್ನೊಬ್ಬನೆಂದ.

'ಇಲ್ಲ, ಸಿಂಹ ಮತ್ತು ಪಂಜರದ ಆಟ' – ಮೂರನೆಯವನೆಂದ.

'ನಾವು ಆಡುವುದಿಲ್ಲ' ನಾಲ್ಕನೆಯವನೆಂದ.

'ಅವನನ್ನು ಬಿಡಿ. ನಾವೆಲ್ಲ ಆಡೋಣ..' ಐದನೆಯವನೆಂದ.

ಮಕ್ಕಳ ಈ ಕೆಟ್ಟ ಚಟವನ್ನು ನಾನೇ ನೋಡಿದೆ.

' ನಾವು ಇಲ್ಲಿ ಆಟ ಆಡಲು ಬಂದಿದ್ದೇವೆ. ಮಾತನಾಡಲಿಕ್ಕಲ್ಲ. ಮಾತನಾಡುವುದಾದರೆ ತರಗತಿಗೆ ಮರಳಿ ಹೋಗೋಣ ' ನಾನೆಂದೆ,


ಮಕ್ಕಳೆಂದರು – 'ಇಲ್ಲ ನಾವು ಆಡಲು ಬಯಸುತ್ತೇವೆ.'

'ಹಾಗಾದರೆ ಇಂದು ಖೋ ಖೋ ಆಡೋಣ. ಇಬ್ಬರು ನಾಯಕರಾಗಿರಿ. ಇನ್ನಿಬ್ಬರು..'

'ಮುಖಂಡ ನಾನಾಗುವೆ' ಎಂದು ಅನೇಕರು ಗಲಾಟೆ ಮಾಡತೊಡಗಿದರು. ಕೊನೆಗೆ ನಾನೇ ಇಬ್ಬರ ಹೆಸರನ್ನು ಸೂಚಿಸಿ ಗುಂಪು ಮಾಡಿದೆ. ಅಂತೂ ಆಟ ಪ್ರಾರಂಭವಾಯಿತು.

ಆದರೆ ಇದು ಓಣಿಗಳಲ್ಲಾಡುವ ಹುಡುಗರ ಆಟವಾಯಿತು. ಯಾರ ಬಾಯಿಯೂ ಸುಮ್ಮನಿದ್ದಿಲ್ಲ. ಏನಾದರೂ ಮಾತನಾಡುತ್ತಲೇ ಇರುತ್ತಿದ್ದರು. 'ಹಿಡಕೊಳ್ಳಿ ಅವನ್ನ,





ಮೈದಾನದಲ್ಲಿ ಆಟಕ್ಕೆ ಸಿದ್ಧತೆ ನಡೆಯುತ್ತಿದೆ.

ಹಿಡಿಯೋ. ನೀನೇನು ಹಿಡೀತಿಯೋ, ನಿನ್ನ ಯೋಗ್ಯತೆ ಗೊತ್ತಿಲ್ಲವೇನೋ? ಏ, ...ನಾಲಗೆ ಬಿಗಿ ಹಿಡಿದು ಮಾತಾಡೊ... ನೋಡೋ ಅಲ್ಲಿ, ನಾನು ಹೇಳಲಿಲ್ಲವೇನೋ, ಹೇಗೆ ಓಡ್ತಾನೆ ನೋಡೋ. ನೋಡಿದೇನೋ ಹೇಗೆ ಸೋತು ಓಡಿಹೋದ.'

ನಾನು ಯೋಚಿಸಿದೆ. ಇದೇನು ಅಟದ ಬಯಲೋ ಅಥವಾ ಕಾಯಿಪಲ್ಲೆ ಮಾರುಕಟ್ಟೆಯೋ, ಖೋ ಖೋ ಅಟವೋ ಅಥವಾ ಜಗಳವೋ...?

ಆಟ ಮುಗಿದ ಕೂಡಲೆ ಗೆದ್ದ ಹುಡುಗರಲ್ಲಿ ಒಬ್ಬನೆಂದ, 'ನಾವೇ ಗೆದ್ದೆವು, ನೀವು ಎಷ್ಟು ಪ್ರಯತ್ನ ಮಾಡಿದಿರಿ, ಆದರೆ ಏನಾಯಿತು?'

'ನಿಮ್ಮ ಮುಖಂಡನು ಜೋರಾಗಿದ್ದ. ಆದರೂ ಉಪಯೋಗನಾಗಲಿಲ್ಲ...'

ಇನ್ನೊಬ್ಬ ಹುಡುಗನಿಗೆ ಸಿಟ್ಟು ಬಂತು. ಅವನು ಮುಂದುವರಿಯುತ್ತ ಹೇಳಿದ 'ಹೌದು ನಾನು ಸೋತೆ, ಈಗ ನೀನೇನು ಮಾಡುವೆ..?'

ಮೊದಲನೆಯವನು ಪುನಃ ಹೇಳಿದ, 'ನೀವು ಸೋತಿರಿ, ನಾವು ಗೆದ್ದೆವು. ಮಾಡುವುದೇನು...'

'ಗೆದ್ದೆವು, ಗೆದ್ದೆವು, ನಾವೇ ಗೆದ್ದೆವು...'

ಸೋತವನ ಮುಖದ ಮೇಲೆ ಸಿಟ್ಟು ಮೂಡಿ ಬಂತು. ಅವನೆಂದ, 'ಸಾಕು ಸಾಕು ಇನ್ನು ಸುಮ್ಮನಿರೋ ಇಲ್ಲದಿದ್ದರೆ ನೋಡು ಈ ಕಲ್ಲು ಹೇಗಿದೆ..?'

ಕಲ್ಲು ಬೇರೆ ಹುಡುಗನಿಗೆ ಬಡಿದು ರಕ್ತ ಧಾರೆ ಹರಿಯಿತು.

'ಬಹಳ ಕೆಡುಕಾಯಿತು' ಎಂದು ನಾನು ಯೋಚಿಸಿದೆ.

ನನ್ನ ವಸ್ತ್ರವನ್ನು ಹರಿದು ಅವನಿಗೆ ಪಟ್ಟಿ ಕಟ್ಟಿದೆ. ಎಲ್ಲ ಹುಡುಗರನ್ನು ಕರೆದು ಹೇಳಿದೆ. 'ನೋಡಿ, ನಾಳಿನಿಂದ ಆಟ ಬಂದ್'.

ಎಲ್ಲರೂ, 'ಆದರೆ ಗುರುಗಳೇ, ಇದು ಅವರ ಜಗಳ, ಇದರಲ್ಲಿ ನಮ್ಮದೇನು ತಪ್ಪಿದೆ?...' ಎಂದರು.

'ನೀವು ನನ್ನ ಎರಡು ಮಾತುಗಳನ್ನು ಕೇಳಿದರೆ ಆಟ ಆಡಿಸುವೆ..' ನಾನೆಂದೆ.

ಎಲ್ಲರೂ, 'ಕೇಳುವೆವು, ಕೇಳುವೆವು..' ಎಂದರು.

ನಾನೆಂದೆ: 'ಮೊದಲನೆಯದಾಗಿ ಆಟ ಆಡುವಾಗ ಕಾರಣ ಇಲ್ಲದೆ ಯಾರೂ ಮಾತಾಡಬಾರದು. ಯಾರು ಮಾತಾಡುವರೋ ಅವರು ಆಟದಿಂದ ದೂರ ಸರಿಯಬೇಕು.'

ಎಲ್ಲರೂ 'ಒಪ್ಪಿಗೆ' ಎಂದು ಕೂಗಿದರು.

'ಎರಡನೆಯದಾಗಿ ಆಟದಲ್ಲಿ ಸೋಲು ಗೆಲವಿನ ಮಾತು ಬರಬಾರದು. ಇದು ಆಟ. ಇದರಲ್ಲಿ ಒಮ್ಮೆ ನಾವು ಸೋತರೆ, ಎರಡನೆ ಸಲ ಬೇರೆಯವರು ಸೋಲುತ್ತಾರೆ. ಅಂತಹುದರಲ್ಲಿ ನಾವು ಸೋತೆವು, ನೀವು ಗೆದ್ದಿರಿ ಎಂದರೇನು? ಆಟದ ಉದ್ದೇಶ ಆಟವೇ, ಓಡುವುದು, ಜಿಗಿಯುವುದು, ಮೋಜು ಮಾಡುವುದು, ಸೋಲುವುದು, ಗೆಲ್ಲುವುದು. ಇದರಲ್ಲಿ ತಲೆ ಒಡೆದುಕೊಳ್ಳುವುದು ಯಾಕೆ ಬೇಕು?.

'ನಮಗೆ ಒಪ್ಪಿಗೆ ಗುರುಗಳೆ..' ಅಂದರು.

ನಾವು ಆಟ ಆಡಿ ಶಾಲೆಗೆ ಹೋದೆವು, ತಲೆ ಒಡೆದುಕೊಂಡ ಹುಡುಗನೂ ಇದ್ದ. ಅವನನ್ನು ನೋಡಲು ಬೇರೆ ಶಿಕ್ಷಕರು ಮತ್ತು ಹುಡುಗರು ಹೊರ ಬಂದರು. ಒಬ್ಬ ತುಂಟ ಹುಡುಗ ಹೇಳಿದ.

'ಏನು, ಹೇಗಿತ್ತು ಆಟ?'

ಎರಡನೆಯವನೆಂದ 'ಅಲ್ಲವೋ, ಅವರು ಆಟ ಆಡಲಿಕ್ಕೆ ಎಲ್ಲಿ ಹೋಗಿದ್ರು, ಹೋಳಿ ಆಡಲಿಕ್ಕೆ ಹೋಗಿದ್ರು.'

ಶಾಲೆ ಬಿಟ್ಟಿತು. ಶಿಕ್ಷಕರು, ಮುಖ್ಯೋಪಾಧ್ಯಾಯರು ನನ್ನ ಬಳಿ ಬಂದರು. ಒಬ್ಬ ಶಿಕ್ಷಕನೆಂದ 'ದೊಡ್ಡ ಅಪರಾಧವನ್ನೇ ಮಾಡಿಸಿ ಬಿಟ್ರಿ ನೀವು...'

ಬೇರೆ ಶಿಕ್ಷಕರೆಂದರು 'ಈ ಆಟ ಗೀಟ ಸಾಕ್ರೀ. ಈ ಹುಡುಗರು ಬಹಳ ತುಂಟರಿದ್ದಾರೆ. ಇವರನ್ನು ಶಾಲೆಯ ಗೋಡೆಗಳ ಮಧ್ಯದಲ್ಲಿಯೇ ಕೂಡಿಸಿ, ಓದಿಸಿ, ಕಲಿಸಿ. ನೀವು



ಅವರನ್ನು ಬಿಟ್ಟುಬಿಟ್ರೆ ಒಬ್ಬರಿನ್ನೊಬ್ಬರ ತಲೆ ಒಡೆಯುತ್ತಾರೆ. ಓಣಿಗಳಲ್ಲಿ ದಿನಾಲೂ ಏನಾಗುತ್ತದೆ ನಿಮಗೆ ಗೊತ್ತಿಲ್ಲವೆ?'

ಮುಖ್ಯೋಪಾಧ್ಯಾಯರೆಂದರು: 'ಏನಾದರೂ ಒಂದು ವಿಶೇಷ ಆಗುವುದೆಂದು ನನಗೆ ಅನಿಸಿಯೇ ಇತ್ತು. ಒಳ್ಳೆದಾಯಿತು. ಈ ರಾಯರಿಗೆ ಒಮ್ಮೆ ಅನುಭವ ಆಗಬೇಕಾಗಿತ್ತು. ಅದಾಗದೆ ಅವರು ಸುಮ್ಮನೆ ಕೂಡುವವರಲ್ಲ, ಎಲ್ಲಿಯಾದರು ಶಾಲೆಯಲ್ಲಿ ಆಟವಾಡಿಸುತ್ತಾರೆಯೇ?

ಈ ರೀತಿ ಮಾತುಕತೆ ನಡೆದಾಗಲೇ ತಲೆ ಒಡೆದುಕೊಂಡ ಹುಡುಗನ ತಂದೆ ಕೆಂಡಕಾರುತ್ತಾ ಬಂದ. 'ನಮಗೆ ಇಂಥ ಓದು ಬೇಡ, ನೋಡಿ, ತಲೆ ಒಡೆದು ಹೋಗಿದೆ. ಎಲ್ಲಿದ್ದಾರೆ ಮುಖ್ಯೋಪಾಧ್ಯಾಯರು? ಯಾರು ಇವನನ್ನು ಹೊಡೆದವರು? ಎಂದು ಕೇಳಿದ.

ನಾನು ಹೇಳಿದೆ, 'ನೋಡಿ ಹುಡುಗರೆಲ್ಲ ಆಟ ಆಡಲಿಕ್ಕೆ ಹೋಗಿದ್ರು, ಅಲ್ಲಿ ತಮ್ಮ ತಮ್ಮಲ್ಲಿ ಕಿತ್ತಾಡಿಕೊಂಡ್ರು, ಇವನಿಗೆ ಏಟು ಬಿತ್ತು.'

ಪಾಲಕ ಕೇಳಿದ 'ಇವನಿಗೆ ಆಟ ಅಡಲು ಅನುಮತಿ ಯಾರು ಕೊಟ್ರು? ಶಾಲೆಯಲ್ಲಿ ಕಲಿಸುತ್ತಿರೋ ಆಟವಾಡಿಸುತ್ತೀರೋ? ಇಡೀ ದಿನ ಓಣಿಯಲ್ಲಿ ಆಡುತ್ತಲೇ ಇರುತ್ತಾರೆ. ನೀವು ಕಲಿಸುವುದಾದರೆ ಶಾಲೆಗೆ ಕಳಿಸುವೆ, ಇಲ್ಲವಾದರೆ ಬಿಡಿಸಿಬಿಡುವೆ.' ಆಗ ಎಲ್ಲ ಶಿಕ್ಷಕರು ಮುಗುಳ್ನಗುತ್ತ ನಿಂತಿದ್ದರು. ಇಂತಹ ಪರಿಸ್ಥಿತಿಯಲ್ಲಿ ನಾನೇನು ಏನು ಮಾತಾಡಲಿ?

ಮನೆಗೆ ಹೋದೆ, ಊಟ ರುಚಿಸಲಿಲ್ಲ, ಕೋಣೆಯಲ್ಲಿ ಕುಳಿತು ಯೋಚಿಸತೊಡಗಿದೆ. ಒಳ್ಳೆಯ ವಿಪತ್ತು ಬಂತಲ್ಲ, ಇರಲಿ ಅವರಿಗೆ ಆಟದ ನಿಯಮಗಳನ್ನಂತೂ ಹೇಳಿದ್ದೇನೆ. ಆಟವನ್ನಂತೂ ಖಂಡಿತವಾಗಿ ಆಡಿಸಬೇಕು. ನನ್ನ ಅಭಿಪ್ರಾಯದಲ್ಲಿ ಆಟವೇ ನಿಜವಾದ ಓದು. ಮಲಗಿದ್ದ ಹಾಗೆ ಇನ್ನೊಂದು ವಿಚಾರ ಬಂತು. ಪಾಲಕರ ಸಭೆಯೊಂದನ್ನು ಏಕೆ ಕರೆಯಬಾರದು? ಅವರಿಗೆ ಆಟದ ಮಹತ್ವವನ್ನು ಏಕೆ ತಿಳಿಸಿ ಹೇಳಬಾರದು. ಸ್ವಚ್ಛತೆ, ಶಿಸ್ತು ಇವುಗಳ ಬಗ್ಗೆ ಸಹಕಾರ ನೀಡಲು ವಿನಂತಿಸಿಕೊಂಡರಾಯಿತು. ಅವರು ಸಹಾಯ ಮಾಡದಿದ್ದರೆ ನಾನೇನು ಮಾಡಬಲ್ಲೆ? ತಮ್ಮ ಮಕ್ಕಳಿಗಾಗಿ ಇಷ್ಟನ್ನು ಮಾಡಲಾರರೆ? ಶಿಕ್ಷಕರು ತಂದೆ-ತಾಯಿಗಳ ಸಹಕಾರವನ್ನು ಏಕೆ ಬೇಡಬಾರದು? ಈ ತಪ್ಪು ನಮ್ಮದೇ. ನಾಳೆಯೇ ಒಂದು ಸಭೆಯನ್ನು ಏಕೆ ಕರೆಯಬಾರದು?.

## 8

ಸಭೆ ಸೇರಿತು. ಆದರೆ ಇದಕ್ಕೆ ಸಭೆ ಅನ್ನದಿದ್ದರೇ ಒಳ್ಳೆಯದು. 40 ತಾಯಿ-ತಂದೆಯರಿಗೆ ಪತ್ರ ಬರೆಯಲಾಗಿತ್ತು, ಆದರೆ ಒಟ್ಟು 7 ಜನ ಪಾಲಕರು ಬಂದಿದ್ದರು. ನನ್ನ ನಿರಾಶೆಗೆ ಕೊನೆಯೇ ಇರಲಿಲ್ಲ. ನಾನು ಶ್ರದ್ಧೆಯಿಂದ ಭಾಷಣದ ತಯಾರಿ ಮಾಡಿದ್ದೆ. ಆದರೆ ಏನು ಮಾಡಲಿ,

ಕೊನೆಗೂ ನಾನು ನನ್ನ ಭಾಷಣವನ್ನು ಪ್ರಾರಂಭಿಸಿಯೇ ಬಿಟ್ಟೆ. ಪ್ರಯತ್ನ ಮಾಡುವುದು ನನ್ನ ಕರ್ತವ್ಯ ಎಂದುಕೊಂಡೆ. ಒಂದು ಗಂಟೆಯ ವರೆಗೆ ಗಂಭೀರ ರೀತಿಯಿಂದ ಮನಸ್ಸಿಗೆ ಮುಟ್ಟುವಂತೆ ಭಾಷಣ ಮಾಡಿದೆ. 7 ಜನರಲ್ಲಿ ಒಬ್ಬರಿಗೆ ಮನೆಯಿಂದ ಕರೆ ಬಂತು. ಬೇರೆಯವರು ನಿರುಪಾಯರಾಗಿ ನನ್ನ ಮಾತು ಕೇಳುತ್ತಿದ್ದರು. ನಾನು ಹೇಳಬೇಕಾದ ವಿಷಯ ಮಹತ್ವಪೂರ್ಣವಾಗಿತ್ತು. ಅದನ್ನು ತಿಳಿಸಿ ಹೇಳುವುದೂ ಅಷ್ಟೇ ಅವಶ್ಯವಾಗಿತ್ತು.

ನಾನು ಅವರಿಗೆ ನಿಜವಾದ ಓದು ಹಾಗೂ ತೋರಿಕೆಯ ಓದಿನ ನಡುವಿನ ಸೂಕ್ಷ್ಮ ಅಂತರವನ್ನು ಚೆನ್ನಾಗಿ ತಿಳಿಸಿ ಹೇಳಿದೆ. ಆಟ ಮತ್ತು ಚಾರಿತ್ರ್ಯ ನಿರ್ಮಾಣಗಳ ಸಂಬಂಧವನ್ನೂ ವಿವರಿಸಿದೆ. ಶಿಸ್ತಿನ ಮಹತ್ವ ತಿಳಿಸಿ ಇಂದಿನ ಶಿಕ್ಷಣ ಪದ್ಧತಿಯಲ್ಲಿ ಅದಿಲ್ಲದಿರುವುದನ್ನು ಖಂಡಿಸಿದೆ.

ಆದರೆ ಇದೆಲ್ಲ ನೀರಿನಲ್ಲಿ ಹೊಳೆಯಲ್ಲಿ ಹುಣಸೆ ಹಣ್ಣು ಹಿಂಡಿದಂತಾಯಿತು. ಕೆಲವರು ಸಂಕೋಚದಿಂದ ಶಿಷ್ಟಾಚಾರಕ್ಕಾಗಿ ಬಂದಿದ್ದರು. ಅವರೂ ಮನೆಗೆ ಹೋಗಲು ಕಾತುರರಾಗಿದ್ದರು. ಭಾಷಣ ಮುಗಿದ ಕೂಡಲೇ ಹೊರಟು ಹೋದರು.

ಉಳಿದವರು ನಮ್ಮ ಶಿಕ್ಷಕರು ಹಾಗೂ ಅಧಿಕಾರಿಗಳು. ಅಧಿಕಾರಿಗಳು ನಗುತ್ತ ನುಡಿದರು.

'ಲಕ್ಷ್ಮೀಶಂಕರ ಬಾಬೂ, ಇದು ಕೋಣನ ಮುಂದೆ ಕಿನ್ನರಿ ಬಾರಿಸಿದಂತಾಯಿತು. ನಿಮ್ಮ ಈ ಫಿಲಾಸಫಿಯನ್ನು ಯಾರು ಅರ್ಥಮಾಡಿಕೊಳ್ಳುತ್ತಾರೆ?'

ಹಿಂದಿನಿಂದ ಒಬ್ಬ ಶಿಕ್ಷಕರು ಮೆಲ್ಲಗೆ ನುಡಿದರು, 'ಮೂರ್ಖ, ಈತ ಶತ ಮೂರ್ಖ.'

ನನಗೆ ಇದು ಸರಿ ಬರಲಿಲ್ಲ. ಆದರೂ ತಡೆದುಕೊಂಡೆ. ನಾನು ಮನಸ್ಸಿನಲ್ಲಿಯೇ ನಿಜ, ನಾನೊಬ್ಬ ಓದಿದ ಮೂರ್ಖನೇ ಸರಿ. ಸಾಧಾರಣ ಜನರೆದುರು ಯಾವ ರೀತಿ ಭಾಷಣ ಮಾಡಬೇಕೆಂಬುದೂ ನನಗೆ ಗೊತ್ತಿಲ್ಲ ಎಂದುಕೊಂಡೆ.

ಎಲ್ಲ ಶಿಕ್ಷಕರೂ ನಗುತ್ತ ಮನೆಗೆ ಹೋದರು.


## 9

ಹತ್ತು–ಹನ್ನೆರಡು ದಿನ ಕಳೆದವು. ನಾನು ಪುಸ್ತಕಾಲಯದ ಕೆಲಸ ಕೈಗೆತ್ತಿಕೊಂಡೆ. ಸಾಕಷ್ಟು ಕತೆಗಳನ್ನು ಹೇಳಿ ಆಗಿತ್ತು. ಬಾಲಕರು ನಾಲ್ಕನೆಯ ವರ್ಗದವರಾಗಿದ್ದರು. ಈಗ ಅವರ ಕೈಯಲ್ಲಿ ಪುಸ್ತಕ ಕೊಡುವುದು ಅವಶ್ಯವಿತ್ತು.

ಮಕ್ಕಳಿಗೆ ಹೇಳಿದೆ, 'ನಾಳೆ ನಾಲ್ಕನೆಯ ವರ್ಗದ ಪುಸ್ತಕ ಹಾಗೂ ಇತಿಹಾಸ ಪುಸ್ತಕಗಳಿಗಾಗಿ ಹಣ ತೆಗೆದುಕೊಂಡು ಬನ್ನಿ, ಇಲ್ಲಿಯೇ ಕೊಡಿಸುವ ವ್ಯವಸ್ಥೆ ಮಾಡುವೆ.'

ಮರುದಿನ ಒಬ್ಬ ಹುಡುಗ ಪುಸ್ತಕಗಳನ್ನೇ ತೆಗೆದುಕೊಂಡು ಬಂದನು. 'ನಾನು ನಾಲ್ಕನೆಯ ತರಗತಿಗೆ ಬಂದ ದಿನವೇ ನಮ್ಮ ತಂದೆ ಇವುಗಳನ್ನು ಕೊಡಿಸಿದ್ದಾರೆ' ಎಂದು ಹೇಳಿದ.





ಹದಿನೈದು ಹುಡುಗರು ಹುಲಿಯ ಹಾಗೆ ನುಗ್ಗಿ ಹದಿನೈದು ಪುಸ್ತಕಗಳನ್ನು ಎತ್ತಿಕೊಂಡರು.

ಎರಡನೆಯವನೆಂದ: 'ನನ್ನ ಅಣ್ಣನ ಹತ್ತಿರ ಈ ಪುಸ್ತಕಗಳಿದ್ದವು. ತಂದಿದ್ದೇನೆ..'

ಮೂರನೆಯವನೆಂದ: 'ನಮ್ಮ ಕಕ್ಕ ನನಗೆ ಪುಸ್ತಕ ಕಳಿಸುವವರಿದ್ದಾರೆ, ಇಲ್ಲಿ ಕೊಳ್ಳುವುದಿಲ್ಲ.'

ಮತ್ತೊಬ್ಬನೆಂದ, 'ನಮ್ಮ ತಂದೆಯವರು ಪುಸ್ತಕ ತೆಗೆದುಕೊಳ್ಳಲು ಹಣ ಕೊಡುವುದಿಲ್ಲ. ನಾವೇ ಕೊಡಿಸುವೆವು ಅನ್ನುತ್ತಾರೆ.'

ಕಲ್ಪನೆಯಲ್ಲಿ ಪುಸ್ತಕಾಲಯ ಮಾಡುವುದು ಸುಲಭ. ಆದರೆ ಕೆಲಸ ನಿಜವಾಗಿಯೂ ಕಠಿಣ ಎಂದುಕೊಂಡೆ.

ಕೆಲವರು ಹಣ ತೆಗೆದುಕೊಂಡು ಬಂದಿದ್ದರು. ನಾನು ಅದನ್ನು ತೆಗೆದುಕೊಂಡು ರಸೀತಿ ಕೊಟ್ಟೆ.

ಮರುದಿನ ಮಕ್ಕಳು ತಮ್ಮ ನಾಲ್ಕನೆಯ ಪುಸ್ತಕ, ಇತಿಹಾಸದ ಪುಸ್ತಕ ಎಂದು ಪೀಡಿಸತೊಡಗಿದರು.

ನಾನೆಂದೆ, 'ನಿಮ್ಮ ಹಣದಿಂದ ಈ ಕತೆ ಪುಸ್ತಕಗಳನ್ನು ತಂದಿರುವೆ. ಕತೆ ಪುಸ್ತಕಗಳು ನಿಮಗೆ ಬಹಳ ಹಿಡಿಸುತ್ತವೆ ಎಂದು ನೀವೇ ಹೇಳಿದ್ದಿಲ್ಲವೇ?'

ಮಕ್ಕಳಿಗೆ ಬಹಳ ಆನಂದವಾಯಿತು. ಬಣ್ಣಬಣ್ಣದ ಚಿತ್ರಗಳಿದ್ದ ಪುಸ್ತಕಗಳ ಮೇಲೆ ಮುಗಿದು ಬಿದ್ದರು.

ನಾನೆಂದೆ: 'ನಮ್ಮ ಬಳಿ ಕೇವಲ 15 ಕತೆ ಪುಸ್ತಕಗಳಿವೆ. 15 ಬಾಲಕರು ಮಾತ್ರ ಓದಬಹುದು. ಉಳಿದ ಇಪ್ಪತ್ತು ಬ್ಾಲಕರು ನಾನು ಓದುವುದನ್ನು ಕೇಳಿ'. ಗಲಾಟೆ ಕಡಿಮೆಮಾಡಲು ನಾನು ಹೇಳಿದೆ, 'ಮೊದಲು 15 ಜನ ಓದಿ. 20 ಜನ ನನ್ನ ಕಡೆಗೆ ಬನ್ನಿ'.

15 ಜನ 15 ಪುಸ್ತಕಗಳ ಮೇಲೆ ಹಸಿದ ತೋಳಗಳಂತೆ ಬಿದ್ದರು. ನಾನೆಂದೆ, 'ನೋಡಿ, ಒಂದು ಪುಸ್ತಕ ಓದಿ ಮೇಜಿನ ಮೇಲಿಡಿ, ಇನ್ನೊಂದನ್ನು ಪುನಃ ಎತ್ತಿಕೊಳ್ಳಿ. ಇದರಿಂದ ಎಲ್ಲರಿಗೂ ಓದಲು ಪುಸ್ತಕ ದೊರೆಯುವುದು'.

ಬೇರೆ ವಿದ್ಯಾರ್ಥಿಗಳನ್ನು ನನ್ನ ಬಳಿ ಕುಳ್ಳಿರಿಸಿಕೊಂಡು ಆದರ್ಶವಾಚನವನ್ನು ಪ್ರಾರಂಭಿಸಿದೆ. ನಾನು ಭಾವಪೂರ್ಣವಾಗಿ ಓದಲಾರಂಭಿಸಿದೆ. ಆದರೆ ಆ 15 ಬಾಲಕರ ಧ್ವನಿ? ನಾನು ಅವರಿಗೆ, 'ಮನಸ್ಸಿನಲ್ಲಿ ಓದಿಕೊಳ್ಳಿ, ನಮಗೆ ತೊಂದರೆಯಗುತ್ತದೆ' ಎಂದು ಹೇಳಿದೆ. ಸ್ವಲ್ಪ ಹೊತ್ತು ಗಲಾಟೆ ಕಡಿಮೆ ಆದಂತಾಯಿತು. ಆದರೆ ಅವರಿಗೆ ಮೂಕವಾಚನ ಎಂಬುದೇ ಗೊತ್ತಿರಲಿಲ್ಲ. ಅವರು ಜೋರಾಗಿಯೇ ಓದುತ್ತಿದ್ದರು. ಸ್ವಲ್ಪ ಹೊತ್ತು ಸುಮ್ಮನಿದ್ದು ಪುನಃ ಗಟ್ಟಿಯಾಗಿ ಓದತೊಡಗಿದರು. ಅವರಿಗೆ ಅಂಗಳದಲ್ಲಿ ಬೇರೆ ಬೇರೆಯಾಗಿ ಕುಳಿತುಕೊಳ್ಳಲು ತಿಳಿಸಿ, ನಾನು ತರಗತಿಯಲ್ಲುಳಿದೆ.

ಆದರ್ಶವಾಚನ ಚೆನ್ನಾಗಿ ನಡೆಯಿತು. ಕತೆಗಳೆಲ್ಲವೂ ರೋಚಕವಾಗಿದ್ದವು. ಎಲ್ಲರೂ ಆಸಕ್ತಿಯಿಂದ ಕೇಳಿದರು. ಗಂಟೆ ಬಾರಿಸುವವರೆಗೆ ಆದರ್ಶವಾಚನ ಮತ್ತು ಪುಸ್ತಕ ಪಠಣ ನಡೆದೇ ಇತ್ತು.

## 10

ಕತೆ, ಆಟ, ಪುಸ್ತಕಾಲಯ, ಆದರ್ಶ ವಾಚನ, ಸ್ವಚ್ಛತೆ ಹಾಗೂ ಶಿಸ್ತಿನ ಪ್ರಯತ್ನ ಮಾಡುತ್ತ ಮೂರು ತಿಂಗಳು ಕಳೆದುಹೋದವು.

ನಾನು ನನ್ನ ಕೆಲಸದ ಅಂದಾಜು ಮಾಡತೊಡಗಿದೆ. ಏನು ಕೆಲಸವಾಗಿದೆ ಎಂಬುದರ ಮೇಲೆ ಕಣ್ಣೋಡಿಸಿದೆ. ಪಠ್ಯಕ್ರಮದಲ್ಲಿದ್ದ ಹಿಂದಿ, ಗಣಿತ, ಇತಿಹಾಸ, ಹಾಗೂ ವಿಜ್ಞಾನ ಮೊದಲಾದ ವಿಷಯಗಳ ಬಗೆಗೆ ಏನೂ ಕೆಲಸವಾಗಿರಲಿಲ್ಲ. ಬೇರೆ ತರಗತಿಗಳಲ್ಲಿ ಸಾಕಷ್ಟು ಅಭ್ಯಾಸವಾಗಿತ್ತು. ವರ್ಷ ಮುಗಿಯುವುದರೊಳಗಾಗಿ ನನಗೂ ಇದೆಲ್ಲಾ ಮಾಡಿ ತೋರಿಸಬೇಕಾಗಿತ್ತು. ನನ್ನ ಪ್ರಯೋಗದ ಕರಾರು ಇದಾಗಿತ್ತು. ಆಗಲಿ, ಈಗ ನಾನೇನು ಮಾಡಿದ್ದೇನೆ. ಅದನ್ನಷ್ಟು ನೋಡುವ. ಕತೆ ಹೇಳುವುದರಲ್ಲಿ ನನಗೂ ಸಾಕಷ್ಟು ಯಶಸ್ಸು ದೊರೆತಿದೆ. ಇದರಿಂದ ಹುಡುಗರು ಏಕಾಗ್ರಚಿತ್ತರಾಗಿದ್ದಾರೆ. ಆದರೆ ಚಂಪಕಲಾಲ, ರಾಮಲಾಲರಿಗೆ ಕತೆ ಸೇರಲೊಲ್ಲದು. ರಾಘವ, ಮಾಧವ ಕಣ್ಣು ಹೊಡೆಯುತ್ತಾರೆ, ಹುಬ್ಬು ಕುಣಿಸುತ್ತಾರೆ. ಬೇರೆಯವರ ಮುಖ ನೋಡಿ ಅಣಕಿಸುತ್ತಾರೆ.



ಇದಕ್ಕೆ ಚಿಕಿತ್ಸೆ ಆಗಬೇಕು. ಆಟ ಆಡಿಸುವುದರಿಂದ ಮಕ್ಕಳು ನನ್ನೊಡನೆ ಮುಕ್ತರಾಗಿ ಮಾತನಾಡುತ್ತಾರೆ. ನನ್ನನ್ನು ತಮ್ಮವರೆಂದು ತಿಳಿದುಕೊಳ್ಳುತ್ತಾರೆ. ನನಗೆ ಹೆದರುವುದಿಲ್ಲ, ಆಟದ ನಂತರ ನನ್ನ ಆದರ್ಶವಾಚನವನ್ನು ಗಮನವಿಟ್ಟು ಕೇಳುತ್ತಾರೆ. ಆದರೆ ಆಟವಾಡುವಾಗ ಅವ್ಯವಸ್ಥೆ, ಗಲಾಟೆ ಮಾಡುವುದಿಲ್ಲ. ಪ್ರಯತ್ನವೇನೋ ಬಹಳ ಮಾಡುತ್ತಿರುವೆ. ಆದರೆ ಇನ್ನೂ ಕ್ರಮಿಸುವ ದಾರಿ ಬಹಳವಿದೆ.

ಪುಸ್ತಕಾಲಯದಲ್ಲಿ ಈಗ ಕೆಲವೇ ಪುಸ್ತಕಗಳಿವೆ. ಇದುವರೆಗೆ ಪಾಲಕರಿಗೆ ಪಠ್ಯಪುಸ್ತಕಗಳಿಗಿಂತ ಪುಸ್ತಕಾಲಯದ ಮಹತ್ವ ಹೆಚ್ಚು ಮನವರಿಕೆ ಮಾಡಿಕೊಡುವುದಾಗಿರಲಿಲ್ಲ. ಭಾಷಣ ಮಾಡಿ ತಂದೆ-ತಾಯಿಗಳಿಗೆ ತಿಳಿಸಿದರೆ ಎಲ್ಲ ಸರಿ ಹೋಗುವುದು ಎಂದು ಭಾವಿಸಿದ್ದೆ. ಆದರೆ ನಮ್ಮ ಪಾಲಕರಿಗೋ 'ಓದಿಸಿಬಿಡಿ' ಎಂಬುದೊಂದೇ ಮಾತು ಗೊತ್ತು. ಬೇರೆ ಮಾತು ಕೇಳಲು ಅವರು ಸಿದ್ಧರಿಲ್ಲ; ಅವರಿಗೆ ಸಮಯವೂ ಇಲ್ಲ. ಚಿಂತೆಯಿಲ್ಲ, ಇದೆಲ್ಲ ತಾನಾಗೆ ಸರಿ ಹೋಗುವುದು. ಹೇಗೋ ಇನ್ನೂ ಸಮಯವಿದೆಯಲ್ಲ.

ನಾನು ಪುನಃ ಆಲೋಚಿಸಿದೆ. ಈ ಪ್ರಯೋಗ ಒಂದು ಮಹಾಭಾರತವಾದಂತಾಯಿತೆ? ಎಷ್ಟೋ ಪ್ರಶ್ನೆಗಳು ನನ್ನನ್ನು ಕಾಡುತ್ತಿವೆ. ಸ್ವಚ್ಛತೆ ಬಗೆಗೆ ಇನ್ನೂ ಏನೂ ಕೆಲಸವಾಗಿಲ್ಲ. ಟೊಪ್ಪಿಗೆಗಳು ಹೊಲಸಾಗಿಯೇ ಇವೆ. ಬಟ್ಟೆಗಳು ಎರಡು ದಿನ ಮಾತ್ರ ಸ್ವಚ್ಛವಿದ್ದುವು. ಮತ್ತೆ ಅದೇ ಹಳೇ ರಾಗ. ಉಗುರುಗಳು ಸಲಿಕೆಗಳಂತೆ ಬೆಳೆಯುತ್ತಿವೆ. ಸಮಾಜದಲ್ಲಿ ಹೊಸ ಹವ್ಯಾಸಗಳನ್ನು ಮೂಡಿಸಬೇಕಾದರೆ ಧೈರ್ಯದಿಂದ ಪುನಃ ಪುನಃ ಪ್ರಯತ್ನ ಮಾಡಬೇಕು.

ಕೇವಲ ಹುಡುಗರದಷ್ಟೆ ಚಿಂತೆಯಲ್ಲ. ಮೇಲಧಿಕಾರಿಗಳೂ ಇತ್ತೀಚೆಗೆ ಆತುರ ತೋರಿಸುತ್ತಿದ್ದಾರೆ. ಅವರಿಗೂ ಕೆಲವರು ವಿರೋಧಿಗಳಿದ್ದಾರೆ. ನಮ್ಮ ಅಧಿಕಾರಿಗಳು ಕೀರ್ತಿಯಲ್ಲಿ ಪಾಲನ್ನೇನೋ ಬಯಸುತ್ತಾರೆ. ಆದರೆ ಧಿಡೀರ್ ಫಲಿತಾಂಶ ಬಯಸುತ್ತಾರೆ. ನನಗೆ ಸಹಕಾರ ನೀಡುವುದರಲ್ಲಿ ಅವರ ಅಧಿಕಾರಕ್ಕೂ ಮಿತಿ ಇದೆ.

ನನ್ನ ಸಹ ಶಿಕ್ಷಕರಿಗಂತೂ ನನ್ನ ಮೇಲೆ ಎಳ್ಳಷ್ಟೂ ವಿಶ್ವಾಸವಿಲ್ಲ. ಅವರು ನನ್ನನ್ನು ಶುದ್ಧ ಮೂರ್ಖನೆಂದು ತಿಳಿದಿದ್ದಾರೆ. ಬಹುಶಃ ನಾನು ಮೂರ್ಖನೇ ಇರಬಹುದು. ಎಷ್ಟಾದರೂ ಅನುಭವ ಇಲ್ಲದವನಲ್ಲವೆ? ಆದರೆ ಇವರ ಅಭಿಪ್ರಾಯ ಇವರ ಕಲಿಸುವ ರೀತಿಗಳಿಗೆ ನಾನು ದೂರದಿಂದಲೇ ಕೈ ಮುಗಿಯುತ್ತೇನೆ. ಇವುಗಳನ್ನು ನೋಡಿದರೆ ನನಗೆ ನಡುಕ ಹುಟ್ಟುತ್ತದೆ. ಇದಕ್ಕಿಂತ ನಾನು ಮಾಡುತ್ತಿರುವುದು, ಲಕ್ಷ ಪಾಲು ಮೇಲು. ನನ್ನ ವಿದ್ಯಾರ್ಥಿಗಳು ನನ್ನನ್ನು ನೋಡಿ ಓಡಿಯಂತೂ ಹೋಗುವುದಿಲ್ಲವಲ್ಲ. ಅವರು ನನ್ನನ್ನು ಸಾಕಷ್ಟು ಪ್ರೀತಿಸುತ್ತಾರೆ, ಆದರಿಸುತ್ತಾರೆ, ಆಜ್ಞೆಯನ್ನು ಪಾಲಿಸುತ್ತಾರೆ. ಈ ಶಿಕ್ಷಕರನ್ನು ಕಂಡು ವಿದ್ಯಾರ್ಥಿಗಳು ಓಡಿ ಹೋಗುತ್ತಾರೆ. ಬೆನ್ನ ಹಿಂದೆ ಅವರನ್ನು ಅಣಕಿಸುವುದನ್ನು ಪ್ರತ್ಯಕ್ಷ ಕಂಡಿದ್ದೇನೆ. ಒಬ್ಬ ಹುಡುಗನೂ ಶಿಕ್ಷಕರ ಬಳಿ ನಿಂತು ನಗುತ್ತ ಮಾತಾಡುವುದಿಲ್ಲ. ಅವರು ತರಗತಿಯಲ್ಲಿ

ಸುಮ್ಮನೆ ಕುಳಿತುಕೊಳ್ಳುತ್ತಾರೆ. ಆದರೆ ಹೊರಬಿದ್ದ ಕೂಡಲೆ ಎಷ್ಟು ಗಲಾಟೆ ಮಾಡುತ್ತಾರೆಂಬುದನ್ನು ಕೇಳಬೇಡಿ. ನಾನು ನನ್ನ ವಿದ್ಯಾರ್ಥಿಗಳಿಗೆ ಸಾಕಷ್ಟು ಸ್ವಾತಂತ್ರ್ಯ ಕೊಟ್ಟಿದ್ದೇನೆ. ಅವರು ತರಗತಿಯಲ್ಲೇನೋ ಸ್ವಲ್ಪ ಗಲಾಟೆ ಮಾಡುತ್ತಾರೆ. ಆದರೆ ಹೊರಗೆ ಗಲಾಟೆ ಮಾಡುವುದಿಲ್ಲ. ನನ್ನ ಸಹೋದ್ಯೋಗಿಗಳು ನಾನು ಹುಡುಗರನ್ನು ಕೆಡಿಸುತ್ತಿದ್ದೇನೆ, ಅವರನ್ನು ಉದ್ಧಟರನ್ನಾಗಿ ಮಾಡುತ್ತಿದ್ದೇನೆ, ಕೇವಲ ಕತೆಗಳನ್ನೇ ಹೇಳುತ್ತಿರುತ್ತೇನೆ, ಏನೂ ಕಲಿಸುವುದಿಲ್ಲ, ಆಟ ಆಡಿಸಿ ಅವರನ್ನು ಉಂಡಾಡಿಗಳನ್ನಾಗಿ ಮಾಡುತ್ತಿದ್ದೇನೆ, ಎಂದು ದೂರುತ್ತಾರೆ. ಆಗಲಿ ನೋಡೋಣ.

ನಾನನ್ನುವುದೇನೆಂದರೆ ಈ ಆಟ, ಈ ಕತೆಗಳೇ ನಿಜವಾದ ಶಿಕ್ಷಣ. ಇಷ್ಟಾದರೂ ನನ್ನ ಕೆಲಸ ಕಠಿಣವಾದದ್ದು ಎಂದು ತಿಳಿದುಕೊಂಡೇ ಮುಂದುವರಿಯಬೇಕು. ಟಣ...ಟಣ...ಟಣ...ಟಣ...ಎಂದು 12 ಗಂಟೆ ಬಾರಿಸಿತು. ನನ್ನ ವಿಚಾರ ತುಂಡಾಯಿತು. ನಾಳಿನದು ನಾಳೆ ನೋಡಿದರಾಯಿತೆಂದು ಮಗ್ಗಲು ಬದಲಿಸಿ ಮಲಗಿದೆ.

# ದ್ವಿತೀಯ ಖಂಡ
# ಪ್ರಯೋಗದ ಪ್ರಗತಿ

## 1

ಮೂರನೆಯ ತಿಂಗಳು ಪ್ರಾರಂಭವಾಯಿತು. ಇನ್ನು ಮುಂದೆ ನಿತ್ಯವೂ ಮಾಡುವ ಕೆಲಸದ ದಿನಚರಿ ಬರೆಯಬೇಕು, ಅದರಿಂದ ವಾರದಲ್ಲಿ ಎಷ್ಟು ಕೆಲಸವಾಗುತ್ತದೆನ್ನುವುದಾದರೂ ತಿಳಿದೀತು ಎಂದುಕೊಂಡೆ. ಜೊತೆಗೆ ಒಂದು ತಿಂಗಳಿನ ಕಾರ್ಯಕ್ರಮದ ರೂಪರೇಖೆಗಳನ್ನು ತಯಾರಿಸಿದೆ. ಇದರಿಂದ ನನಗೆ ದಿನಚರಿಯ ಉಪಯೋಗವೆಷ್ಟು ಎನ್ನುವುದು ಗೊತ್ತಾಯಿತು. ನನ್ನ ಈ ದಿನಚರಿ ಲಾಗ್‌ಬುಕ್ಕಿನಂತಲ್ಲ. ಕೇವಲ ಮಾರ್ಗದರ್ಶಕ ಸೂಚನೆಗಳು ಮಾತ್ರ ಅಲ್ಲಿದ್ದವು.

ಕತೆಯಂತೂ ದಿನವೂ ನಡೆದೇ ಇತ್ತು. ಆಟಗಳನ್ನು ಆಡುತ್ತಿದ್ದೆವು. ಮಧ್ಯೆಮಧ್ಯೆ ಮಾತುಕತೆ, ಆದರ್ಶವಾಚನ, ಹುಡುಗರ ಅಂಗಾಂಗಗಳ ಪರೀಕ್ಷೆ ನಡೆಯುತ್ತಿತ್ತು. ವಾಚನಾಲಯವು ಮಂದಗತಿಯಿಂದ ಅಭಿವೃದ್ಧಿಗೊಳ್ಳುತ್ತಿತ್ತು.

## 2

ನಾನು ಪಠ್ಯಕ್ರಮಗಳ ವಿಷಯಗಳನ್ನು ಒಂದೊಂದಾಗಿ ತೆಗೆದುಕೊಳ್ಳಲು ಪ್ರಾರಂಭಿಸಿದೆ. ಒಂದು ದಿನ ಬೆಳಿಗ್ಗೆ ಶ್ರುತಲೇಖನ ಬರೆಯಲು ಹೇಳಿದೆ. ಹುಡುಗರು ನನ್ನ ಮುಖ ನೋಡತೊಡಗಿದರು. ನಾನು ಶ್ರುತಲೇಖನ ಬರೆಸುತ್ತೇನೆ, ಪಾಠ ಕಲಿಸುತ್ತೇನೆ, ನಕಾಶೆ ಬಗ್ಗೆ ಕೇಳುತ್ತೇನೆ ಎಂದು ಅವರು ತಿಳಿದಿರಲಿಲ್ಲ. ನಾನು ಮತ್ತೆ ಹೇಳಿದೆ. 'ಹೂಂ. ಬರೆಯಿರಿ..' ಆದರೆ ಬಹಳ ಹುಡುಗರ ಹತ್ತಿರ ಪೆನ್ನು, ನೋಟ್‌ಬುಕ್ ಇರಲಿಲ್ಲ. ಬೇರೆ ವರ್ಗದಿಂದ ನಾನು ನೋಟ್‌ಬುಕ್ ಹಾಗೂ ಪೆನ್ನುಗಳನ್ನು ತರಿಸಿದೆ. ಶ್ರುತಲೇಖನವನ್ನು ಬರೆಸಲು ಸಿದ್ಧನಾದೆ. ಎಷ್ಟೋ ಮಕ್ಕಳು ಮೋರೆ ಸೊಟ್ಟಗೆ ಮಾಡಿದರು. ಒಬ್ಬನೆಂದ 'ಗುರುಗಳೆ ಕತೆ ಹೇಳುವುದಿಲ್ಲವೆ?...ಶ್ರುತಲೇಖನವನ್ನು ಯಾವುದರಿಂದ ಬರೆಸುವಿರಿ?...'

ನಾನೆಂದೆ 'ಇಲ್ಲಿ ಕೇಳಿ, ಶೃತಲೇಖನ ಹೇಗೆ ಬರೆಯಬೇಕು ಎನ್ನುವುದನ್ನು ತಿಳಿಸಿಕೊಡುವೆ. ನಾನು ಹೇಳುತ್ತಿರುವಾಗ ನೀವು ಸರಿಯಾಗಿ ನನ್ನ ಕಡೆಗೆ ನೋಡುತ್ತಿರಬೇಕು. ಹೇಳುವುದು ಮುಗಿದ ಮೇಲೆ ಸರಿಯಾಗಿ ಕೇಳಿ ತಿಳಿದುಕೊಂಡು ಅದನ್ನು ಬರೆಯಬೇಕು. ಪುನಃ ಎರಡನೆ ವಾಕ್ಯ ಕೇಳಿಸಿಕೊಳ್ಳಲು ನನ್ನ ಕಡೆಗೆ ನೋಡಬೇಕು.' ಈ ರೀತಿಯಾಗಿ ನಾನು ಬರೆಸಲು ಪ್ರಾರಂಭಿಸಿದೆ. ಆದರೆ ಅವರ ಹಳೆಯ ಅಭ್ಯಾಸ ಒಮ್ಮಿಂದೊಮ್ಮೆಲೆ ಹೇಗೆ ಬಿಟ್ಟೀತು? ಮುಂದೆ ಸಾವಕಾಶವಾಗಿ ಎಲ್ಲರಿಗೂ ಇದೇ ಅಭ್ಯಾಸವಾಯಿತು. ಮೇಲಿಂದ ಮೇಲೆ ಹೇಳುವ ಪ್ರಸಂಗವೇ ಬರಲಿಲ್ಲ. ನಾನು ಕೇವಲ ಒಂದು ಸಲ ಹೇಳುತ್ತಿದ್ದೆ, ಎರಡನೆ ಸಲ ಅವರಿಗೆ ಹೇಳುತ್ತಲೇ ಇರಲಿಲ್ಲ.

ಶೃತಲೇಖನ ಬರೆಸಿದ ನೋಟ್ ಬುಕ್ಕುಗಳನ್ನು ಎಲ್ಲರೂ ಕೆಳಗಿಟ್ಟರು. ನಾನು ಎಲ್ಲವನ್ನೂ ಪರೀಕ್ಷಿಸಿದೆ. ಅಕ್ಷರಗಳಲ್ಲಿ ಸಾಕಷ್ಟು ತಪ್ಪುಗಳಾಗಿದ್ದವು. ಒತ್ತಕ್ಷರಗಳ ಬಗೆಗಂತೂ ಹೇಳುವುದೇ ಬೇಡ. ಅಕ್ಷರಗಳನ್ನು ಸುಂದರವಾಗಿಯೂ ಬರೆದಿರಲಿಲ್ಲ.

ನಾನು ಯಾರ ತಪ್ಪನ್ನೂ ಎತ್ತಿ ತೋರಿಸಲಿಲ್ಲ. ಒಂದೊಂದಾಗಿ ಎಲ್ಲರ ನೋಟ್‌ಬುಕ್ಕುಗಳನ್ನು ನೋಡಿ ಮರಳಿ ಕೊಟ್ಟೆ. ಎಲ್ಲರೂ 'ನಮ್ಮ ತಪ್ಪುಗಳು ಎಷ್ಟಾಗಿವೆ. ನಮಗೆ ಹೆಚ್ಚು ಮಾರ್ಕ್ಸ್ ಕೊಡಿರಿ. ಇವನಿಗೆ ಕಡಿಮೆ ಕೊಡಿರಿ.' ಎಂದು ಕೇಳತೊಡಗಿದರು.

ಅಷ್ಟರಲ್ಲಿ ಒಬ್ಬ ಹುಡುಗ ಹೇಳಿದ, 'ಇನ್ನು ಮುಂದೆ ನಮಗೆ ಲಕ್ಷ್ಮೀಶಂಕರರು ಹೇಳುತ್ತಾರೆ, ಮಾರ್ಕ್ಸ್‌ಗಳನ್ನು ಕೊಡುತ್ತಾರೆ. ..'

ನಾನು ಹೇಳಿದೆ 'ನಾನು ಅಂತಹದೇನನ್ನೂ ಮಾಡುವುದಿಲ್ಲ. ನಿಮಗೆಲ್ಲ ಓದಲು ಬರುತ್ತದೆ. ನಾಳೆ ಮತ್ತೆ ಬರೆಯಿರಿ. ಹೀಗೆ ಬರೆಯುತ್ತಾ ಚೆನ್ನಾಗಿ ಬರೆಯಲಾರಂಭಿಸುವಿರಿ. ದಿನವೂ ಬರೆಯುತ್ತಾ ಹೋದರೆ ಚೆನ್ನಾಗಿ ಏಕೆ ಬರುವುದಿಲ್ಲ, ತಪ್ಪುಗಳನ್ನು ತೋರಿಸಿ ಮಾಡುವುದಾದರು ಏನು?'

ಒಬ್ಬನೆಂದ 'ಆದರೆ ಮಾರ್ಕ್ಸ್‌ಗಳು.... ಪಾಸು – ನಾಪಾಸು....?'

ನೀವು ನನ್ನಿಂದ ಕತೆಗಳನ್ನು ಕೇಳುತ್ತೀರಿ. ಆಗ ಪಾಸು – ನಾಪಾಸು ಆಗುವಿರಾ?'

'ಈ ಒಳ್ಳೆಯ ಬಟ್ಟೆ ಹಾಕಿಕೊಂಡವರಲ್ಲಿ ಯಾರಾದರೂ ಪಾಸು – ನಾಪಾಸು ಆಗುತ್ತಾರೆಯೇ?'

'ಇಲ್ಲ'.

'ಆಟ ಆಡುತ್ತೀರಿ. ಇದರಲ್ಲಿ ನಿಮಗೆ ಮಾರ್ಕ್ಸ್ ಬರುತ್ತವೆಯೇ?'

'ಇಲ್ಲ'.

'ನಿಮ್ಮಲ್ಲಿ ಕೆಲವರು ಎತ್ತರವಿದ್ದೀರಿ ಇನ್ನು ಕೆಲವರು ಕುಳ್ಳರಿದ್ದೀರಿ. ಇದಕ್ಕಾಗಿ ನಿಮ್ಮನ್ನು ಯಾರಾದರು ಪಾಸು – ನಾಪಾಸು ಮಾಡುತ್ತಾರೆಯೇ?'

'ಇಲ್ಲ'.



'ನಿಮ್ಮಲ್ಲಿ ಕೆಲವರು ದಪ್ಪ, ಇನ್ನು ಕೆಲವರು ತೆಳ್ಳಗಿದ್ದೀರಿ. ಇದರಿಂದ ಪಾಸು – ನಾಪಾಸು ಆಗುತ್ತೀರಾ?'

'ಇಲ್ಲ'.

'ನಿಮ್ಮಲ್ಲಿ ಕೆಲವರು ಶ್ರೀಮಂತರಿದ್ದೀರಿ, ಕೆಲವರು ಬಡವರಿದ್ದೀರಿ. ಇದಕ್ಕಾಗಿ ನಿಮಗೆ ಶಾಲೆಯಲ್ಲಿ ಮಾರ್ಕ್ಸ್‌ಗಳು ದೊರೆಯುತ್ತವೆಯೇ?'

'ಇಲ್ಲ'.

'ಈಗ ತಿಳಿಯಿತಲ್ಲವೇ?'

'ನಮ್ಮ ಕ್ಲಾಸಿನಲ್ಲಿ ಪಾಸು – ನಾಪಾಸು ಬೇಕಾಗಿಲ್ಲ. ಯಾರಿಗೆ ಕವಿತೆ ನೆನಪಿದೆಯೋ ಅವರು ಹಾಡಲಿ, ಯಾರಿಗೆ ನೆನಪಿಲ್ಲವೋ ಅವರು ಕಂಠಪಾಠ ಮಾಡಿಕೊಳ್ಳಲಿ, ಯಾರಿಗೆ ಆಡಲು ಬರುವುದಿಲ್ಲವೋ ಅವರು ಬೇರೆಯವರನ್ನು ನೋಡಿ ಕಲಿಯಲಿ. ಆಟ ಆಡಲು ಬಂದರೆ ಚೆನ್ನಾಗಿ ಆಡಿ, ಆನಂದ ಪಡೆಯಿರಿ. ಶೃತಲೇಖನದಲ್ಲಿ ಯಾರು ಸುಂದರವಾಗಿ ಬರೆಯುತ್ತಾರೋ ಅವರನ್ನು ನೋಡಿ ಬೇರೆಯವರು ಕಲಿತುಕೊಳ್ಳಲಿ, ನಾನು ಯಾರನ್ನಾದರು ಪ್ರಶ್ನೆ ಕೇಳಿದರೆ, ಉತ್ತರ ಅವರಿಗೆ ನೆನಪಿರದಿದ್ದರೆ, ಅದು ಯಾರಿಗೆ ನೆನಪಿದೆಯೋ ಅವರು ಹೇಳಲಿ.'

ಎಲ್ಲರೂ ಆಶ್ಚರ್ಯಚಕಿತರಾಗಿ ನನ್ನ ಕಡೆಗೆ ನೋಡುತ್ತಿದ್ದರು. 'ನಮ್ಮ ತರಗತಿ ಅದ್ಭುತವಾದದ್ದು, ಹೊಸದಾಗಿದ್ದು, ಇಲ್ಲಿ ಹೊಸ ರೀತಿಯಿಂದ ಕೆಲಸ ಆಗುತ್ತಿದೆ. ಇದು ನಮ್ಮ ತರಗತಿ.' ಎನ್ನುವ ಶಬ್ದಗಳ ಮೇಲೆ ಒತ್ತು ಕೊಟ್ಟು ಎರಡು ಮೂರು ಸಲ ಹೇಳಿದೆ. ಮಕ್ಕಳಿಗೆ ಅದು ಬಹಳ ಹಿಡಿಸಿತು.

'ನಮ್ಮ ತರಗತಿ, ನಮ್ಮ ತರಗತಿ ನಮ್ಮ ತರಗತಿಯೆಂದರೆ ಒಂದು ಹೊಸದು. ಅಪೂರ್ವವಾದುದು. ' ಎಂದು ಮಕ್ಕಳೆಲ್ಲಾ ಹೇಳತೊಡಗಿದರು.

ಶೃತಲೇಖನದ ಬಗ್ಗೆ ಒಂದು ವಾರದಲ್ಲಿ ನಾನು ಎಲ್ಲ ತಪ್ಪುಗಳನ್ನು ಸುಧಾರಿಸಿದೆ. ಮಕ್ಕಳಿಗೆ ನಿತ್ಯವೂ ಒಂದು ಪುಸ್ತಕದಲ್ಲಿ ನಾಲ್ಕು ಗೆರೆಗಳನ್ನು ಎಳೆದುಕೊಂಡು ಶುದ್ಧವಾಗಿ ಬರೆದುಕೊಂಡುಬರಲು ತಿಳಿಸಿದೆ. ನಿತ್ಯವೂ ಹತ್ತು ನಿಮಿಷ ಬರೆಸಲು ಪ್ರಾರಂಭಿಸಿದೆ. ಒಬ್ಬರು ಇನ್ನೊಬ್ಬರಿಗೆ ಹೇಳಿ ಬರೆಸಲು, ತಪ್ಪುಗಳನ್ನು ತಿದ್ದಲು 15 ದಿನಗಳ ವರೆಗೆ ಹೇಳಿದೆ.

ಒತ್ತಕ್ಷರಗಳನ್ನು ಶುದ್ಧವಾಗಿ ಬರೆಯಲು ಕಲಿಸುವುದಕ್ಕೋಸ್ಕರ ನಾಲ್ಕನೆಯ ವರ್ಗದ ಪುಸ್ತಕದಲ್ಲಿರುವ ಶಬ್ದಗಳು ಬರುವಂತೆ ಒಂದು ಪುಸ್ತಕವನ್ನು ತಯಾರಿಸಿದೆ. ಅದನ್ನು ಮೇಲಿಂದ ಮೇಲೆ ಎಲ್ಲರಿಗೂ ಓದಲು ಕೊಟ್ಟೆ. ಅವುಗಳನ್ನು ಅವರವರ ನೋಟ್‌ಬುಕ್ಕುಗಳಲ್ಲಿ ಬರೆಯಲು ತಿಳಿಸಿದೆ, ನಾಲ್ಕನೆಯ ಪುಸ್ತಕದಲ್ಲಿ ಬರುವ ಕಠಿಣ ಪದಗಳ ಒಂದು ಪಟ್ಟಿಯನ್ನು ಮಾಡಿ, ಅದರ ಉಪಯೋಗವನ್ನು ಮಾಡಿಸಿದೆ. ಈಗ ನಮ್ಮ ಕೆಲಸ ಸರಿಯಾಗಿ ನಡೆಯತೊಡಗಿತು.

## 3

ಒಂದು ದಿನ ನಮ್ಮ ಪಕ್ಕದ ಇನ್ನೊಂದು ತರಗತಿಯಿಂದ 'ಅಯ್ಯೋ ಸತ್ತೆ, ಕೊಂದರು' ಎಂಬ ಕೂಗು ಕೇಳಿಸಿತು.

ನಮ್ಮ ಕಿವಿಗಳು ನೆಟ್ಟಗಾದವು. ನಾನು ಕತೆ ಹೇಳುತ್ತಿದ್ದೆ. ಮಕ್ಕಳ ಗಮನವೂ ಆ ಕಡೆಗೆ ಹೋಯಿತು. ನಾನು ಕತೆಯನ್ನು ನಿಲ್ಲಿಸಿ 'ಯಾರಾದರೊಬ್ಬರು ಹೋಗಿ ಏನೆಂಬುದನ್ನು ತಿಳಿದುಕೊಂಡು ಬನ್ನಿ' ಎಂದು ಹೇಳಿದೆ.

ಒಬ್ಬ ಬುದ್ಧಿವಂತ ಹುಡುಗ ಹೋಗಿ ನೋಡಿ ಬಂದು ಹೇಳಿದ: 'ಆ ತರಗತಿಯ ಜೀವನಲಾಲನನ್ನು ಮಾಸ್ತರರು ಹೊಡೆದಿದ್ದಾರೆ.'

'ಯಾಕೆ?'

'ಅವನಿಗೆ ಭೂಗೋಳ ನೆನಪಿರಲಿಲ್ಲವಂತೆ'.

'ಆದರೆ ಇದಕ್ಕಾಗಿ ಹೊಡೆಯುವುದೇಕೆ?'

ನನ್ನ ಕ್ಲಾಸಿನ ಒಬ್ಬ ಹುಡುಗ ಕೇಳಿದ: 'ಪಾಠ ನೆನಪಿಟ್ಟುಕೊಂಡು ಬರದಿದ್ದರೆ ಮತ್ತೇನು ಮಾಡಬೇಕು ಗುರುಗಳು?'

'ಆದರೆ ನೆನಪೇ ಇರದಿದ್ದರೆ?'

ಎರಡನೆಯವನೆಂದ: 'ಪಾಠ ನೆನಪಿಟ್ಟುಕೊಳ್ಳಲೇಬೇಕು. ಇಲ್ಲವಾದರೆ ಗುರುಗಳೇನು ಮಾಡಬೇಕು? ಶಿಕ್ಷೆ ಕೊಡಲೇಬೇಕಲ್ಲವೇ?'

ನಾನು ಕೇಳಿದೆ: 'ಹೊಡೆದರೂ ನೆನಪು ಉಳಿಯದಿದ್ದರೆ...?'

ಮೂರನೆಯವನೆಂದ: 'ಆಗ ಗುರುಗಳು ಹೊಡೆದೇ ಹೊಡೆಯುತ್ತಾರೆ, ಶಿಕ್ಷೆ ಕೊಡುತ್ತಾರೆ.'

ನಾನು ಕೇಳಿದೆ, 'ಸರಿ, ಹಾಗಾದರೆ ನಿಮ್ಮಲ್ಲಿ ಯಾರು ಯಾರು ಹೊಡೆತ ತಿನ್ನಲು ಸಿದ್ಧರಿದ್ದೀರಿ?'

ಎಲ್ಲರೂ ಹೇಳಿದರು: 'ಇಲ್ಲ, ಇದಕ್ಕೆ ಯಾರು ತಾನೆ ಸಿದ್ಧರಿರುತ್ತಾರೆ?'

'ನಾನು ಪಾಠ ಹೇಳಿಕೊಟ್ಟಾಗ, ನೀವು ನೆನಪಿಟ್ಟುಕೊಳ್ಳದೆ ಹೋದರೆ ನಾನು ಹೊಡೆಯಬೇಕು, ಅಲ್ಲವೇ?'

'ಆದರೆ ನಾವು ಪಾಠ ಖಂಡಿತವಾಗಿಯೂ ನೆನಪಿನಲ್ಲಿಟ್ಟುಕೊಂಡು ಬರುತ್ತೇವೆ'.

'ನೀವು ಕಂಠಪಾಠ ಮಾಡಿದರೂ ನೆನಪಿನಲ್ಲಿ ಉಳಿಯದೆ ಹೋದರೆ?'

'ಆದರೂ ಶಿಕ್ಷೆ ಕೊಡದಿದ್ದರೆ ಒಳ್ಳೆಯದು. ನಮಗೆ ನೆನಪಿರದಿದ್ದರೆ ಮತ್ತೆ ಕಲಿಸಿ. ನಾವು ಪುನಃ ಕಂಠಪಾಠ ಮಾಡುತ್ತೇವೆ..'

'ಆಗಲಿ. ನಾವು ಈಗ ಕತೆಯನ್ನು ಮುಂದುವರೆಸೋಣವೇ?'

ಆದರೆ ಮಕ್ಕಳ ಮನಸ್ಸು ಇಂದು ಜೀವನಲಾಲನಲ್ಲಿತ್ತು. ನೋಡಿರಿ, ಆ ಜೀವನಲಾಲ ಬಹಳ ಉದಾಸೀನನಾಗಿದ್ದಾನೆ. ಆಮೇಲೆ ಆ ಮಾಸ್ತರರಿಗೆ ಬೈಯುತ್ತಾನೆ. ಬೋರ್ಡಿನ ಮೇಲೆ ಅವರ ಚಿತ್ರ ಬರೆದು ಬೈಗುಳನ್ನು ಬರೆಯುತ್ತಾನೆ, ಎಂದು ಅವರು ಯೋಚಿಸುತ್ತಿದ್ದರು.



ನಾನೆಂದೆ: 'ಜೀವನ ಹಾಗೆಲ್ಲಾ ಮಾಡಬಾರದು. ಗುರುಗಳ ಸಂಗಡ ಹೀಗೆ ಮಾಡುವುದು ಸರಿಯಲ್ಲ'. 'ಆದರೆ ಗುರುಗಳೂ ಅವನನ್ನು ಬಹಳ ಹೊಡೆಯುತ್ತಾರೆ' ಎಂದರು ಎಲ್ಲ ಹುಡುಗರು.

'ಇದಕ್ಕೇನು ಉಪಾಯ?'

'ಅವನನ್ನು ಹೊಡೆಯಬಾರದು.'

'ಮತ್ತೆ ಪಾಠದ ಗತಿ ಏನು?'

'ಪಾಠ ನೆನಪಿನಲ್ಲಿಟ್ಟುಕೊಂಡು ಬರದೆ ಹೋದರೆ ಹೆಸರು ತೆಗೆದು ಮನೆಗೆ ಕಳಿಸಲಿ, ಹೊಡೆಯುವುದರಿಂದ ಹುಡುಗರು ನಿತ್ಯವೂ ಏಟು ತಿನ್ನುವುದಷ್ಟೇ ಆಗುತ್ತದೆ.'

ಒಬ್ಬನೆಂದ: 'ಜೀವನಲಾಲನಿಗೆ ಓದಿನಲ್ಲಿ ಮನಸ್ಸೇ ಇಲ್ಲ. ಅವನಿಗೆ ಮೊಲ ಹಿಡಿಯುವುದು ಬಹಳ ಇಷ್ಟ. ದನಕಾಯುವುದು ಇಷ್ಟ.'

ಎರಡನೆಯವನೆಂದ: ಜೀವನಲಾಲ ಶಾಲೆಯಲ್ಲಿ ಮಾತ್ರ ಏಟು ತಿನ್ನುತ್ತಾನೆ. ಹೊರಗೆ ಎಲ್ಲ ಹುಡುಗರನ್ನೂ ಹೊಡೆಯುತ್ತಾನೆ. ನಾವೆಲ್ಲರೂ ಅವನಿಗೆ ಹೆದರುತ್ತೇವೆ.'

ನಾನು ಕೇಳಿದೆ: 'ಅವನದು ಯಾವ ಜಾತಿ?'

ಹುಡುಗರೆಂದರು: 'ಅವನು ಹರಿಜನ. ಅವರ ತಂದೆ ಸರಕಾರಿ ನೌಕರ. ಒತ್ತಾಯದಿಂದ ಮಗನಿಗೆ ಓದಿಸುತ್ತಿದ್ದಾರೆ. ಮನೆಯಲ್ಲಿ ಕಲಿಸಲು ಒಬ್ಬ ಮಾಸ್ತರರನ್ನು ನಿಯಮಿಸಿದ್ದಾರೆ'.

'ಹೋಗಲಿ ಬಿಡಿ. ನಾವು ಕತೆ ಮುಗಿಸೋಣ.'

ಕತೆ ಮುಗಿಸಿ ನಾವು ಎದ್ದೆವು. ಅಷ್ಟರಲ್ಲಿ ಶಿಕ್ಷೆ ಹಾಗೂ ಅದರ ಪರಿಣಾಮದ ಬಗೆಗೆ ವಿಚಾರ ಮಾಡುತ್ತ ಮನೆಗೆ ಹೋದೆ. ನಾನು ಯಾರಿಗೂ ಶಿಕ್ಷೆ ಕೊಡುವವನಿದ್ದಿಲ್ಲ. ಹೀಗಾಗಿ ನಾನು ನಿಶ್ಚಿಂತನಾಗಿದ್ದೆ.

ಇದೇ ರೀತಿ ಕೆಲವು ದಿನಗಳು ಮತ್ತೆ ಕಳೆದವು.

## 4

ಒಂದು ದಿನ ನಾನು ಮೇಲಧಿಕಾರಿಗಳನ್ನು ಭೆಟ್ಟಿಯಾಗಿ ಹೇಳಿದೆ: 'ಸರ್, ಎಲ್ಲ ಬಾಲಕರು ಪಾಠಶಾಲೆಗೆ ಸ್ವಚ್ಛ ಬಟ್ಟೆಯನ್ನು ಧರಿಸಿಕೊಂಡೇ ಬರಬೇಕು ಎಂದು ಆಜ್ಞೆ ಹೊರಡಿಸಿ. ತಲೆ ಮೇಲೆ ಟೊಪ್ಪಿಗೆ ಧರಿಸುವುದಾದರೆ ಅದು ಹೊಲಸಾಗಿರಬಾರದು. ಪ್ರತಿವಾರ ಮಕ್ಕಳು ಉಗುರ ಕತ್ತರಿಸಿಕೊಂಡು ಬರಬೇಕು. ಗುಂಡಿ ಇಲ್ಲದ ಅಥವಾ ಅರ್ಧ ಗುಂಡಿಗಳಿರುವ ಅಂಗಿಗಳನ್ನು ಯಾರೂ ಹಾಕಿಕೊಂಡು ಬರಬಾರದು. ಪ್ರತಿಯೊಬ್ಬರೂ

ಸ್ನಾನ ಮಾಡಿಯೇ ಶಾಲೆಗೆ ಬರಬೇಕು. ಏನಿಲ್ಲವೆಂದರೂ ಕೈ, ಕಾಲುಗಳನ್ನಾದರೂ ತೊಳೆದುಕೊಂಡು ಬರಬೇಕು.'

ಅಧಿಕಾರಿಗಳು ನಾನು ಹೇಳಿದ್ದನ್ನು ಶಾಂತವಾಗಿ ಕೇಳಿಕೊಂಡು ನಗುತ್ತ ನುಡಿದರು.

'ಯಾಕೆ, ನೀವು ಹೇಳಿದರೆ ಪಾಲಕರು ಮಾತು ಕೇಳಲಾರರೆ?'

'ನಾನು ಬಹಳ ಸಲ ತಿಳಿಸಿ ಹೇಳಿದ್ದೇನೆ. ಒಂದು ಮಾತೂ ಅವರಿಗೆ ತಟ್ಟುವುದೇ ಇಲ್ಲ. ಶ್ರೀಮಂತ ಪಾಲಕರೂ ತಿಳಿದುಕೊಳ್ಳುವುದಿಲ್ಲ.' 'ನಾವು ಸಹ ಹೀಗೆಯೇ ಶಾಲೆಗೆ ಹೋಗುತ್ತಿದ್ದೆವು. ನಿತ್ಯವೂ ಸಾಯುವವರಿಗೆ ಅಳುವವರು ಯಾರು?. ನಿಮ್ಮ ಕೆಲಸ ಕಲಿಸುವುದು, ಕಲಿಸಿ. ಇದನ್ನೆಲ್ಲ ನಾವು ನೋಡಿಕೊಳ್ಳುತ್ತೇವೆ' ಎನ್ನುತ್ತಾರೆ. ಹೀಗಾಗಿ ಬಹಳ ಕಡಿಮೆ ಸುಧಾರಣೆಯಾಗಿದೆ. ಇಂಥ ವಿದ್ಯಾರ್ಥಿಗಳಿಗೆ ಕಲಿಸುವುದು ನನಗೆ ಕಷ್ಟ.'

'ನೀವು ಸರಿಯಾಗೇ ಹೇಳಿದಿರಿ. ನಮ್ಮ ಸಮಾಜವೇ ಹೀಗೆ. ಇದರ ಸಂಸ್ಕಾರವನ್ನು ಬದಲಿಸುವುದೆಂದರೆ ಅಸಾಧ್ಯವಾದುದನ್ನು ಮಾಡಲು ಪ್ರಯತ್ನಿಸಿದಂತೆ. ಆದರೂ ಈ ವಿಭಾಗ ನನ್ನ ಕೈಗೆ ಬಂದ ಮೇಲೆ ಪಾಲಕರ ಮೇಲೂ ಪ್ರಭಾವ ಸ್ವಲ್ಪ ಆಗುತ್ತಲಿದೆ.'

'ಹಾಗಾದರೆ ತಾವು ಈ ಆಜ್ಞೆಯನ್ನು ಹೊರಡಿಸುವುದು ನನ್ನ ಅಧಿಕಾರಕ್ಕೆ ಮೀರಿದ ಮಾತು.'

'ತಮ್ಮ ಅಧಿಕಾರಕ್ಕೆ ಮೀರಿದ್ದು? ಆದರೆ ತಾವು ಇಷ್ಟು ದೊಡ್ಡ ಅಧಿಕಾರಿಗಳಿದ್ದೀರಲ್ಲ.'

'ಇದು ಒಂದು ಸಣ್ಣ ತಾಲ್ಲೂಕು. ಬೇರೆ ಕಡೆಯೂ ಅಧಿಕಾರಿಗಳ ಹತ್ತಿರ ಇಷ್ಟು ಅಧಿಕಾರ ಇರುವುದಿಲ್ಲ.'

'ಹಾಗಾದರೆ ಮುಂದೆ ಹೇಗೆ?'

'ನೀವು ಮೇಲಿನ ಅಧಿಕಾರಿಗಳನ್ನು ಕಂಡು ಮಾತನಾಡಿರಿ. ಅವರೇ ಇಂತಹ ಅಜ್ಞೆ ಹೊರಡಿಸುವುದು ಸಾಧ್ಯ. ಆದರೆ ಜನರು ಈ ಅಜ್ಞೆಗಳನ್ನು ಎಲ್ಲಿ ಪಾಲಿಸುತ್ತಾರೆ? ಅವರು ಪಾಲಿಸದೆ ಹೋದರೆ ನಾವೇನು ಮಾಡಲು ಸಾಧ್ಯ?'

'ಮಕ್ಕಳನ್ನು ಶಾಲೆಯಿಂದ ಹೊರಗೆ ಹಾಕಬಹುದಲ್ಲವೆ?'

'ಹಾಗೆ ಮಾಡಲು ಬರುವುದಿಲ್ಲ. ಹಾಗೆ ಮಾಡಿದರೆ ಬಹಳ ದೊಡ್ಡ ಗಲಾಟೆಯೇ ಆದೀತು.'

'ಮಾಡಬೇಕೆಂದರೆ ಎಲ್ಲವೂ ಸಾಧ್ಯವಿದೆ, ಅಧಿಕಾರವಿಲ್ಲದಿದ್ದರೆ ಕೌಶಲ್ಯದ ಉಪಯೋಗವೇನು? ಶಿಕ್ಷಕರ ಅಸ್ತಿತ್ವವಾದರೂ ಏನು?'

'ಇರಲಿ, ಈಗ ಹೇಗೆ ನಡೆಯುತ್ತದೆಯೋ ಹಾಗೆಯೇ ನಡೆಸಿ.'

'ಅದು ಆಗಲಾರದು, ತರಗತಿಯಲ್ಲಿಯೇ ಎಷ್ಟು ಸಾಧ್ಯವೋ ಅಷ್ಟು ಪ್ರಯತ್ನಗಳನ್ನು ನಾನು ಮಾಡುವೆ. ಮಕ್ಕಳಲ್ಲಿ ಇಂಥ ಹವ್ಯಾಸ ಬೆಳಸುವುದಷ್ಟೇ ಅಲ್ಲ, ಅವಕಾಶ ಸಿಕ್ಕರೆ ಈ ವಿಷಯವಾಗಿ ಒಂದು ಸಾರ್ವಜನಿಕ ಅಂದೋಲನ ನಡೆಸುವೆ. ಹೇಗೇ ಇರಲಿ,





ನಿಮ್ಮ ಮುಖ, ಕಣ್ಣು ಅಥವಾ ಮೂಗು ಕೊಳಕಾಗಿದ್ದರೆ
ನಲ್ಲಿಯ ಬಳಿ ಹೋಗಿ ತೊಳೆದುಕೊಂಡು ಬನ್ನಿ.

ನಮ್ಮ ಶಾಲೆಗಳ ಈ ಹೊಲಸು ವಾತಾವರಣ ಸಾವಿರಾರು ರೋಗಗಳಿಗೆ ತವರು ಮನೆಯಾಗಿಧೆ. ಆದನ್ನು ತೊಡೆದುಹಾಕಲೇ ಬೇಕು.'

'ಆಗಲಿ, ನಿಮಗೆ ಹೇಗೆ ಬೇಕೋ ಹಾಗೆ ಮಾಡಿ, ಪ್ರಯೋಗವನ್ನೇ ಮಾಡಲು ಬಂದಿರುವಿರಲ್ಲ. ಆದರೆ ಈಗ ನಾಲ್ಕನೆ ತಿಂಗಳು ಮುಗಿಯುತ್ತ ಬಂದಿದೆ. ನೆನಪಿಡಿ, ಬಹಳ ಶೀಘ್ರಗತಿಯಿಂದ ಮುಂದೆ ಹೋಗಬೇಕು' ಎಂದು ಅಧಿಕಾರಿಗಳು ನುಡಿದರು.

ನಮಸ್ಕಾರ ಮಾಡಿ ಮನೆಗೆ ಬಂದೆ.

ನಾನು ನನ್ನ ಹಣದಿಂದಲೇ ಎರಡು ಒಳ್ಳೆಯ ಕಸಬರಿಗೆಗಳನ್ನು ತೆಗೆದುಕೊಂಡೆ. (ಕಂಟಿಜೆನ್ಸಿ ಹಣದಲ್ಲಿ ಏನು ಖರೀದಿಸಲು ಸಾಧ್ಯ!) ಒಂದು ಚಿಕ್ಕ ಕನ್ನಡಿ, ಒಂದು ಬಾಚಣಿಗೆ, ಎರಡು ಖಾದಿ ಟವಲ್, ಒಂದು ಕತ್ತರಿ ಮುಂತಾದವನ್ನು ಖರೀದಿ ಮಾಡಿದೆ. ಶಾಲೆಯ ಅಂಗಳದಲ್ಲಿ ಒಂದು ಕೊಳಾಯಿ ಇತ್ತು. ಆ ದಿನ ಇವುಗಳನ್ನು ತರಗತಿಯಲ್ಲಿ ಇಟ್ಟುಕೊಂಡೆ. ಮರುದಿನ ಎಲ್ಲ ಬಾಲಕರನ್ನು ಸಾಲಾಗಿ ನಿಲ್ಲಿಸಿದೆ. ಅವರು ಸಾಕಷ್ಟು ಆಸಕ್ತಿ ತಳೆದಿದ್ದರು. ನನ್ನನ್ನು ಪ್ರೀತಿಸತೊಡಗಿದ್ದರು. ನಾನು ಮಾಡುವುದೆಲ್ಲವೂ ಅವರ ಒಳ್ಳೆಯದಕ್ಕಾಗಿಯೇ ಎಂಬ ಭರವಸೆ ಅವರಿಗೆ ಬಂದಿತ್ತು. ಕನ್ನಡಿಯಲ್ಲಿ ಅವರಿಗೆ ಅವರ ಮುಖಗಳನ್ನು ತೋರಿಸಿದೆ. 'ಯಾರ ಮೂಗು, ಕಣ್ಣು, ಬಾಯಿ, ಹೊಲಸಾಗಿದೆಯೋ ಅವರು ಕೊಳಾಯಿಯ ಬಳಿ ಹೋಗಿ ತೊಳೆದುಕೊಳ್ಳಿರಿ. ಕೈಕಾಲು ಕೂದಲುಗಳನ್ನು ತೊಳೆದುಕೊಂಡು ಬನ್ನಿ.'

ಎಲ್ಲರು 'ಹಾಂ...ಹೂಂ... ' ಎನ್ನುತ್ತ ಒಬ್ಬರ ಮೇಲೊಬ್ಬರು ಬೀಳುತ್ತ ಕೈಕಾಲು ಮುಖ ತೊಳೆಯತೊಡಗಿದರು.

ಅನಂತರ ನಾನೊಂದು ಗೆರೆ ಎಳೆದು ಎಲ್ಲರೂ ಈ ಗೆರೆಯ ಮೇಲೆ ನಿಂತುಕೊಂಡು ಒಬ್ಬೊಬ್ಬರಾಗಿ ಕೊಳಾಯಿ ಬಳಿ ಹೋಗಿ ಬನ್ನಿ ಎಂದು ಹೇಳಿದೆ. ನಾನು ಎರಡೂ ಕೈಗಳಲ್ಲಿ ಖಾದಿ ಬಟ್ಟೆಯ ಎರಡು ತುಂಡುಗಳನ್ನು ಹಿಡಿದು ನಿಂತುಕೊಂಡೆ. ಹುಡುಗರು ಕೈಕಾಲು, ಮುಖ, ತಲೆ ಒರೆಸಿಕೊಂಡರು.

ಪಾಠಶಾಲೆಯ ಅಂಗಳದಲ್ಲಿ ಹೀಗೆ ಎಂದೂ ಆಗಿರಲಿಲ್ಲ. ರಸ್ತೆಯಲ್ಲಿ ಹೋಗುವ ಜನರೆಲ್ಲ ನಿಂತು ನೋಡತೊಡಗಿದರು.

ಕೈಕಾಲು, ಮುಖ ತೊಳೆದಾದ ಮೇಲೆ ನಾವು ತರಗತಿಗೆ ಬಂದೆವು. ಬಾಚಣಿಗೆಯನ್ನು ಕೊಡುತ್ತಾ, ಎಲ್ಲರಿಗೂ ಕೂದಲನ್ನು ಬಾಚಿಕೊಳ್ಳಲು ಹೇಳಿದೆ. ಟೊಪ್ಪಿಗೆಗಳನ್ನು ಒಂದು ಮೂಲೆಯಲ್ಲಿ ಇರಿಸಿದ್ದೆ. ಹುಡುಗರು ಸ್ವಚ್ಛ, ಸುಂದರ ಹಾಗೂ ಆರೋಗ್ಯವಂತರಾಗಿ ಕಾಣಿಸುತ್ತಿದ್ದರು. ಅವರನ್ನು ಸುತ್ತಲೂ ಕೂಡಿಸಿಕೊಂಡು, 'ಈಗ ನೋಡಿ, ನಿಮ್ಮ ಕೈಗಳು ಎಷ್ಟು ಸ್ವಚ್ಛವಾದವು. ನಿಮ್ಮ ಮುಖಗಳು ಎಷ್ಟು ಸುಂದರವಾಗಿವೆ. ಇದು ನಿಮಗೆ ಇಷ್ಟವಿಲ್ಲವೆ?' ಎಂದು ಕೇಳಿದೆ.

ಎಲ್ಲರೂ 'ಹೌದು ತುಂಬಾ ಇಷ್ಟ' ಅಂದರು.

ನಾನು ಹೇಳಿದೆ: 'ಹಾಗಾದರೆ ದಿನವೂ ಶಾಲೆಗೆ ಬಂದ ಕೂಡಲೇ ನೀವು ಈ ಕೆಲಸ ಮಾಡಬೇಕು. ನಂತರ ನಾವು ಬೇರೆ ಕೆಲಸ ಮಾಡೋಣ.' ಆ ದಿನ ನನಗೆ ಬಹಳ ಖುಷಿಯಾಗಿತ್ತು. ನಾವೆಲ್ಲ ಒಂದು ಕವಿತೆ ಹಾಡೋಣ ಎಂದು ನಾನು ಹೇಳಿದೆ. ನನ್ನ ಬಾಯಿಂದ ಬಂದ ಮೊದಲ ಕವಿತೆ ಒಂದು ಪ್ರಾರ್ಥನೆಯಾಗಿತ್ತು. ಉಗುರು, ಬಟ್ಟೆ ಹಾಗೂ ಗುಂಡಿಗಳ ಕೆಲಸ ಹಾಗೇ ಉಳಿದಿತ್ತು. ಆದರೂ ನಾನು ಆ ವಿಚಾರ ಬಿಟ್ಟು ಬೇರೆ ಕೆಲಸ ಪ್ರಾರಂಭಿಸಿದೆ.

## 5

ಇತಿಹಾಸವನ್ನು ಕಲಿಸಲು ಅಡಿಪಾಯವನ್ನು ಕತೆ ಹೇಳುವುದರ ಮೂಲಕ ಈಗಾಗಲೇ ಹಾಕಿಯಾಗಿದೆ. ಇನ್ನು ಕವಿತೆಗಾಗಿ ಜಾನಪದ ಗೀತೆಗಳನ್ನು ಹಾಡುವುದರ ಮೂಲಕ ಅಭ್ಯಾಸ ಪ್ರಾರಂಭಿಸಬೇಕೆಂದುಕೊಂಡೆ. ಗಂಭೀರವಾಗಿ ಆಲೋಚಿಸಿದೆ. ನಂತರ, ಮೊದಲಿನ ಆರು ತಿಂಗಳು ಮೂಲಭೂತವಾದ ಕೆಲಸ ಮಾಡಬೇಕು; ಶಿಕ್ಷಣದ ಬುನಾದಿ ಹಾಕಬೇಕು. ನಂತರದ ಆರು ತಿಂಗಳುಗಳಲ್ಲಿ ಅದರ ಮೇಲೆ ಕ್ರಮಬದ್ಧ ಕಲಿಸುವಿಕೆಯ ಕಟ್ಟಡವನ್ನು ನಿಲ್ಲಿಸಬೇಕು ಎಂದು ನಿರ್ಧರಿಸಿದೆ.

ಮಕ್ಕಳಿಗೆ ಯಾವುದೇ ಒಂದು ಹೊಸ ವಿಷಯ ದೊರೆತಾಗ ಅವರಿಗೆ ಬಹಳ



ಸಂತೋಷವಾಗುತ್ತದೆ. ನಾನು ಜಾನಪದ ಗೀತೆ ಹಾಡುತ್ತ, ಹೇಳಿದೆ 'ನಾನು ಹಾಡಿದಂತೆ ನೀವೆಲ್ಲರು ಹಾಡಬೇಕು'. ನಾನು ಹಾಡಿದೆ:

ಕಾನ್ಹಾ ಕಲೆಜೆ ಕಿ ಕೊರ್ ಸಖೀರಿ
ಕಾನ್ಹಾ ಕಲೆಜೆ ಕಿ ಕೊರ್

ಆದರೆ ನನ್ನ ಜೊತೆಗೆ ಯಾರಿಗೂ ಹಾಡಲು ಬರಲಿಲ್ಲ. ನನಗೆ ಆಶ್ಚರ್ಯವಾಯಿತು. ನಾಲ್ಕನೆಯ ತರಗತಿಯ ಬಾಲಕರು ಇಷ್ಟು ಹಾಡಲಾರರೆ? ಆದರೆ ಅವರಿಗೆ ಹಾಡುವ ಅಭ್ಯಾಸವೇ ಇರಲಿಲ್ಲ. ನಾನು ಬೇರೆ ಹಾಡು ಪ್ರಾರಂಭಿಸಿದೆ.

ಮೇರಾ ಹೈ ಮೋರ್
ಮೋತಿ ಚರಂತಾ ಮೇರಾ ಹೈ ಮೋರ್

ಈಗ ಅವರು ಅಲ್ಪ ಸ್ವಲ್ಪ ಹಾಡಿದರು. ಆದರೆ 25-30 ಬಾಲಕರು ಒಮ್ಮೆಲೆ ಹಾಡಲು ಪ್ರಾರಂಭಿಸಿದಾಗ ತರಗತಿಯಲ್ಲಿ ದೊಡ್ಡ ಕೋಲಾಹಲವೇ ಆಯಿತು.

ಬೇರೆ ಶಿಕ್ಷಕರು ಬಂದು 'ಸಾಕು ನಿಲ್ಲಿಸಿ ಈ ಗಲಾಟೆ, ನಾವು ಮಾತಾಡುವುದೇ ನಮಗೆ ಕೇಳಿಸುವುದಿಲ್ಲ.' ಎಂದು ಆರೋಪಿಸಿದರು.

'ಇವರು ದಿನವೂ ಏನಾದರೊಂದು ಉಪದ್ರವ ಮಾಡುತ್ತಲೆ ಇರುತ್ತಾರೆ. ನಮ್ಮ ಮಕ್ಕಳಿಗೆ ಸರಿಯಾಗಿ ಕಲಿಸಲು ಬಿಡುವುದಿಲ್ಲ. ಇವರಿಗೇನು ನಮ್ಮ ಗೊಡವೆ? ಇವರ ಪ್ರಯೋಗಗಳು ಸಫಲವಾದರೆ ಅಧಿಕಾರಿಗಳು ನೀವೂ ಹಾಗೆ ಮಾಡಿ ಎಂದು ಹೇಳುವರು. ಪ್ರಯೋಗಗಳು ವಿಫಲಗೊಂಡರೆ ಇಲ್ಲಿಂದ ಎತ್ತಂಗಡಿಯಾಗುವರು' ಎಂದು ಇತರ ಶಿಕ್ಷಕರು ಟೀಕಿಸಿದರು.

ಇಷ್ಟರಲ್ಲಿ ಮುಖ್ಯಾಧ್ಯಾಪಕರು ಬಂದರು. 'ಲಕ್ಷ್ಮೀಶಂಕರಬಾಬೂ ಏನಿದು? ಕವಿತೆಯನ್ನು ಈ ರೀತಿ ಹಾಡಿಸುತ್ತಿದ್ದೀರಲ್ಲ, ಇವುಗಳನ್ನು ಎಲ್ಲರೂ ಬಲ್ಲರು' ಎಂದು ಹೇಳಿ ಎಲ್ಲಿಯೋ ಹೊರಟು ಹೋದರು. ಅವರು ಹೋದ ಬಳಿಕ ನಾನು ಯೋಚಿಸಿದೆ: ಇದು ಒಳ್ಳೆ ಫಜೀತಿ ಆಯಿತು. ಇರಲಿ, ಸಮೂಹ ಗಾನ ಸಾಕು. 'ನಾನು ಹಾಡುವುದನ್ನು ನೀವೆಲ್ಲರು ಸುಮ್ಮನೆ ಕೇಳಿ'. ನಾನು ಹಾಡಿದೆ.

ನಥ್ ಘಡ್ ದೆ ಸೊನಾರಾ ದೆ,
ಮೊರಿ ನಥ್ ಘಡ್ ದೇ ಸೊನಾರಾ

ನನ್ನ ಕಂಠ ಅಷ್ಟು ಮಧುರವಾಗಿರದಿದ್ದರೂ ಕೆಟ್ಟದಾಗಿರಲಿಲ್ಲ. ಹೇಗೋ ಕೆಲಸ ನಡೆಯಿತು. ನನಗೆ ಒಳ್ಳೆಯ ಕಂಠವಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು? ನಾನು ನಾಟಕೀಯವಾಗಿ ಹಾಡಿದ್ದರಿಂದ ಅದು ಮಕ್ಕಳಿಗೆ ಸೇರಿತು. ಆದರೆ ಇನ್ನೂ ಕೆಲವರು ತುಂಟಾಟ ಪ್ರಾರಂಭಿಸಿದರು, ಕೆಲವರು ಆಲಸ್ಯದಿಂದ ಆಕಳಿಸುತ್ತಿದ್ದರು. ಚಂಪಕಲಾಲ್ ಕಣ್ಣು ಮಿಟುಕಿಸುತ್ತ ನನ್ನನ್ನು ಹಾಸ್ಯ ಮಾಡುತ್ತಿದ್ದ. ಇದೆಲ್ಲವನ್ನು ನೋಡುತ್ತಾ ಸುಮ್ಮನಿದ್ದೆ. ಇವರೆಲ್ಲರ ಚಟಗಳನ್ನು ನಾನು ಸುಧಾರಿಸಬಯಸುತ್ತಿದ್ದೆ. ಯಾರಿಗೆ ಸಂಗೀತದಲ್ಲಿ ಆಸಕ್ತಿ



ಸಂಗೀತದಲ್ಲಿ ಮನಸ್ಸಿಲ್ಲದ ಹುಡುಗರನ್ನು ಬೇರೆ ಕುಳಿತುಕೊಳ್ಳಲು ಹೇಳಿದೆ.
ಹಲಗೆಯ ಮೇಲೆ ಏನನ್ನಾದರು ಬರೆಯಿರಿ ಅಥವಾ ಚಿತ್ರ ಬಿಡಿಸಿರಿ ಎಂದು ಹೇಳಿದೆ.

ಇಲ್ಲವ್ರೋ ಅವರಿಗೆ ನಾನು ಹೇಳಿದೆ: 'ನೀವು ಬೇರೆ ಕುಳಿತುಕೊಳ್ಳಿ. ನಿಮ್ಮ ಪುಸ್ತಕದಲ್ಲಿ ಏನಾದರೂ ಬರೆಯಿರಿ. ಅಥವಾ ಚಿತ್ರ ಬಿಡಿಸಿ'.

ನಾನು ಎರಡನೆ ಹಾಡು ಹಾಡಿದೆ. ಮಕ್ಕಳ ಆಸಕ್ತಿ ಹೆಚ್ಚಾಯಿತು. ಮೂರನೆ ಹಾಡು ಹಾಡಿದೆ. ಮಕ್ಕಳು ಎರಡನೆ ಹಾಡನ್ನು ಇಷ್ಟಪಟ್ಟರು. ಅದನ್ನು ಮತ್ತೊಮ್ಮೆ ಹಾಡಬೇಕಾಯಿತು. ಮತ್ತೆ ಹಾಡಿದೆ. ಹಾಡುತ್ತಾ ಹೋದಂತೆ ಅವರ ಆಸಕ್ತಿ ಹೆಚ್ಚಾಯಿತು. ಕೊನೆಗೆ ಮಕ್ಕಳಿಗೆ ಹೇಳಿದೆ 'ನಾನು ದಿನವೂ ಇಂಥ ಹಾಡುಗಳನ್ನು ಹಾಡುವೆ. ಆದರೆ ಶಾಲೆಯಲ್ಲಿ ನೀವು ಈ ಹಾಡುಗಳನ್ನು ಹಾಡಬಾರದು'.

ಆದರೆ ಎರಡು ದಿನಗಳಲ್ಲಿ ಮಕ್ಕಳು ಅಲ್ಲಲ್ಲಿ 'ನಥ್ ಘಡದೆ' ಎಂದು ಗುನುಗುಟ್ಟ ತೊಡಗಿದರು.

ನಾನವರಿಗೆ ತಿಳಿಸಿ ಹೇಳಿದೆ 'ಹಾಡುವುದಾದರೆ ಶಾಲೆಯ ಹೊರಗೆ ಹಾಡಿ'.

ಹಳ್ಳಿಯ ಜನರು ತಮ್ಮಲ್ಲೇ ಮಾತಾಡಿಕೊಂಡರು: 'ಇವು ಯಾವ ಹಾಡುಗಳು!'

ಭಗವಾನ ದರ್ಜಿ ಹೇಳಿದ: 'ಇವು ನವರಾತ್ರಿಯ ಹಾಡುಗಳಂತೆ ಕಾಣುತ್ತವೆ'.

ರಘುಜಿ ಹೇಳಿದರು: 'ಈ ಗುರುಗಳು ಗಾರ್ಬಾ ಹಾಡುಗಳನ್ನು ಕಲಿಸಲು ಬಂದವರಿರಬೇಕು'.



ಹುಡುಗರ ತಾಯಂದಿರು ಹೇಳತೊಡಗಿದರು 'ನಿಮ್ಮ ಮಾಸ್ತರರು ಶಾಲೆಯಲ್ಲಿ ಹೆಚ್ಚು ಮಕ್ಕಳ ಹಾಡುಗಳನ್ನೇ ಏಕೆ ಹಾಡಿಸುತ್ತಾರೆ'.

ಎಲ್ಲವನ್ನು ಕೇಳಿಸಿಕೊಂಡರೂ ಏನೂ ಅರಿಯದವನಂತೆ ಸುಮ್ಮನಿದ್ದೆ. ನಿತ್ಯವೂ ಮಕ್ಕಳಿಗೆ ಹೊಸ ಹೊಸ ಕವಿತೆಗಳನ್ನು ಹೇಳಿಕೊಡ ತೊಡಗಿದೆ. ಈ ರೀತಿ 10-15 ಹಾಡುಗಳು ಅವರಿಗೆ ಬಾಯಿಪಾಠವಾದವು. ನಾಲ್ಕಾರು ಹುಡುಗರಿಗೆ ಸಂಗೀತದಲ್ಲಿ ಆಸಕ್ತಿಯೇ ಇರಲಿಲ್ಲ. ನನಗೆ ಅವರ ಬಗ್ಗೆ ಚಿಂತೆ ಇರಲಿಲ್ಲ. ಈಗ ನನ್ನ ತರಗತಿಯಲ್ಲಿ ಪುಸ್ತಕವಾಚನ, ಆಟ, ಶೃತಲೇಖನ, ಕವಿತಾ ಶ್ರವಣ, ಸ್ವಚ್ಛತೆ, ಪ್ರಾರ್ಥನೆ, ಹಾಜರಿ, ವಾರ್ತೆಗಳನ್ನು ಹೇಳುವುದು ಮುಂತಾದ ಕಾರ್ಯಕ್ರಮಗಳು ನಡೆಯುತ್ತಿದ್ದವು.

## 6

ಒಂದು ದಿನ ನಮ್ಮ ಶಾಲೆಗೆ ಒಬ್ಬ ಪರಮಹಂಸ ಸಾಧುಗಳು ಬಂದರು. ಅವರೊಡನೆ ಮುಖ್ಯಾಧ್ಯಾಪಕರು ಬಂದು ಅವರನ್ನು ಪರಿಚಯಿಸುತ್ತ ಹೇಳಿದರು: 'ಇವರು ಉತ್ತಮ ಧರ್ಮೋಪದೇಶಕರು. ವಿದ್ಯಾರ್ಥಿಗಳೆಂದರೆ ಬಹಳ ಪ್ರೀತಿ. ಪ್ರತಿಯೊಂದು ರಾಜ್ಯದ ಪಾಠಶಾಲೆಗಳ ವಿದ್ಯಾರ್ಥಿಗಳಿಗೆ ಉಪದೇಶಮಾಡಲು ಇವರಿಗೆ ಅನುಕೂಲ ಮಾಡಿಕೊಡಲಾಗಿದೆ. ಇವರಿಂದು ಅಧಿಕಾರಿಗಳ ಒಪ್ಪಿಗೆ ಮೇರೆಗೆ ನಮ್ಮ ಶಾಲೆಗೆ ಮಕ್ಕಳಿಗೆ ಉಪದೇಶಮಾಡಲು ಬಂದಿದ್ದಾರೆ'.

ಆದರದಿಂದ ಅವರಿಗೆ ನಮಸ್ಕರಿಸಿ ಅವರನ್ನು ಕುರ್ಚಿ ಮೇಲೆ ಕುಳ್ಳಿರಿಸಿ ಹೇಳಿದೆ, 'ಸ್ವಾಮಿಜಿ ತಾವು ತಮ್ಮ ಕಾರ್ಯವನ್ನು ಆರಂಭಿಸಿ'.

ನನ್ನ ವಿದ್ಯಾರ್ಥಿಗಳು ಸಾಧುಗಳ ಬೋಳುತಲೆ ಹಾಗೂ ಮುಖವನ್ನು ನೋಡುತ್ತಿದ್ದರು. ಅವರ ತೆಳ್ಳಗಿನ ಶರೀರ, ಕೈಲಿದ್ದ ಕಮಂಡಲ ಹುಡುಗರಿಗೆ ಕುತೂಹಲದ ವಿಷಯಗಳಾಗಿದ್ದವು.

ನಾನು ಬಾಲಕರಿಗೆ ಹೇಳಿದೆ: 'ಮಕ್ಕಳೇ, ಈಗ ಸ್ವಾಮಿಜಿ ಉಪದೇಶ ಮಾಡುತ್ತಾರೆ. ನೀವೆಲ್ಲ ಗಮನವಿಟ್ಟು ಕೇಳಿ'.

ಹುಡುಗರು ನನ್ನ ಆಜ್ಞೆ ಪಾಲಿಸತೊಡಗಿದ್ದರು. ಅವರು ಶಾಂತರೀತಿಯಿಂದ ಕುಳಿತುಕೊಂಡರು.

ಸ್ವಾಮಿಜಿ ಉಪದೇಶಿಸತೊಡಗಿದರು. 'ಮಕ್ಕಳೇ, ಈ ಪ್ರಪಂಚದಲ್ಲಿ ಈಶ್ವರನು ಎಲ್ಲರಿಗಿಂತ ದೊಡ್ಡವನು. ಅವನೇ ಈ ಜಗತ್ತನ್ನು ಸೃಷ್ಟಿಸಿದವನು. ಅವನಿಂದಲೇ ಈ ಪ್ರಪಂಚ ಇರುವುದು. ಅವನೇ ನಮ್ಮ ಕಾರಣಕರ್ತ'.

ಈ ರೀತಿ ಈಶ್ವರನ ಮಹತ್ವವನ್ನು ಕೊಂಡಾಡತೊಡಗಿದರು. ನಾನು ಸುಮ್ಮನೆ ಕುಳಿತಿದ್ದೆ. ವಿದ್ಯಾರ್ಥಿಗಳು ಶಾಂತಿಯಿಂದ ಕೇಳುತ್ತಿದ್ದರು. ಆದರೆ ನಿಧಾನವಾಗಿ ಅಶಾಂತಿ



ಸ್ವಾಮಿಗಳ ಮುಖದ ತೇಜಸ್ಸು ಮತ್ತು ಕೈಯಲ್ಲಿದ್ದ ಕಮಂಡಲ
ಹುಡುಗರ ಕುತೂಹಲವನ್ನು ಕೆರಳಿಸಿತು.

ಹಬ್ಬುತ್ತಿತ್ತು. ಕೆಲವರು ಆಲಸ್ಯದಿಂದ ಆಕಳಿಸುತ್ತಿದ್ದರು. ಮತ್ತೆ ಕೆಲವರು ಪುಸ್ತಕಗಳಲ್ಲಿ ಗೆರೆ ಹಾಕುತ್ತಿದ್ದರು. ಇನ್ನೂ ಕೆಲವರು ಪುಸ್ತಕಗಳನ್ನು ಅತ್ತಿತ್ತ ಅಲುಗಾಡಿಸುತ್ತಿದ್ದರು. ಕೆಲವರ ಕಣ್ಣು ಕೆಂಪಾಗತೊಡಗಿದ್ದವು. ಒಬ್ಬನು ಒಂದು ಬೆರಳು ತೋರಿಸಿ ಹೊರಗೆ ಹೋದನು. ನಾನು ಸನ್ನೆ ಮಾಡಿದ ಮೇಲೆ ಅವರೆಲ್ಲರೂ ಸುಮ್ಮನೆ ಕುಳಿತರು.

ಸ್ವಾಮಿಜಿಯವರಿಗೆ ವಿನಯದಿಂದ ಹೇಳಿದೆ: 'ಸ್ವಾಮಿಗಳೇ, ಹುಡುಗರಿಗೆ ಅರ್ಥವಾಗುವ ವಿಷಯ ಹೇಳಿ'.

ಸ್ವಾಮಿಜಿ ಬಹಳ ಸರಳ ಸ್ವಭಾವದವರಾಗಿದ್ದರು. ಕೂಡಲೇ ಅವರು ಹಿಂದೂ ಧರ್ಮ ಹಾಗೂ ಧರ್ಮಗ್ರಂಥಗಳ ಬಗೆಗೆ ಹೇಳತೊಡಗಿದರು. ಆದರೆ ಮಕ್ಕಳಿಗೆ ಅದು ಹಿಡಿಸಲಿಲ್ಲ.

ನಾನು ಮನಸ್ಸಿನಲ್ಲಿಯೇ ಧರ್ಮದ ಅತಿಗೂಢವಾದ ತತ್ವವನ್ನು ಈ ರೀತಿ ತಿಳಿಸಿ ಹೇಳುತ್ತಾರೆಯೇ? ಇಡೀ ಜೀವನ ಸವೆದರೂ ತಿಳಿಯಲಾರದ ತತ್ವವಿದು. ಇದೇ ಧಾರ್ಮಿಕ ಶಿಕ್ಷಣವೇ? ಈ ಮೇಲ್ಮೈ ತಿಳುವಳಿಕೆ ಅಪಾಯಕಾರಿಯಲ್ಲವೇ? ನಾನು ಈ ರೀತಿ ವಿಚಾರ ಮಾಡುತ್ತಿದ್ದಂತೆಯೇ ಸ್ವಾಮಿಗಳು ಶ್ಲೋಕಗಳನ್ನು ಹೇಳಲು ಪ್ರಾರಂಭಿಸಿದರು. ನಿರುಪಾಯರಾಗಿ ವಿದ್ಯಾರ್ಥಿಗಳು ಅವರ ಮಾತುಗಳನ್ನು ಕೇಳುತ್ತಿದ್ದರು. ಆದರೆ ಅವರಿಗೆ ಏನೂ ತಿಳಿಯುತ್ತಿರಲಿಲ್ಲ. ಹೀಗಾಗಿ ಅವರಲ್ಲಿ ಹಾಸ್ಯ ಭಾವನೆಗಳೆದ್ದಿದ್ದವು.

ಸ್ವಾಮಿಜಿಯುವರಾದರೋ ಬಹಳ ಗಂಭೀರವಾಗಿ ಮಾತನಾಡುತ್ತಿದ್ದರು. ಅವರ ವಿಚಾರದಲ್ಲಿ ಅವರ ಈ ಕಾರ್ಯ ಅತ್ಯಂತ ಪವಿತ್ರವಾಗಿತ್ತು ಮತ್ತು ಅವಶ್ಯವಾಗಿತ್ತು. ಅವರು ತಮ್ಮ ಕರ್ತವ್ಯವನ್ನು ಚೆನ್ನಾಗಿ ಪಾಲಿಸುತ್ತಿದ್ದರು. ಆದರೆ ಹುಡುಗರಿಗೆ ಅದು ಕೋಣನ ಮುಂದೆ ಕಿನ್ನರಿ ಬಾರಿಸಿದಂತಿತ್ತು.



ನಂತರ ಸ್ವಾಮಿಗಳು ಶ್ಲೋಕಗಳ ಅರ್ಥವನ್ನು ಹೇಳಲು ಪ್ರಾರಂಭಿಸಿದರು. ವಿದ್ಯಾರ್ಥಿಗಳು ಅದನ್ನೂ ಕೇಳಬೇಕಾಯಿತು. ನಂತರ ಅವರು ಅರ್ಥವನ್ನು ಬೋರ್ಡಿನ ಮೇಲೆ ಬರೆದು ಮಕ್ಕಳಿಗೆ ಅದನ್ನು ನಕಲು ಮಾಡಲು ತಿಳಿಸಿದರು. ಆಮೇಲೆ ಹೇಳಿದರು: 'ಈ ಶ್ಲೋಕಗಳನ್ನು ನೀವು ನಿತ್ಯವೂ ಬೆಳಿಗ್ಗೆ ಮತ್ತು ಸಾಯಂಕಾಲ ಉರು ಹಾಕಬೇಕು, ಇದರಿಂದ ನಿಮ್ಮ ಬುದ್ಧಿ ಬೆಳೆಯುವುದು; ಬಲ ಹೆಚ್ಚಾಗುವುದು ಮತ್ತು ತೇಜಸ್ಸು ಅಭಿವೃದ್ಧಿಗೊಳ್ಳುವುದು'.

ನನ್ನ ತರಗತಿಯ 10-12 ವರ್ಷದ ಮಕ್ಕಳು ಏನು ಅರಿತುಕೊಂಡಾರು? ಈ ಧರ್ಮ ಶ್ಲೋಕಗಳ ಗೊಡವೆ ಅವರಿಗೇಕೆ? ಆದರೆ ಅವರು ಶ್ಲೋಕಗಳನ್ನೂ ಮತ್ತು ಅವುಗಳ ಅರ್ಥವನ್ನೂ ಬರೆದುಕೊಂಡರು.

ನನ್ನ ವಿಚಾರಧಾರೆ ಇನ್ನೂ ಮುಂದುವರೆದಿತ್ತು. ಪಾಠಶಾಲೆಗಳನ್ನು ಬಿಟ್ಟರೆ ಧಾರ್ಮಿಕ ಶಿಕ್ಷಣಕ್ಕೆ ಬೇರೆ ಸ್ಥಳವಿಲ್ಲವೆ? ಮೊದಲು ದೇವಾಲಯಗಳಲ್ಲಿ ಧಾರ್ಮಿಕ ಪ್ರವಚನಗಳು ನಡೆಯುತ್ತಿದ್ದವು. ಮನೆಯಲ್ಲೇ ತಂದೆ ತಾಯಂದಿರು ಅವುಗಳಿಗನುಸಾರವಾಗಿ ಆಚರಣೆ ಮಾಡುತ್ತಿದ್ದರು. ಮನೆಯ ಈ ಆಚಾರ-ವಿಚಾರಗಳೇ ಮಕ್ಕಳಿಗೆ ಧಾರ್ಮಿಕ ಶಿಕ್ಷಣವಾಗಿದ್ದವು. ಆದರೆ ಈಗ ಜನರಿಗೆ ಧಾರ್ಮಿಕ ಪ್ರವಚನಗಳನ್ನು ಕೇಳಲು ಸಮಯವಿಲ್ಲ. ಅಥವಾ ವೃದ್ಧರು ಇವುಗಳನ್ನು ಕೇಳಿ ಕೇಳಿ ಸಂಪೂರ್ಣ ತೃಪ್ತರಾಗಿರಬೇಕು ಅಥವಾ ಇಂಥದ್ದಿನ್ನೇನಾದರೂ ಆಗಿರಬೇಕು, ಆದ್ದರಿಂದಲೇ ಇವುಗಳನ್ನು ಶಾಲೆಗಳಲ್ಲಿ ಬೋಧಿಸಲಾಗುತ್ತಿದೆಯೇ? ಹೀಗೆ ನಾನು ಯೋಚನಾಮಗ್ನನಾಗಿರುವಾಗಲೇ ಗಂಟೆ ಬಾರಿಸಿತು. ಮನೆಗೆ ಹೊರಡಲು ಸಿದ್ಧನಾದೆ.

ದಣಿದ ಮಕ್ಕಳು ಸ್ವಾಮೀಜಿಗೆ ನಮಸ್ಕರಿಸಿ ತಮ್ಮ ಮನೆಗೆ ಹೋದರು. ನಾನು ಮತ್ತು ಸ್ವಾಮೀಜಿ ಇಬ್ಬರೇ ಉಳಿದೆವು. ಸ್ವಾಮೀಜಿಯವರಿಗೆ ನಮ್ಮ ಮನೆಯಲ್ಲಿಯೇ ಭಿಕ್ಷೆ ಸ್ವೀಕರಿಸಲು ಆಮಂತ್ರಿಸಿದೆ. ಒಪ್ಪಿಕೊಂಡರು.

ಊಟ ಮಾಡುತ್ತ ಕುಳಿತಾಗ ಅವರು 'ನೋಡಿ, ಇಂದು ಧರ್ಮದಂಥ ಮಹತ್ವದ ವಿಷಯದಲ್ಲಿ ಲೋಪವಾಗುತ್ತಿದೆ. ಆದ್ದರಿಂದ ಪ್ರಾರಂಭದಲ್ಲಿಯೇ ಧಾರ್ಮಿಕ ಶಿಕ್ಷಣ ಕೊಟ್ಟು ಹೊಸ ಪೀಳಿಗೆಯನ್ನು ಸಿದ್ಧಗೊಳಿಸಬೇಕಾಗಿದೆ' ಎಂದರು. ನಾನು ಹೇಳಿದೆ: 'ಸ್ವಾಮಿ, ಈ ಮಕ್ಕಳ ಮಿದುಳಿನಲ್ಲಿ ಈಶ್ವರ, ಆತ್ಮ, ಧರ್ಮ ಎಂಬ ಕಠಿಣ ವಿಷಯಗಳನ್ನು ತುರುಕುವುದೆಂತು? ಇಂದು ತಾವು ಭಾಷಣ ಮಾಡುತ್ತಿದ್ದಾಗ ತಮಗೇ ಹೀಗೆ ಅನಿಸಿರಬಹುದು, ಅವರಿಗೆ ಅದರಲ್ಲಿ ಎಳ್ಳಷ್ಟು ಆಸಕ್ತಿ ಇರಲಿಲ್ಲ. ಕೇವಲ ಶಿಷ್ಟಾಚಾರಕ್ಕೊಳಗಾಗಿ ಸುಮ್ಮನೆ ಕುಳಿತಿದ್ದರಷ್ಟೇ'.

ಸ್ವಾಮಿಜಿ ಅಂದರು: 'ತಮ್ಮ ಮಾತು ನಿಜ. ಮಕ್ಕಳಿಗೆ ಆಟ, ಕುಣಿತ ಬಹಳ ಸೇರುತ್ತದೆ. ಕತೆ ಕೇಳುವುದನ್ನೂ ಅವರು ಇಷ್ಟಪಡುತ್ತಾರೆ. ಆದರೆ ಧಾರ್ಮಿಕ ಶಿಕ್ಷಣ ಅವರಿಗೆ ಸೇರಲಿ, ಬಿಡಲಿ ಅವರಿಗೆ ಹೇಳಲೇಬೇಕಾಗುತ್ತದೆ.ಕೆಲವು ಶ್ಲೋಕಗಳನ್ನಾದರೂ ಬಾಯಿಪಾಠ ಮಾಡಲೇಬೇಕಾಗುತ್ತದೆ'.

'ಆದರೆ ಸ್ವಾಮಿಜಿ, ಧರ್ಮ ಕೇವಲ ನಾಲಿಗೆಯ ಮೇಲಷ್ಟೇ ಉಳಿದರೆ ಸಾಲದು. ಧರ್ಮ ಒಂದು ಜಾಗೃತಿ. ಅದು ಹೃದಯದಲ್ಲಿ ಉದಯಿಸಬೇಕು. ಮನುಷ್ಯನಿಗೆ ಹಸಿವಾದಾಗಲೇ ಅದು ಹುಟ್ಟುತ್ತದೆ. ಅದಕ್ಕೆ ತನ್ನದೇ ಆದ ಸಮಯವಿದೆ. ಆದ್ದರಿಂದ ಈಗ ಮಕ್ಕಳ ಮೇಲೆ ಅನಾವಶ್ಯಕ ಭಾರ ಹೊರಿಸಿದಂತಾಗುವುದಿಲ್ಲವೇ?'

ಸ್ವಾಮಿಜಿಯವರೂ ಚಿಂತೆಗೊಳಗಾದರು.

ನಾನು ಮತ್ತೆ ಹೇಳಿದೆ: 'ಧರ್ಮವೆನ್ನುವುದು ಒಂದು ಸತ್ಯ ಸಂಗತಿಯಾಗಿದೆ. ಅದು ಮಾನವ ಜೀವನಕ್ಕೆ ಒಂದು ದೋಣಿ ಇದ್ದಂತೆ. ಮನುಷ್ಯನ ಜೀವನದ ಉದ್ದೇಶ ಸಂಸಾರ ಸಾಗರವನ್ನು ದಾಟುವುದು. ಆದರೆ ಇದೆಲ್ಲ ಬಹಳ ಕಠಿಣವೆನ್ನುವುದು ನಿಜವಲ್ಲವೆ? ಸಾಮಾನ್ಯ ಬುದ್ಧಿಗೆ ನಿಲುಕದ್ದು. ಇದಕ್ಕಾಗಿ ಬಹಳ ಪೂರ್ವಸಿದ್ಧತೆ ಬೇಕಾಗುತ್ತದೆ'.

ಸ್ವಾಮಿಜಿ ನುಡಿದರು: 'ಹೌದು, ತಾವು ಹೇಳುವುದು ನಿಜವೇ. ಆದರೆ...'

ನಾನು ಮಧ್ಯದಲ್ಲಿಯೇ ತಡೆದು ಹೇಳಿದೆ: 'ಧರ್ಮ ಗಜ್ಜರಿ, ಮೂಲಂಗಿ ಅಲ್ಲ. ಪೇಟೆಯಲ್ಲಿ ಅದು ಸಿಗುವುದಿಲ್ಲ. ಪುಸ್ತಕದಲ್ಲಿ ಬರೆಯಲಾದ ಮಾತುಗಳೆಲ್ಲ ಧರ್ಮವಲ್ಲ. ಇಂಥ ಮಹತ್ವಪೂರ್ಣವಾದ ಸಂಗತಿಗಳನ್ನು ಗೂಢವಾಗಿಯೂ ಗೋಪ್ಯವಾಗಿಯೂ ಇಡಬೇಕು. ಕಠಿಣ ಪರಿಶ್ರಮದಿಂದಲೇ ಅದು ಸಾಧಕನಿಗೆ ದೊರೆಯುವಂತಾಗಬೇಕು'.

'ಹೌದು, ಅದಕ್ಕಾಗಿಯೇ ನಮ್ಮ ಪೂರ್ವಜರು ಗುರುಗಳ ಆಶ್ರಯದಲ್ಲಿ ಇರಬೇಕಾಗುತ್ತಿತ್ತು. ಮತ್ತೆ ಧರ್ಮವನ್ನು ತಿಳಿದುಕೊಳ್ಳಲು ಶರೀರವನ್ನು ಸಾಕಷ್ಟು ಪಳಗಿಸಬೇಕಾಗುತ್ತಿತ್ತು' ಎಂದರು ಸ್ವಾಮಿಜಿ.

'ಆದರೆ ಇಂದು ನಾವು ಮನೆಮನೆಗಳಲ್ಲಿ, ಶಾಲೆಗಳಲ್ಲಿ ಉಪದೇಶ ಮಾಡಿ ಜನರಿಗೆ ಧರ್ಮ ಪ್ರಸಾರ ಮಾಡಲು ಹೊರಟಿದ್ದೇವೆ.'

ಸ್ವಾಮಿಜಿ ಹೇಳಿದರು, 'ಇದು ಕಲಿಯುಗ. ಇಂದು ಗುರುಗಳ ಬಳಿ ಶ್ರದ್ಧಾಭಾವನೆಯಿಂದ ಹೋಗುವವರು ಎಷ್ಟು ಜನ?'

ನಾನು ಹೇಳಿದೆ. ಧರ್ಮವನ್ನು ಹೀಗೆ ಹಂಚುವುದರಿಂದ ಅಥವಾ ಕಾಣಿಕೆಯನ್ನಾಗಿ ಕೊಡುವುದರಿಂದ ಯಾರೂ ಧರ್ಮಾತ್ಮರಾಗಲಾರರು'.

'ಹಾಗಾದರೆ ಏನು ಮಾಡಬೇಕೆಂದು ನೀವೇ ಹೇಳಿ?'

ನಾನು ಹೇಳಿದೆ: 'ನನ್ನ ಅಭಿಪ್ರಾಯದಲ್ಲಿ ಚಿಕ್ಕ ಮಕ್ಕಳಿಗೆ ಧರ್ಮೋಪದೇಶ ಮಾಡದೆ ಇದ್ದರೆ ಒಳ್ಳೆಯದು. ಅವರಿಗೆ ಈಗ ಸ್ವಚ್ಛವಾದ ಶರೀರ, ಆರೋಗ್ಯಪೂರ್ಣ ಮನಸ್ಸು ಮತ್ತು ಕಾರ್ಯತತ್ಪರತೆ ಬೇಕಾಗಿದೆ'.



ಸ್ವಾಮಿಜಿ ಹೇಳಿದರು 'ನಿಜ, ಬಲಿಷ್ಠರಾಗಿದ್ದರೆ ಆತ್ಮಬಲ ಬರುತ್ತದೆ'.

ನಾನು ಹೇಳಿದೆ: 'ನನ್ನ ದೃಢ ವಿಶ್ವಾಸವೇನೆಂದರೆ ಸಮಯ ಬಂದಾಗ ಮನುಷ್ಯನಲ್ಲಿ ಯೌವನ, ವೃದ್ಧಾಪ್ಯಗಳಂತೆ ಧರ್ಮ ಜಿಜ್ಞಾಸೆಯು ತಾನೇ ವಿಕಸನಗೊಳ್ಳುತ್ತದೆ. ಅಪರಿಪಕ್ವ ಗೃಹಸ್ಥ ಕ್ರಮದಂತೆ ಸಮಯಕ್ಕಿಂತ ಮೊದಲೇ ಧರ್ಮ ಪರಿಚಯವು ಕೂಡ ನನಗೆ ಅಪ್ರಾಸಂಗಿಕವೆಂದು ಅನಿಸುತ್ತದೆ. ಬಾಲ್ಯದಿಂದಲೇ ಧರ್ಮವನ್ನು ಪ್ರತಿದಿನ ಚರ್ಚೆಯ ವಿಷಯವನ್ನಾಗಿ ಮಾಡುವುದರಿಂದ, ಶ್ಲೋಕ ಪಾಠ ಮಾಡಿಸುವುದರಿಂದ ಮಕ್ಕಳಿಗೆ ಆ ವಿಷಯಲ್ಲಿ ನಿಜವಾದ ಜಿಜ್ಞಾಸೆ ಕುಂಠಿತಗೊಳ್ಳುತ್ತದೆ. ಧಾರ್ಮಿಕ ಕ್ರಿಯೆಗಳಿಗೆ ತಮ್ಮದೇ ಮಹತ್ವವಿದೆ. ಆದರೆ ಮನುಷ್ಯನ ವಿಕಾಸವೇ ನಿಂತು ಹೋಗುವಷ್ಟು ಮತ್ತು ಮನುಷ್ಯ ಜಡವಸ್ತುವಾಗುವಷ್ಟು ಮಹತ್ವವನ್ನು ಅವಕ್ಕೆ ಕೊಡಬಾರದು.

'ನೀವು ಹೇಳುವುದು ನಿಜ. ನನ್ನ ಅನಿಸಿಕೆಯೂ ಇದೇ. ಮಕ್ಕಳು ಇಂಥ ವಿಷಯಗಳ ಬಗೆಗೆ ಪ್ರವಚನ ಮಾಡುವುದರಿಂದ ಬೇಗ ಬೇಸರಪಟ್ಟುಕೊಳ್ಳುತ್ತಾರೆ, ಅವರಿಗೆ ಬೇರೆ ರೀತಿಯಿಂದ ಧಾರ್ಮಿಕ ಶಿಕ್ಷಣವನ್ನು ಕೊಡಬೇಕು ಎಂದು ನನಗನಿಸುತ್ತದೆ' ಎಂದರು ಸ್ವಾಮಿಜಿ.

'ನನ್ನನ್ನು ಕ್ಷಮಿಸಿ, ಸ್ವಾಮಿಜಿ. ಧರ್ಮವನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕೆನ್ನುವುದು ನನ್ನ ಅಭಿಪ್ರಾಯ. ಇದಕ್ಕಾಗಿ ತಾಯಿ ತಂದೆಯರು ಹಾಗೂ ಶಿಕ್ಷಕರು ಪ್ರಯತ್ನಿಸಬೇಕು. ಪಠ್ಯಪುಸ್ತಕಗಳಲ್ಲಿ ಇತಿಹಾಸ ಪುರುಷರ ಬಗ್ಗೆ ಕತೆಗಳನ್ನು ಹೇಳಲಾಗಿದೆ. ಇದರೊಂದಿಗೆ ಧಾರ್ಮಿಕ ಪುರುಷರ ಕತೆಗಳನ್ನೂ ಸೇರಿಸಬೇಕು. ಬಾಲಕರಿಗೆ ಇಷ್ಟು ಸಾಕು. ಕರ್ಮಕಾಂಡ, ಶ್ಲೋಕ ಪಠನೆ, ಧರ್ಮದ ಬಗ್ಗೆ ಶಿಕ್ಷಣ ಮತ್ತು ಧಾರ್ಮಿಕ ಪುಸ್ತಕಗಳನ್ನು ಭವಿಷ್ಯಕ್ಕೆ ಬಿಡಬಹುದು'.

ಸ್ವಾಮಿಜಿ ಕೇಳಿದರು: 'ಹಾಗಾದರೆ ನಾನೇನು ಮಾಡಬೇಕು?'

ನಾನು ಹೇಳಿದೆ; 'ಬಾಲಕರಿಗೆ ಶಿಕ್ಷಣ ನೀಡಿ. ನೀವೂ ನನ್ನ ಹಾಗೆ ಬಾಲಕರಿಗೆ ಪಾಠ ಹೇಳಿಕೊಡಿ'.

'ಸ್ವಾಮಿಜಿ ಆಗಿ ನಾನು ಈಗ ಶಿಕ್ಷಕನಾಗಬೇಕೆ?'

'ಇದೇ ನಿಮ್ಮ ಕೆಲಸ. ನೀವು ಶಿಕ್ಷಕರಾದರೆ ನಮಗೆ ಇರುವ ಒಳ್ಳೆಯ ಶಿಕ್ಷಕರ ಕೊರತೆ ಸ್ವಲ್ಪ ಮಟ್ಟಿಗೆ ನಿವಾರಣೆಯಾಗುತ್ತದೆ' ಎಂದೆ.

ಸ್ವಾಮಿಜಿ ನಗುತ್ತ ಕೈಕಾಲು ಮುಖ ತೊಳೆದರು.

ಅಂದಿನಿಂದ ನಮ್ಮಿಬ್ಬರ ನಡುವಣ ಪರಿಚಯ ಚೆನ್ನಾಗಿ ಬೆಳೆಯಿತು. ಅವರು ಹೊಸ ಶಿಕ್ಷಣ ಪದ್ಧತಿಯ ಬಗ್ಗೆ ನನ್ನಿಂದ ತಿಳಿದುಕೊಳ್ಳುತ್ತಿದ್ದಾರೆ. ನಾನು ಅವರ ನೆರವಿನಿಂದ ಧರ್ಮಗ್ರಂಥಗಳನ್ನು ಓದುತ್ತಿದ್ದೆ.

ಸಮಯ ಓಡುತ್ತಿತ್ತು. ವರ್ಷ ಮುಗಿಯುವುದರೊಳಗೆ ಪಾಠಗಳನ್ನು ಯಶಸ್ವಿಯಾಗಿ ಮುಗಿಸಬೇಕಾಗಿತ್ತು. ಇದರಲ್ಲೇ ನನ್ನ ಪ್ರಯೋಗದ ವಿಶೇಷತೆ ಇದ್ದದ್ದು.

ಈಗ ಹುಡುಗರಿಗೆ ಇತಿಹಾಸ ಪಾಠ ಹೇಳಬೇಕೆಂದು ನಾನು ಯೋಚಿಸಿದೆ.

# 7

ನಾನು ಇತಿಹಾಸದ ಪುಸ್ತಕಗಳತ್ತ ಕಣ್ಣು ಹಾಯಿಸಿದೆ. ನನಗೆ ಸಂತೋಷವಾಗಲಿಲ್ಲ. ಒಂದರಲ್ಲಿ ಘಟನೆಗಳು ತಪ್ಪಾಗಿ ಉಲ್ಲೇಖಿತವಾಗಿದ್ದರೆ ಇನ್ನೊಂದರ ದೃಷ್ಟಿಕೋನ ಹಳೆಯದಾಗಿತ್ತು. ಮೂರನೆಯದನ್ನು ಕೇವಲ ವ್ಯಾಪಾರಿ ದೃಷ್ಟಿಯಿಂದ ಬರೆಯಲಾಗಿತ್ತು. ನಾಲ್ಕನೆಯದರ ಶೈಲಿ ದೋಷಪೂರ್ಣವಾಗಿತ್ತು. ಎಲ್ಲರ ಪ್ರಶಂಸೆಗೆ ಪಾತ್ರವಾದ ಕೆಲವು ಪುಸ್ತಕಗಳು ಚಿಕ್ಕ ಮಕ್ಕಳಿಗೆ ನಿಷ್ಪ್ರಯೋಜಕವಾಗಿದ್ದವು.

ಮಕ್ಕಳಿಗೆ ಕತೆ ಕೇಳುವ ಆಸಕ್ತಿಯಂತೂ ಇತ್ತು. ಆದರೆ ನಾನು ಇದುವರೆಗೆ ಬೇರೆ ಕತೆಗಳನ್ನೇ ಹೇಳಿದ್ದೆ – ಅರ್ಧ ಸತ್ಯವಾದವು, ಅರ್ಧ ಕಲ್ಪನೆಗಳಿಂದ ಕೂಡಿದವು; ಸ್ವರ್ಗ ಹಾಗೂ ಇಂದ್ರಜಾಲದ ಕತೆಗಳು. ಆದರೆ ಇತಿಹಾಸದಲ್ಲಿ ಇಂತಹ ಕತೆಗಳಿಗೆ ಅವಕಾಶವಿರಲಿಲ್ಲ. ಆದರೂ ನಾನೊಂದು ಕತೆ ಪ್ರಾರಂಭಿಸಿದೆ. ಇತಿಹಾಸದ ನೀರಸ ಘಟನೆಗಳನ್ನು ಹೊರತುಪಡಿಸಿ ಕತೆ ಹೇಳತೊಡಗಿದೆ. ಕೆಲವೇ ಕ್ಷಣಗಳಲ್ಲಿ ಮಕ್ಕಳು ಗಾಬರಿಗೊಂಡರು. ಒಬ್ಬೊಬ್ಬರಾಗಿ ಹೇಳಲು ಪ್ರಾರಂಭಿಸಿದರು:

'ಗುರುಗಳೇ ಇದು ಕತೆಯೇ ಅಲ್ಲ.'

'ನಿನ್ನೆಯಂತಹ ಕತೆ ಹೇಳಿರಿ...'

'ಹೌದು, ನಿನ್ನೆ ಹೇಳಿದಂತಹ ಕತೆ ಹೇಳಿರಿ.'

'ಆಟ ಆಡಲು ಹೋಗೋಣವೇ ಗುರುಗಳೇ.'

'ಈಗ ನಾವು ಹಾಡು ಹಾಡೋಣವೇ?'

ಈ ವಿಷಯದಲ್ಲಿ ನಾನು ಸೋತೆ ಎಂದುಕೊಂಡೆ.

ಮನೆಗೆ ಬಂದು ಯೋಚಿಸತೊಡಗಿದೆ. ಇವರಿಗೆ ಸಂಪೂರ್ಣ ಐತಿಹಾಸಿಕ ತಥ್ಯಗಳನ್ನು ಹೇಳುವುದರಿಂದ ಯಾವ ಪ್ರಯೋಜನವೂ ಇಲ್ಲ. ಇಂಥ ಐತಿಹಾಸಿಕ ಘಟನೆಗಳನ್ನು ಪ್ರತ್ಯಕ್ಷ ನೋಡಿ ಯಾರು ಬರೆಯುತ್ತಾರೆ? ಕತೆಯ ರೂಪದಿಂದಲೇ ಇತಿಹಾಸವನ್ನು ಹೆಚ್ಚು ರೋಚಕವಾಗಿ ಮಾಡಬಹುದು. ಕಾಲ್ಪನಿಕ ಸಂಗತಿಗಳನ್ನೂ ಸೇರಿಸಿ ಇತಿಹಾಸವನ್ನು ಕಲಿಸುವೆ. ಆಗ ಸರಿಯಾದೀತು. ಮರುದಿನ ನಾನೊಂದು ಕತೆ ಪ್ರಾರಂಭಿಸಿದೆ.

'ಒಂದು ದೊಡ್ಡ ಅಡವಿ. ಅಲ್ಲಿ ಬಿಲ್ಲರು ವಾಸವಾಗಿದ್ದರು. ಅವರ ಇರುವಿಕೆ, ರೀತಿ–ನೀತಿ ವಿಚಿತ್ರವಾಗಿದ್ದವು. ಹಾರುವ ಹಕ್ಕಿಯನ್ನು ಬಾಣದಿಂದ ಹೊಡೆದು, ಕೆಳಗುರುಳಿಸುವ ಸಾಮರ್ಥ್ಯ ಅವರಿಗಿತ್ತು. ಆ ಅಡವಿಯಲ್ಲಿ ಒಂದು ಗುಡಿಸಲು'.

ವಿದ್ಯಾರ್ಥಿಗಳು ಕತೆಯ ಚಮತ್ಕಾರಕ್ಕೊಳಗಾದರು. ನಾನು ವನರಾಜನ ಕತೆಯನ್ನು ಪ್ರಾರಂಭಿಸಿ ಮೂಲ ಘಟನೆಗೆ ಕಾಲ್ಪನಿಕ ರೂಪ ನೀಡಿದ್ದೆ.

ಅಂದು ಕತೆ ಅರ್ಧಕ್ಕೆ ನಿಂತಿತು.

ಮರುದಿನ ಮಕ್ಕಳು ಬೇರೆ ಕೆಲಸವನ್ನೇ ಮಾಡಗೊಡಲಿಲ್ಲ. ವನರಾಜನ ಕತೆಯನ್ನು ಹೇಳಿ



ಎಂದು ದುಂಬಾಲು ಬಿದ್ದರು. ನಾನು ವನರಾಜನ ಕತೆಯನ್ನು ಹೇಳಿ ಮುಗಿಸಿದೆ. ಅಂಜುತ್ತ ಅವರನ್ನು ಕೇಳಿದೆ 'ಈ ಕತೆಯನ್ನು ಇನ್ನೊಮ್ಮೆ ಕೇಳಬೇಕೆನ್ನುವವರು ಎದ್ದು ನಿಲ್ಲಿ'.

ಒಬ್ಬೊಬ್ಬರಾಗಿ ಎಲ್ಲರೂ ಎದ್ದುನಿಂತರು. ಎರಡನೇ, ಮೂರನೇ, ನಾಲ್ಕನೇ ಮತ್ತು ಐದನೇ ದಿನವೂ ಹೀಗೆಯೇ ನಡೆಯಿತು. ಮಕ್ಕಳಲ್ಲಿ ಯಾರೂ ಆಟ ಹಾಗೂ ಹಾಡಿನ ಹೆಸರೇ ತೆಗೆಯುತ್ತಿದ್ದಿಲ್ಲ. ಅವರ ಆಸಕ್ತಿ ಎಷ್ಟು ದಿನ ಇರುತ್ತದೆ ಎಂಬುದನ್ನು ನಾನೂ ನೋಡುತ್ತಿದ್ದೆ.

'ಈ ಪ್ರಯೋಗ ಯಶಸ್ವಿಯಾಗುವುದೋ ಇಲ್ಲವೋ ಅನ್ನುವುದು ಸಮಯ ಬಂದಾಗ ತಾನೇ ತಿಳಿಯುತ್ತದೆ. ಆಗ ತಾವು ನಿರಾಶರಾಗಿ ಶಿಕ್ಷಕನಿಗೆ ಏನೂ ಆಗಿಲ್ಲವಲ್ಲ ಎನ್ನುವಿರಿ. ಆದರೆ ಅಷ್ಟರಲ್ಲಿ ಮಕ್ಕಳ ಒಂದು ಅಮೂಲ್ಯ ವರ್ಷ ಹಾಳಾಗಿಹೋಗಿರುತ್ತದೆ' ಎಂದು ಯಾರೋ ಒಬ್ಬರು ಅಧಿಕಾರಿಗಳಿಗೆ ಚಾಡಿ ಹೇಳಿದ್ದರು.

ಇದರಿಂದ ನನಗೆ ಎಳ್ಳಷ್ಟೂ ಆಶ್ಚರ್ಯವಾಗಲಿಲ್ಲ. ನನ್ನ ಬಗ್ಗೆ ಚಾಡಿ ಹೇಳಿದವರು ಯಾರೆಂಬುದು ನನಗೆ ಗೊತ್ತಿತ್ತು. ನನ್ನ ವಿದ್ಯಾರ್ಥಿಗಳಿಗೆ ನಿತ್ಯವೂ ಕತೆಗಳನ್ನು ಕೇಳುವ ಅವಕಾಶ ದೊರೆಯುತ್ತಿತ್ತು. ಹೀಗಾಗಿ ಅವರು ನನ್ನನ್ನು ಮೆಚ್ಚಿಕೊಳ್ಳುತ್ತಿದ್ದರು. ಬೇರೆ ಶಿಕ್ಷಕರ ಬಗ್ಗೆ ಅವರ ವಿದ್ಯಾರ್ಥಿಗಳು ಅಸಂತುಷ್ಟರಾಗಿದ್ದರು. ಅವರಿಗೆ ಕತೆ ಕೇಳುವ ಇಷ್ಟ. ಆದ್ದರಿಂದ ಓದಿನಲ್ಲಿ ಅವರಿಗೆ ಲಕ್ಷ್ಯವಿರಲಿಲ್ಲ.

ನಾನವರಿಗೆ ಹೇಳುತ್ತಿದ್ದೆ: 'ನೀವು ನಿಮ್ಮ ಮಾರ್ಗವನ್ನು ಅನುಸರಿಸಿ. ನಾನು ನನ್ನ ಪ್ರಯೋಗ ಮಾಡುತ್ತಿರುವೆ, ನನಗೆ ಧೈರ್ಯವಿದೆ; ಮಕ್ಕಳಿಗೆ ಹಾನಿಯಾಗಬಾರದು ಎನ್ನುವ ಬಗ್ಗೆ ನನಗೂ ಚಿಂತೆ ಇದೆ. ಅದಕ್ಕಾಗಿ ಪರಿಶ್ರಮವನ್ನೂ ಮಾಡುತ್ತಿರುವೆ. ಆದರೆ ನನ್ನ ರೀತಿ ಬೇರೆ, ವಿಧಾನ ಬೇರೆ. ನಿಮಗೆ ಹಿಡಿಸದಿದ್ದರೆ ನಾನು ನನ್ನ ವರ್ಗವನ್ನೇ ಇಲ್ಲಿಂದ ದೂರಕ್ಕೆ ಕೊಂಡೊಯ್ಯುವೆ'.

ಒಂದು ದಿನ ಅಧಿಕಾರಿಗಳು ನನ್ನ ತರಗತಿ ನೋಡಲು ಬಂದರು. ಹಾಗೆ ನೋಡಿದರೆ ಅವರು ಒಳ್ಳೆಯವರೇ. ಆದರೆ ನನ್ನ ಕಾರ್ಯಕ್ರಮವೆಲ್ಲ ಕತೆಯಿಂದ ತುಂಬಿಹೋಗಿದ್ದರಿಂದ ಅವರೂ ಅಸಹನೆ ತೋರಿದರು. 'ಹೀಗಾದರೆ ಈ ಮಕ್ಕಳು ಇತಿಹಾಸವನ್ನು ಹೇಗೆ ಕಲಿಯುವರು? ಕತೆ ಕೇಳುವವರೆಗೆ ಎಲ್ಲ ಸರಿಯಾಗಿರುತ್ತದೆ. ಆಮೇಲೆ ಅವರು ಈ ಕಿವಿಯಿಂದ ಕೇಳಿ, ಆ ಕಿವಿಯಿಂದ ಬಿಟ್ಟುಬಿಡುತ್ತಾರೆ. ಈ ರೀತಿ ಕಲಿತರೆ ಅವರಿಗೆ ಎಷ್ಟು ತಿಳಿದೀತು?' ಎಂದು ಗೊಣಗಿದರು.

ನನಗೂ ಅವರ ಮಾತು ಸರಿಯೆನಿಸಿತು. ತರಗತಿಯಲ್ಲಿ ವನರಾಜನ ಕತೆ ಮೂರನೇ ಸಲ ನಡೆದಿತ್ತು. ನಾನು ಕತೆಯಲ್ಲಿ ಸ್ವಲ್ಪ ಬದಲಾವಣೆ ಮಾಡಿ ಹೇಳತೊಡಗಿದೆ. ಮಕ್ಕಳು ಕೂಡಲೇ ಕಂಡು ಹಿಡಿದರು, 'ನೀವು ಹೇಳುತ್ತಿರುವುದೇನು? ಮೊದಲು ಸಾವಿರ ಕುದುರೆಗಳು ಎಂದು ಹೇಳಿದ್ದಿರಿ, ಈಗ 50 ಕುದುರೆಗಳು ಎನ್ನುತ್ತಿದ್ದೀರಲ್ಲ. ಮೊದಲು ಗುಡಿಸಲು ನದಿಯ ದಂಡೆಯ ಮೇಲಿತ್ತು'.

ಅಂತೂ ಮಕ್ಕಳು ನನ್ನ ಕತೆಯನ್ನು ಚೆನ್ನಾಗಿ ತಿಳಿದುಕೊಂಡಿದ್ದಾರೆ ಎಂದು ನಾನು ಮನಸ್ಸಿನಲ್ಲಿ ಅಂದುಕೊಂಡೆ. ಆಗ ನನ್ನ ಧೈರ್ಯ ಹೆಚ್ಚಿತು. ಇನ್ನು ಮುಂದೆ ಇವರು ಮರೆಯುವುದಿಲ್ಲ. ಆದರೆ ನಾನು ಮಸಾಲೆ ಸೇರಿಸಿ ಹೇಳಿದ ಈ ಕತೆಗಳು ಪರೀಕ್ಷಕರಿಗೆ ಏನು ಪ್ರಯೋಜನ?. ಈ ಕತೆಗಳನ್ನು ನಾನು ಪರೀಕ್ಷಕನ ದೃಷ್ಟಿಗೆ ಒಗ್ಗುವಂತೆ ಮಾಡಬೇಕು.

ನಾನು ಹೇಳಿದ ಎಲ್ಲ ಕತೆಗಳನ್ನು ಬರೆದು ಸಿದ್ಧಪಡಿಸಿದೆ. ಮಕ್ಕಳಿಗೆ ಅವನ್ನೂ ಓದಲು ಹೇಳಿದೆ. ಕತೆಗಳನ್ನು ಸಂಕ್ಷೇಪಿಸಿದೆ. ಅಲ್ಲಲ್ಲಿ ಸ್ಥಾನಗಳ ಬಗೆಗೂ ಉಲ್ಲೇಖ ಮಾಡಿದೆ. ಕತೆ ಹೇಳುವುದರಲ್ಲಿ ಮತ್ತು ಬರೆಯುವುದರಲ್ಲಿ ಸಾಕಷ್ಟು ಅಂತರವಿರುತ್ತದೆ. ಇದರ ಭೇದವನ್ನು ತಿಳಿಸಿ, ಅದೇ ರೀತಿ ಕತೆಗಳನ್ನು ಬರೆದೆ. ನನ್ನ ಆ ಕತೆಗಳನ್ನು ಓದುವುದು ಮಕ್ಕಳಿಗೆ ಬಹಳ ಹಿಡಿಸಿತು. ಒಂದಲ್ಲ ಅನೇಕ ಸಲ ಅವರು ಆ ಕತೆಗಳನ್ನು ಓದಿದರು.

ಆದರೆ ಇದರ ಬಗ್ಗೆ ಪ್ರಶ್ನೆಗಳನ್ನು ಕೇಳಿದರೆ ಅವರು ಸರಿಯಾಗಿ ಉತ್ತರಿಸಿಯಾರೆಂಬ ಧೈರ್ಯ ನನಗಿರಲಿಲ್ಲ.

ಒಂದು ದಿನ ನಾನು ಒಂದು ಕತೆಯನ್ನು ಸೂತ್ರರೂಪವಾಗಿ ಬರೆದೆ. ಒಂದೊಂದು ಘಟನೆಯನ್ನು ಒಂದೊಂದು ವಾಕ್ಯದಲ್ಲಿ ಸೂಚಿಸಿ, ಮಕ್ಕಳಿಗೆ ಓದಲು ಕೊಟ್ಟೆ.

ಅವರು ಚೆನ್ನಾಗಿ ಓದಿದರು. ಓದುತ್ತಾ ಹೋದಂತೆ, ಅವರಿಗೆ ಕೇಳಿದ ಕತೆಯ ನೆನಪಾಗತೊಡಗಿತು. ಆಮೇಲೆ ನಾನು ಧೈರ್ಯಮಾಡಿ ಪ್ರಶ್ನೋತ್ತರ ರೂಪದಲ್ಲಿ ಕತೆಯ ಘಟನೆಗಳ ಬಗ್ಗೆ ಮಕ್ಕಳನ್ನು ಕೇಳತೊಡಗಿದೆ. ನನ್ನ ಆಶ್ಚರ್ಯಕ್ಕೆ ಎಣೆಯೇ ಇರಲಿಲ್ಲ. ಪಟಪಟನೆ ಎಲ್ಲರೂ ನನ್ನ ಪ್ರಶ್ನೆಗಳಿಗೆ ಉತ್ತರಿಸಿದರು. ಪರೀಕ್ಷೆಯಲ್ಲಿ ಒಳ್ಳೆಯ ರೀತಿಯಿಂದ ಪಾಸಾಗುವುದಷ್ಟೇ ಅಲ್ಲ, ಪರೀಕ್ಷೆಯ ನಂತರವೂ ಇವರಿಗೆ ಇತಿಹಾಸ ಚೆನ್ನಾಗಿ ನೆನಪಿರುತ್ತದೆಂಬ ವಿಶ್ವಾಸವುಂಟಾಯಿತು.

ಅವರ ಮಾತಿನಿಂದ ನನಗೆ ಬಹಳ ಸಮಾಧಾನವಾಯಿತು.

ಆದರೆ ಕೆಲಸ ಇನ್ನೂ ಬಹಳ ಬಾಕಿ ಇತ್ತು. ನಾಲ್ಕು ತಿಂಗಳು ಕಳೆದಿದ್ದವು. ಆದರೂ ನನಗೆ ದೊರೆತ ಯಶಸ್ಸಿನಿಂದ ನನ್ನ ಉತ್ಸಾಹ ದಿನದಿನಕ್ಕೆ ಹೆಚ್ಚಾಗತೊಡಗಿತು.

# ಮೂರನೆಯ ಖಂಡ

# ಆರು ತಿಂಗಳುಗಳ ನಂತರ

## 1

ಪ್ರತಿ ವರ್ಷದಂತೆ ಆ ವರ್ಷವೂ ನಮ್ಮ ಶಾಲೆಯಲ್ಲಿ ನಿರ್ದೇಶಕರ ಸ್ವಾಗತಕ್ಕೆ ಸಿದ್ಧತೆಗಳು ನಡೆದವು. ಅವರು ಬಂದಾಗಲೆಲ್ಲ ಶಾಲೆಗೆ ಆಗಮಿಸುತ್ತಿದ್ದರು. ಶಾಲೆಯ ಪರವಾಗಿ ಒಂದು ಸಮಾರಂಭವನ್ನು ಏರ್ಪಡಿಸಲಾಗುತ್ತಿತ್ತು. ಬಾಲಕರು ಅದರಲ್ಲಿ ಸಂಭಾಷಣೆ, ಕಾವ್ಯಗಾಯನ ಹಾಗೂ ಕವಾಯತು ಮಾಡಿ ತೋರಿಸುತ್ತಿದ್ದರು. ನಂತರ ನಿರ್ದೇಶಕರು ಏನಾದರೂ ಬಹುಮಾನ ಕೊಡುತ್ತಿದ್ದರು. ಎಲ್ಲ ಬಾಲಕರಿಗೂ ಏನಾದರೊಂದು ವಸ್ತು ದೊರೆಯುತ್ತಿತ್ತು. ಅಂದು ಇಡೀ ಪಾಠಶಾಲೆಯಲ್ಲಿ ಸಿಹಿ ಹಂಚಲಾಗುತ್ತಿತ್ತು.

ಎಲ್ಲ ತರಗತಿಗಳ ಬಾಲಕರನ್ನು ಒಟ್ಟುಗೂಡಿಸಿ ನಮ್ಮ ಮುಖ್ಯಾಧ್ಯಾಪಕರು ಒಳ್ಳೆಯ ರೀತಿಯಿಂದ ಮಾತಾಡಬಲ್ಲ, ಹಾಡಬಲ್ಲ ಮಕ್ಕಳನ್ನು ಆರಿಸುತ್ತಿದ್ದರು. ನನಗೂ ಇದೇ ರೀತಿ ಸೂಚನೆ ಕಳಿಸಿದರು. ಆದರೆ ನನ್ನ ತರಗತಿಯ ಬಾಲಕರು ಆಯ್ಕೆಯಲ್ಲಿ ಹಾಜರಿರಲಿಲ್ಲ. ಮುಖ್ಯಾಧ್ಯಾಪಕರು ನನ್ನನ್ನು ಕರೆಸಿ, ಕೇಳಿದಾಗ ನನ್ನ ತರಗತಿಯ ಮಕ್ಕಳು ಈ ಕಾರ್ಯಕ್ರಮದಲ್ಲಿ ಭಾಗವಹಿಸುವುದಿಲ್ಲ ಎಂದು ಹೇಳಿದೆ.

'ಏಕೆ?'

'ಇದೆಲ್ಲ ಮಾಡುವುದು ಕೇವಲ ನಿರ್ದೇಶಕರನ್ನು ಖುಷಿಪಡಿಸಿ ಅವರ ಮೆಚ್ಚುಗೆ ಪಡೆಯಲು ತಾನೆ?'

'ಹೌದು. ಇದು ನಮ್ಮ ಹಿಂದಿನ ಪದ್ಧತಿ. ನಮ್ಮ ಅಧಿಕಾರಿಗಳಿಗೂ ಇದು ಹಿಡಿಸುತ್ತದೆ'.

'ಇರಬಹುದು. ಆದರೆ ನನ್ನ ಮನಸ್ಸು ಇದನ್ನು ಒಪ್ಪುವುದಿಲ್ಲ. ನಾನು ಇದರಲ್ಲಿ ಭಾಗವಹಿಸುವುದಿಲ್ಲ. ನನ್ನ ತರಗತಿಯ ಬಾಲಕರೂ ಬರುವುದಿಲ್ಲ...'

'ಹಾಗಾದರೆ ನೀವು ನನ್ನೊಡನೆ ಸಹಕರಿಸುತ್ತಿಲ್ಲ, ನಮ್ಮ ಕೆಲಸದಲ್ಲಿ ತಡೆಯುಂಟುಮಾಡುತ್ತೀರಿ ಎಂದು ನಾನು ಅಧಿಕಾರಿಗಳಿಗೆ ತಿಳಿಸಬೇಕಾಗುತ್ತದೆ.'

‘ತಾವು ಅವಶ್ಯವಾಗಿ ಬರೆದು ಕಳಿಸಬಹುದು. ನಾನವರಿಗೆ ತಿಳಿಸಿ ಹೇಳಲು ಪ್ರಯತ್ನಿಸುವೆ’.

‘ಆಗಲಿ’.

ಅದೇ ಉತ್ಸಾಹ ಹಾಗೂ ಗಾಬರಿಯಲ್ಲಿ ಮುಖ್ಯಾಧ್ಯಾಪಕರು ಅಧಿಕಾರಿಗಳಿಗೆ ನನ್ನ ವಿರುದ್ಧ ಆರೋಪಿಸಿ ಬರೆದರು.

ಕಾರ್ಯಕ್ರಮಗಳಿಗೆ ಶಾಲೆಯ ಬೇರೆ ಮಕ್ಕಳ ಆಯ್ಕೆ ನಡೆಯಿತು. ಶಾಮಸುಂದರ ಮತ್ತು ಭೀಮಶಂಕರ ಸಂಸ್ಕೃತ ಶ್ಲೋಕಗಳನ್ನು ಹೇಳಲು, ದೇವಿಚಂದ ಮತ್ತು ಖೇಮಚಂದ ಕಾವ್ಯ ಗಾಯನಕ್ಕಾಗಿ, ಚಂಪಕ, ರಮೇಶ, ನೇಮಿಚಂದ ಹಾಗೂ ಸರಜನಲಾಲ ಸಂಭಾಷಣೆಗಾಗಿ ಆಯ್ಕೆಗೊಂಡರು. ಎತ್ತರವಾದ ಬಾಲಕರನ್ನು ಕವಾಯತು ಮಾಡುವುದಕ್ಕಾಗಿ ಆರಿಸಿದರು.

ನಾನು ಮನಸ್ಸಿನಲ್ಲಿಯೇ ತರ್ಕಮಾಡಿದೆ. ಭಲೆ! ಮುಖ್ಯಾಧ್ಯಾಪಕರೂ ಪರವಾಗಿಲ್ಲ. ಈ ಶಾಲೆಗೆ, ಈ ಶಿಕ್ಷಣಕ್ಕೆ, ಈ ರೀತಿನೀತಿಗೆ ದೂರದಿಂದಲೇ ನಮಸ್ಕಾರ. ಇಲ್ಲಿ ಆಯ್ಕೆಯಾದ ಬಾಲಕನಿಗೂ ಅವನ ವಿಷಯಕ್ಕೂ ಯಾವ ಸಂಬಂಧವೂ ಇರಲಿಲ್ಲ. ಶಾಮಸುಂದರ ಮತ್ತು ಭೀಮಶಂಕರ ಬ್ರಾಹ್ಮಣರು, ಅವರ ಕಂಠವೇನೋ ಸ್ವಲ್ಪ ಮಟ್ಟಿಗೆ ಚೆನ್ನಾಗಿಯೇ ಇದೆ. ಮನೆಯಲ್ಲಿ ಸಂಸ್ಕೃತ ವಾತಾರಣವಿದೆ, ಅದಕ್ಕಾಗಿಯೇ ಅವರನ್ನು ಆರಿಸಲಾಗಿದೆ. ಆದರೆ ಎಷ್ಟು ಸಲ ಓದಿದರೂ ಅವರಿಗೆ ನೆನಪೇ ಇರುವುದಿಲ್ಲ. ಶ್ಲೋಕ ಕಂಠಪಾಠಮಾಡಿ ಅವರ ಉಸಿರುಗಟ್ಟುವುದು. ಇಂಥ ಪರಿಸ್ಥಿತಿಯಲ್ಲಿ ಏನು ತಾನೆ ಸಾಧ್ಯ ಎಂದು ನನಗೆ ಮನಸ್ಸಿನಲ್ಲಿಯೇ ಅಪಾರ ದುಃಖವಾಯಿತು. ಹಾಗೆಯೇ ಮನೆಗೆ ಹೋದೆ. ಊಟ ಮಾಡುತ್ತಿದ್ದ ಹಾಗೆಯೇ ಮೇಲಧಿಕಾರಿಗಳು ಆಫೀಸಿನಲ್ಲಿ ಬಂದು ನನ್ನನ್ನು ಭೆಟ್ಟಿಯಾಗಿ, ಸ್ವಲ್ಪ ಕೆಲಸವಿದೆ ಎಂದು ಹೇಳಿ ಕಳಿಸಿದರು. ಏನು ಕೆಲಸ ಎಂಬುದು ನನಗೆ ಗೊತ್ತಿತ್ತು. ಅವರ ಆಫೀಸಿಗೆ ಹೋದೆ. ಅವರ ಮುಖದಲ್ಲಿ ಕ್ರೋಧವಿತ್ತು. ಸಿಟ್ಟಿನಿಂದ ಮುಖ ಕೆಂಪಾಗಿತ್ತು. ಹುಬ್ಬುಗಳು ಮೇಲೇರಿದ್ದವು. ಮೀಸೆ ಇಲ್ಲದ ತುಟಿಗಳು ಅಲುಗಾಡುತ್ತಿದ್ದವು. ಬಹಳ ಸಿಟ್ಟಿಗೆದ್ದಂತೆ ಕಾಣುತ್ತಿತ್ತು. ನನ್ನನ್ನು ನೋಡಿ, ಕುಳಿತುಕೊಳ್ಳಲು ಹೇಳಿ, ‘ನಿಮ್ಮ ತರಗತಿಯ ಬಾಲಕರು ಸಮಾರಂಭದ ಕಾರ್ಯಕ್ರಮಗಳಲ್ಲಿ ಏಕೆ ಭಾಗವಹಿಸುತ್ತಿಲ್ಲ? ಅವರಲ್ಲಿ ಕೆಲವರು ರೂಪವಂತರೂ, ಜಾಣರೂ ಇದ್ದಾರೆ’ ಎಂದು ಕೇಳಿದರು.

ನಾನು ಶಾಂತವಾಗಿದ್ದೆ. ಆದರೆ ನನ್ನ ತಲೆ ಬಿಸಿಯಾಗಿತ್ತು. ‘ಅಂದರೆ ರೂಪವಂತ ಜಾಣ ಹುಡುಗರು ಕೇವಲ ಬೇರೆಯವರ ಮನೋರಂಜನೆಗಾಗಿಯೇ ಇದ್ದಾರೆಯೆ? ಬೇರೆಯವರೆದುರಿಗೆ ಕುಣಿದು ಶಾಲೆಗಾಗಿ ಸುಳ್ಳು ಪ್ರಶಸ್ತಿ ಗಳಿಸಬೇಕೆ?’

ನನ್ನ ಉತ್ತರ ಕೇಳಿ ಅಧಿಕಾರಿಗಳು ಸ್ವಲ್ಪ ಶಾಂತರಾದರು.

ಅವರೆಂದರು: ‘ಈ ಸಮಾರಂಭಗಳು ನಮಗೇನೂ ಹೊಸದಲ್ಲ. ಎಷ್ಟೋ ವರ್ಷಗಳಿಂದ





‘ಇದರಲ್ಲಿ ನಾನು ಪಾಲ್ಗೊಳ್ಳುವುದಿಲ್ಲ. ನನಗಿದು ಹಿಡಿಸುವುದಿಲ್ಲ’ ಎಂದು ನಾನು ಹೇಳಿದೆ.

ಈ ಪದ್ಧತಿ ನಡೆದು ಬಂದಿದೆ. ನಿರ್ದೇಶಕರು ಬಂದಾಗೆಲ್ಲ ಹೀಗೆಯೇ ನಡೆಯುವುದು.’

‘ಸರ್, ನನ್ನನ್ನು ಕ್ಷಮಿಸಿ,’ ನಾನು ಬಿಸಿಯಾಗಿಯೇ ಹೇಳಿದೆ. ‘ಪದ್ಧತಿ ಹೇಗಾದರೂ ಇರಲಿ, ನನ್ನ ಅಭಿಪ್ರಾಯದಂತೆ ಇದು ಸರಿಯಲ್ಲ. ನಾವು ಅದನ್ನು ಮುರಿಯಬೇಕು. ಇದು ಆಡಂಬರ, ಬೂಟಾಟಿಕೆ. ನಿರ್ದೇಶಕರಿಗೆ ನಾವು ಮಾಡುವ ಮೋಸ.’

‘ಮೋಸ? ಎಂಥಾ ಮೋಸ?’

‘ಹೌದು, ನಾವು ಅವರಿಗೆ ತೋರಿಸುವುದೆಲ್ಲ ಮಕ್ಕಳನ್ನು ಹೊಡೆದು ಬಡಿದು, ಬಾಯಿಪಾಠ ಮಾಡಿಸಿಯೇ ಅಲ್ಲವೇ? ಅದು ನಮ್ಮ ಕಲಿಸುವಿಕೆಯ ನಿಜವಾದ ಸ್ವಾಭಾವಿಕ ಪರಿಣಾಮವಲ್ಲ. ಎಷ್ಟೋ ದಿನ ಅಭ್ಯಾಸ ನಡೆಯುವುದು. ಆಗ ಮಕ್ಕಳು ಕಂಠಪಾಠ ಮಾಡಿ ಅದನ್ನು ಒಪ್ಪಿಸುತ್ತಾರೆ. ಆದರೂ ಹಿಂದೆ ನಿಂತು ಹೇಳಿಕೊಡಲೇಬೇಕಾಗುತ್ತದೆ. ಇದರಲ್ಲಿ ಮಕ್ಕಳ ಸಮಯ ಹಾಗೂ ಶಕ್ತಿ ಎರಡೂ ವ್ಯಯವಾಗುತ್ತವೆ. ಅವರ ಓದು ಹಿಂದೆ ಬೀಳುತ್ತದೆ. ಇಂದು ಆಯ್ಕೆಗೊಂಡ ಬಾಲಕರು ಆ ಕೆಲಸಗಳಿಗೆ ಯೋಗ್ಯರಲ್ಲ. ಅವರನ್ನು ಹೊಡೆದು ಬಡಿದು ತಯಾರು ಮಾಡಬೇಕಾಗುವುದು.’

‘ಆದರೆ ಇದರಲ್ಲಿ ವಿಸ್ವಾಸಘಾತವೇನಿದೆ?’

‘ನಿರ್ದೇಶಕರ ಮನಸ್ಸಿನ ಮೇಲೆ ಈ ಮಕ್ಕಳು ಜಾಣರಿದ್ದಾರೆ, ನಮ್ಮ ಶಾಲೆ

ಸುಂದರವಾಗಿದೆ; ನಮ್ಮ ಕೆಲಸ ಆದರ್ಶಪ್ರಾಯವಾಗಿದೆ ಎಂಬ ಪ್ರಭಾವ ಬೀರುವ ಇಚ್ಛೆಯನ್ನು ನಾವು ಹೊಂದಿದ್ದೇವೆ. ಆದರೆ ನಿಜವಾಗಿ ನಾವೇನಿದ್ದೇವೆ. ಏನಿಲ್ಲ ಎಂಬುದು ನಮಗೆ ಚೆನ್ನಾಗಿ ಗೊತ್ತು.'

ಅಧಿಕಾರಿಗಳು ಸ್ವಲ್ಪ ಹೊತ್ತು ಸುಮ್ಮನಿದ್ದು ಯೋಚಿಸತೊಡಗಿದರು. ನಾನು ಮುಂದುವರಿಸಿದೆ. 'ನಾವಂತೂ ಹೀಗೆ ಮಾಡುವುದಲ್ಲದೆ ಮಕ್ಕಳನ್ನು ತಪ್ಪುದಾರಿಗೆ ಎಳೆಯುತ್ತೇವೆ. ನಮ್ಮ ಸಾಹೇಬರೂ ಉಲ್ಲಾಸಗೊಂಡು ಅಭಿನಯಮಾಡಿ ಬಹುಮಾನ ಕೊಡುತ್ತ ಹೇಳುತ್ತಾರೆ. 'ಈ ಮಕ್ಕಳ ಬುದ್ಧಿ, ಯೋಗ್ಯತೆ ಹಾಗೂ ಅಭಿರುಚಿಯ ಪರಿಚಯದಿಂದ ನನಗೆ ಬಹಳ ಸಂತೋಷವಾಗಿದೆ. ಇವರಲ್ಲಿ ಕೆಲವು ವಿದ್ಯಾರ್ಥಿಗಳಂತೂ ಮುಂದೆ ಉತ್ತಮ ನಾಗರಿಕರೂ, ವಿದ್ವಾಂಸರೂ, ಆದರ್ಶ ವ್ಯಕ್ತಿಗಳೂ ಆಗುವ ಭರವಸೆ ಮೂಡಿಸಿದ್ದಾರೆ. ಇವರಿಗೆ ಪ್ರೋತ್ಸಾಹ ನೀಡುವುದಕ್ಕಾಗಿಯೇ ಈ ಬಹುಮಾನಗಳನ್ನು ಇಡಲಾಗಿದೆ. ಈ ಯೋಜನೆಗಳನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. ಇಂದು ಈ ಮಕ್ಕಳಿಗೆ ಬಹುಮಾನಗಳನ್ನು ಕೊಡುವಾಗ ನನಗೆ ಅಪಾರ ಸಂತೋಷವಾಗುತ್ತದೆ.' ಈ ಮಾತೆಲ್ಲ ನಿಜವಾಗಿ ಸಾಹೇಬರ ಹೃದಯದಿಂದ ಬರುತ್ತವೆಯೇ? ಈ ಎಲ್ಲ ಕಾರ್ಯಕ್ರಮ ಅವರನ್ನು ಮರುಳುಗೊಳಿಸುವದಕ್ಕಾಗಿ ಎಂಬುದನ್ನು ಅವರು ಅರಿಯರೆ? ಈ ಮಕ್ಕಳಿಗೆ ಬಾಯಿಪಾಠ ಮಾಡಿಸಿ ವಿಶೇಷ ಶ್ರಮವಹಿಸಿ ತಯಾರು ಮಾಡದೆ ಹೋಗಿದ್ದರೆ ಇವರು ಎಂಥ ವಿದ್ವಾಂಸರು, ಎಂಥ ನಾಗರಿಕರು ಎಂಬುದು ನಮಗೂ ಅವರ ತಂದೆ-ತಾಯಿಗಳಿಗೂ ಚೆನ್ನಾಗಿ ಗೊತ್ತು. ಆದರೆ ಡೈರೆಕ್ಟರ್ ಸಾಹೇಬರ ಮನೋರಂಜನೆಗಾಗಿ ನಾನು ಏನಾದರೂ ಮಾಡುವೆ, ಮಕ್ಕಳ ಸಮಯವೂ ನಷ್ಟವಾಗಬಾರದು, ಶಕ್ತಿಯ ದುರುಪಯೋಗವಾಗಬಾರದು. ಹೀಗೇನಾದರೂ ವ್ಯವಸ್ಥೆ ಮಾಡುವೆ. ತಾವು ಅವರನ್ನು ನನ್ನ ತರಗತಿಗೆ ಕರೆತನ್ನಿ. ನನ್ನ ಕಾರ್ಯಕ್ರಮ ನಿಮ್ಮಿಬ್ಬರಿಗೂ ಹಿಡಿಸುವುದೆಂಬ ವಿಶ್ವಾಸ ನನಗಿದೆ.'

ಅವರು ಸ್ವಲ್ಪಹೊತ್ತು ಯೋಚಿಸಿ, ಮುಗುಳ್ನಕ್ಕರು. ನಂತರ 'ಆಗಲಿ, ನೀವೊಂದು ಕೆಲಸ ಮಾಡಿ. ನಾನು ನಿಮ್ಮ ಮುಖ್ಯಾಧ್ಯಾಪಕರಿಗೆ ಒಂದು ಪತ್ರ ಕೊಡುವೆ. ಅವರು ನಿಮ್ಮನ್ನು ಈ ಕೆಲಸದಿಂದ ಬಿಡುಗಡೆ ಮಾಡುವರು. ಆದರೆ ಅವರನ್ನು ಸಿಟ್ಟಿಗೆಬ್ಬಿಸಬೇಡಿ. ಪಾಪ, ಅವರು ಹಳೆಯ ವಿಚಾರದವರು, ನೀವು ಉತ್ಸಾಹ ತುಂಬಿದ ಯುವಕರು. ನನಗೆ ಇಬ್ಬರನ್ನೂ ಸಂಭಾಳಿಸಬೇಕಾಗಿದೆ. ಇದು ಎಷ್ಟು ಕಠಿಣ ಕೆಲಸವೆಂಬುದು ನೀವಿಬ್ಬರೂ ಬಲ್ಲಿರಿ' ಎಂದು ಹೇಳಿದರು.

ಅವರಿಗೆ ನಮಸ್ಕಾರ ಹೇಳಿ ಮನೆಗೆ ಹೊರಟೆ.

* * *



ಅಂದು ಶಾಲೆಯಲ್ಲಿ ಪೂರ್ಣ ಉತ್ಸಾಹದಿಂದ ತಯಾರಿ ನಡೆದಿತ್ತು. ಸಾಹೇಬರು ಬರುತ್ತಾರೆ! ಡೈರೆಕ್ಟರ್ ಸಾಹೇಬರು ಬರುತ್ತಾರೆ!

ಸಣ್ಣ-ಪುಟ್ಟ ಹಾಗೂ ದೊಡ್ಡ ದೊಡ್ಡ ಅಧಿಕಾರಿಗಳು, ಹಳ್ಳಿಯ ನಾಗರಿಕರು, ವಿದ್ಯಾರ್ಥಿಗಳು ಮತ್ತು ಶಿಕ್ಷಕರು – ಎಲ್ಲರೂ ಬಂದಿದ್ದರು. ಶಾಲೆಯ ಇತರ ಶಿಕ್ಷಕರ ಪರಿಸ್ಥಿತಿ ವಿಚಿತ್ರವಾಗಿತ್ತು. ಅವರ ಎದೆ ಬಡಿದುಕೊಳ್ಳುತ್ತಿತ್ತು, ಗಾಬರಿಯಾಗಿದ್ದರು. ಶ್ರಮವಹಿಸಿ ನೆಟ್ಟಗೆ ನಿಲ್ಲುವ ಪ್ರಯತ್ನದಲ್ಲಿದ್ದರು. ಆದರೂ ಅವರವರ ಕೆಲಸದಲ್ಲಿ ನಿರತರಾಗಿದ್ದರು. ಮುಖ್ಯೋಪಾಧ್ಯಾಯರು ಕೆಲವು ಗಲಾಟೆ ಮಾಡುವ ಹುಡುಗರನ್ನು ಒಂದೆಡೆ ಕರೆದು ಹೇಳಿದರು: 'ಚಾಂಡಾಲರೇ ಕೇಳಿ, ಏನಾದರೂ ಗಲಾಟೆ ಮಾಡಿದರೆ ನಾಳೆ ನಿಮ್ಮನ್ನು ಸದೆಬಡಿಯುತ್ತೇನೆ.'

ಚಪ್ಪಾಳೆಗಳ ಸಪ್ಪಳ ಹಾಗೂ ಸಂಗೀತದ ಮಧ್ಯದಲ್ಲಿ ಡೈರೆಕ್ಟರ್ ಸಾಹೇಬರ ಆಗಮನವಾಯಿತು. ಮುಖ್ಯಾಧ್ಯಾಪಕರು ನಮ್ಮ ಶಾಲೆಯ ವಾರ್ಷಿಕ ವರದಿಯನ್ನು ಎತ್ತರದ ಮತ್ತು ಸ್ಪಷ್ಟವಾದ ಧ್ವನಿಯಲ್ಲಿ, ತಾವೇನೂ ಕಂಪಿಸುತ್ತಿಲ್ಲ ಎಂದು ತೋರಿಸುವ ಹಾಗೆ, ಓದಿದರು. ಅದಕ್ಕಾಗಿಯೇ ಅವರು ಆಗಾಗ್ಗೆ ಸೆಟೆದು ನಿಂತು ಓದುತ್ತಿದ್ದರು. ಆದರೆ ವರದಿ ಓದಿ ಮುಗಿಸುವುದರೊಳಗೆ ಅವರ ಅಂಗಿ ಸಂಪೂರ್ಣವಾಗಿ ಬೆವರಿನಿಂದ ತೊಯ್ದುಹೋಗಿತ್ತು, ಧ್ವನಿ ಕುಂಠಿತವಾಗಿತ್ತು. ವರದಿಯ ನಂತರ ಕವಿತಾ ಪಾಠ ಮತ್ತು ಸಂಭಾಷಣೆಗಳು ಪ್ರಾರಂಭವಾದವು.

ಹುಡುಗರು ಗ್ರಾಮಫೋನ್ ರೆಕಾರ್ಡ್ ಹಾಕಿದಂತೆ ಪದ್ಯಗಳನ್ನು ಹೇಳತೊಡಗಿದರು. ಅವರ ಮುಖದಲ್ಲಿ ಯಾವುದೇ ಹಾವಭಾವ ಇರಲಿಲ್ಲ. ಕೈಕಾಲು ಆಡಿಸುತ್ತ ಜೋರಾಗಿ ಅರಚುತ್ತಿದ್ದರು. ಸುಪ್ರಸಿದ್ಧ ಕವಿಗಳ ಕವಿತೆಗಳನ್ನು ಆಯ್ಕೆಮಾಡಿದ್ದರೂ ಅವು ವಿದ್ಯಾರ್ಥಿಗಳಿಗೆ ಏನೂ ಅರ್ಥವಾಗದಂಥ ಕಠಿಣ ಕವಿತೆಗಳಾಗಿದ್ದವು. ಏನೂ ಅರ್ಥ ಮಾಡಿಕೊಳ್ಳದೆ ಅಭಿನಯ ಮಾಡುತ್ತಾ ತಮ್ಮ 'ರಸಿಕತೆ'ಯನ್ನು ಪ್ರದರ್ಶಿಸಿದರು. ಭಾಷಣ ಸ್ಪರ್ಧೆಗೆ ಆರಿಸಿದ್ದ ವಿಷಯಗಳ ಬಗ್ಗೆ ಮಾತಾಡಿದರೆ ಅದು ಅಪ್ರಾಸಂಗಿಕವಾಗುತ್ತದೆ. ನಾನೊಬ್ಬನೇ ಅಲ್ಲದೆ ಡೈರೆಕ್ಟರ್ ಸಾಹೇಬರೂ ಸಹ ಈ ಸಂಕಟವನ್ನು ಅನುಭವಿಸಿದ್ದರು. ನಾನು ಒಳಗೊಳಗೇ ನಗುತ್ತಿದ್ದೆ. ನನ್ನ ಸಹ ಅಧ್ಯಾಪಕರೂ ಮನಸ್ಸಿಟ್ಟು ಇದನ್ನು ಕೇಳಿದ್ದರೆ ಅವರೂ ಇದೇ ಅಭಿಪ್ರಾಯ ವ್ಯಕ್ತಪಡಿಸುತ್ತಿದ್ದರು.

ಕಾರ್ಯಕ್ರಮಗಳು ಮುಕ್ತಾಯಗೊಂಡವು. ಸಾಹೇಬರು ಸಂತೋಷ ವ್ಯಕ್ತಪಡಿಸಿದರು. ಬಹುಮಾನ ವಿತರಣೆಯಾಯಿತು. ಮುಖ್ಯೋಪಾಧ್ಯಾಯರು, ದೊಡ್ಡ ಸಾಹೇಬರು ಎಲ್ಲರೂ ಈ ಕಾರ್ಯಕ್ರಮದಿಂದ ಸಂತೋಷಗೊಂಡಂತೆ ಕಂಡರು. ಡೈರೆಕ್ಟರ್ ಸಾಹೇಬರು ಶಿಷ್ಟಾಚಾರಕ್ಕೆ ಹೇಳಿದರು: 'ನಿಮ್ಮ ಪಾಠಶಾಲೆಯ ಕೆಲಸವನ್ನು ನೋಡಿ ನನಗೆ ಸಂತೋಷವಾಗಿದೆ.'

ಅಷ್ಟರಲ್ಲಿ ನಮ್ಮ ಸಾಹೇಬರು ದೊಡ್ಡ ಸಾಹೇಬರಲ್ಲಿ ವಿನಂತಿಸಿಕೊಂಡರು. 'ನಾಲ್ಕನೇ

ತರಗತಿಯ ಈ ಶಿಕ್ಷಕರು ನಿಮಗೆ ಅವರ ಕೆಲಸವನ್ನು ತೋರಿಸಬೇಕೆಂದಿದ್ದಾರೆ. ಆ ಪರದೆಯ ಹಿಂಭಾಗದಲ್ಲಿ ಏರ್ಪಾಟು ಮಾಡಿದ್ದಾರೆ.'

ಸಾಹೇಬರು ಉದಾರ ಮನಸ್ಸಿನಿಂದ ತಕ್ಷಣ ಒಪ್ಪಿಕೊಂಡರು. ನಾನು ಪರದೆಯ ಹಿಂದೆ ಹೋದೆ. ಮಧ್ಯದಲ್ಲಿ ನಾನು ಮತ್ತು ನನ್ನ ಸುತ್ತ ನನ್ನ ವಿದ್ಯಾರ್ಥಿಗಳು ಕುಳಿತೆವು. ತರಗತಿಯಲ್ಲಿ ಪ್ರತಿನಿತ್ಯ ಹಾಡುವ ಒಂದು ಹಾಡನ್ನು ಪ್ರಾರ್ಥನೆಯಾಗಿ ಹಾಡಿದೆವು. ಕೊಠಡಿಯಲ್ಲಿ ಶಾಂತಿ ನೆಲೆಸಿತ್ತು. ಇದ್ದಕ್ಕಿದ್ದ ಹಾಗೆ ಈ ನಾಟಕ ಎಂಥದು ಎಂದು ಎಲ್ಲರೂ ಆಶ್ಚರ್ಯಗೊಂಡರು.

ಪ್ರಾರ್ಥನೆಯ ನಂತರ ಮಕ್ಕಳು 'ನಾನು ಕಚೇರಿಗೆ ಹೋಗುವೆ' ಎಂಬ ಆಟ ಪ್ರಾರಂಭಿಸಿದರು. ಒಬ್ಬ ಬಾಲಕ, ಇಲಿಯ ಪಾತ್ರ ವಹಿಸಿದ. ಸೊಂಟದಲ್ಲಿ ಹಗ್ಗ ಕಟ್ಟಿಕೊಂಡು ಅವನು ಅದರಿಂದ ಬಾಲವನ್ನು ಮಾಡಿಕೊಂಡಿದ್ದ. ತಲೆಯ ಮೇಲೆ ಕಪ್ಪು ಬಟ್ಟೆ ಹೊದ್ದುಕೊಂಡು ಕೈಗಳನ್ನು ಕಾಲಿನಂತೆ ಬಳಸಿ ನಾಲ್ಕು ಕಾಲುಗಳಿಂದ ನಡೆದಾಡುತ್ತ 'ಚೊಂ ಚೊಂ' ಶಬ್ದ ಮಾಡುತ್ತಿದ್ದ. ಒಬ್ಬ ಬಾಲಕ ಸಿಂಪಿಗ, ಮತ್ತೊಬ್ಬ ಕಡಲೆಕಾಯಿ ವ್ಯಾಪಾರಿ, ಇನ್ನೊಬ್ಬ ಮುತ್ತು ಮಾರುವವ. ನಾಲ್ಕನೆಯವ ಮೃದಂಗ ಬಾರಿಸುವವ. ಐದನೆಯವ ರಾಜನ ಪಾತ್ರ ವಹಿಸಿದ್ದ. ನಾನು, ಆರನೆಯವ, ರಾಜನ ಸಿಪಾಯಿ ಯಾಗಿದ್ದೆ.

ಎಲ್ಲರೂ ಸರಳ ಉಡುಪು ಧರಿಸಿದ್ದರು. ರಾಜನು ಮೇಜಿನ ಮೇಲೆ ದರ್ಪದಿಂದ ಕುಳಿತಿದ್ದ. ತಲೆಯ ಮೇಲೆ ಟೊಪ್ಪಿಗೆಯನ್ನು ಸೊಟ್ಟಗೆ ಇಟ್ಟುಕೊಂಡಿದ್ದ. ಸಿಪಾಯಿಯಾದ ನಾನು ಮೀಸೆಯನ್ನು ಹುರಿಗೊಳಿಸಿ ನಿಂತಿದ್ದೆ. ಕೊರಳಲ್ಲಿ ಒಂದು ವಸ್ತ್ರ, ಕೈಯಲ್ಲಿ ಒಂದು ಚೂರಿ ಹಿಡಿದಿದ್ದೆ. ಮೃದಂಗದವನ ಕೈಯಲ್ಲಿ ಮೃದಂಗವಿತ್ತು. ಉಳಿದವರ ಕೈಗಳು ಖಾಲಿಯಾಗಿದ್ದವು.

ನಮ್ಮ ರಂಗಮಂಚ ಸರಳವಾಗಿತ್ತು. ಪರದೆಯ ಮೇಲೆ ಎಲ್ಲ ಕಾರ್ಯಕ್ರಮ ಬರೆಯಲಾಗಿತ್ತು. ಕೋಣೆಯನ್ನು ಸ್ವಚ್ಛವಾಗಿ ಗುಡಿಸಲಾಗಿತ್ತು. ನೆಲದ ಮೇಲೆ ಮಕ್ಕಳು ಮನೆಯಿಂದ ತಂದ ಒಂದು ಚಿಕ್ಕ ಜಮಖಾನೆ ಹಾಸಿದ್ದರು. ರಂಗಮಂಟಪದ ಅಂದವನ್ನು ಹೆಚ್ಚಿಸಲು ಬೇಕಾದ ಯಾವ ವಸ್ತುವೂ ಶಾಲೆಯಲ್ಲಿರಲಿಲ್ಲ. ಅರಳಿ ಮತ್ತು ಬೇವಿನ ಎಲೆಗಳನ್ನು ಗೋಡೆಗಳಿಗೆ ಅಂಟಿಸಿ ಸಿಂಗರಿಸಿದ್ದೆವು. ನೆಲದ ಮೇಲೆ ಬಣ್ಣ ಬಣ್ಣದ ಬಳಪಗಳಿಂದ ಮಕ್ಕಳು ತಮಗೆ ಇಷ್ಟವಾದ ಚಿತ್ರಗಳನ್ನು ಬರೆದಿದ್ದರು. ಇಲಿಯ ನಾಟಕ ನಡೆಯಿತು. ಎಲ್ಲರೂ ಶಾಂತರಾಗಿ ನೋಡುತ್ತಿದ್ದರು. ಮಕ್ಕಳು ಬಹಳ ಆಸಕ್ತಿಯಿಂದ ನೋಡುತ್ತಿದ್ದರು. ಎಲ್ಲರೂ ಆಶ್ಚರ್ಯದಿಂದ ಗಮನಿಸಿದ್ದರು.

'ಇದೇನು? ಈ ಹೊಸತನ ಹೇಗೆ ಬಂತು? ಈ ನಾಟಕ ಹೇಗೆ?'

ಮಕ್ಕಳು ನಾಟಕವನ್ನು ಚೆನ್ನಾಗಿ ಪ್ರದರ್ಶಿಸಿದರು. ಯಾವ ತಪ್ಪೂ ಮಾಡಲಿಲ್ಲ. ಯಾರನ್ನೂ ಪ್ರಾಮ್ಟರ್ ಆಗಿ ನೇಮಿಸಿದ್ದಿಲ್ಲ. ಅಲ್ಪ ಸ್ವಲ್ಪ ತಪ್ಪಿದ್ದರೆ ನಾನೇ ಅದನ್ನು ಸುಧಾರಿಸುತ್ತಿದ್ದೆ.



ಎರಡನೆಯ ನಾಟಕ 'ಮುದುಕಿ' ಮತ್ತು ಮೂರನೆಯ ನಾಟಕ 'ಮೊಲ' ಪ್ರದರ್ಶಿಸಲಾಯಿತು.

ಪರದೆ ಒಂದೇ ಇದ್ದದ್ದು. ದೃಶ್ಯಗಳು ಯಾವುವೂ ಇರಲಿಲ್ಲ. ಮಕ್ಕಳು ಒಮ್ಮೆ ತಲೆಯ ಮೇಲೆ ಬಟ್ಟೆ ಧರಿಸಿದರೆ ಮತ್ತೊಮ್ಮೆ ಕೈಯಲ್ಲಿ ಬಡಿಗೆ ಹಿಡಿದುಕೊಳ್ಳುತ್ತಿದ್ದರು. ಉಳಿದೆಲ್ಲವೂ ಅವರ ಅಭಿನಯವನ್ನೇ ಅವಲಂಬಿಸಿತ್ತು.

ಮಂಗಳದೊಂದಿಗೆ ನಾಟಕ ಮುಗಿಯಿತು. ನಾನು ಮ್ಯಾನೇಜರನಾಗಿ ರಂಗದ ಮೇಲೆ ಬಂದು ದರ್ಶಕರಿಗೆ ಹೇಳಿದೆ; 'ಸಜ್ಜನರೇ, ನಮ್ಮ ಈ ನಾಟಕ ಪ್ರಯೋಗಗಳನ್ನು ತಾವು ಶಾಂತರೀತಿಯಿಂದ ನೋಡಿದ್ದಕ್ಕಾಗಿ ತಮಗೆ ಹಾರ್ದಿಕ ಕೃತಜ್ಞತೆಗಳು. ಈ ವಿಷಯವಾಗಿ ನಾನು ತಮ್ಮಲ್ಲಿ ಒಂದು ವಿನಂತಿ ಮಾಡಿಕೊಳ್ಳಬಯಸುತ್ತೇನೆ. ದಯವಿಟ್ಟು ಕೇಳಿ.'

'ಇವರು ನಾಲ್ಕನೆಯ ತರಗತಿಯ ವಿದ್ಯಾರ್ಥಿಗಳು. ಈ ಸಂದರ್ಭದಲ್ಲಿ ನಾವೂ ನಮ್ಮ ಕೆಲವು ನಾಟಕಗಳನ್ನೇಕೆ ಆಡಬಾರದು ಎಂದು ಕೇಳಿದಾಗ ಎಲ್ಲರೂ ಸಂತೋಷದಿಂದ ಒಪ್ಪಿಕೊಂಡರು. ಇವರು ಉತ್ಸಾಹ ಹಾಗೂ ಶ್ರದ್ಧೆಯನ್ನು ಪ್ರದರ್ಶಿಸಿದರು. ಕೂಡಲೇ ನಾಟಕಗಳನ್ನು ಆರಿಸಿದೆವು. ಅವರು ಓದಿದ ಕತೆಗಳನ್ನೇ ನಾಟಕರೂಪವಾಗಿ ತಮ್ಮೆದುರ ಪ್ರದರ್ಶಿಸಲಾಗಿದೆ. ಪ್ರತಿವಾರ ಅಭ್ಯಾಸವಿಲ್ಲದೆ ನಾವು ನಾಟಕ ಆಡುವ ಹಾಗೆ ಇಂದೂ ನಾಟಕ ಆಡೋಣ ಎಂದು ಇವರಿಗೆ ಹೇಳಿದೆ. ನಮ್ಮ ತರಗತಿಯಲ್ಲಿ ಯಾವುದನ್ನೂ ಬಾಯಿಪಾಠ ಮಾಡಿಸುವುದಿಲ್ಲ. ಮಕ್ಕಳಿಗೆ ಕತೆಯ ವಸ್ತು ಚೆನ್ನಾಗಿ ನೆನಪಿರುತ್ತದೆ. ಪ್ರತಿಯೊಬ್ಬರಿಗೂ ಕತೆಯಲ್ಲಿ ಅವರ ಮಾತು ಏನು ಎಂಬುದು ಚೆನ್ನಾಗಿ ನೆನಪಿರುತ್ತದೆ. ನಂತರ ಪ್ರಸಂಗಾನುಸಾರವಾಗಿ ರಂಗದ ಮೇಲೆ ಅವರು ತಮ್ಮ ಸಂಭಾಷಣೆಗಳನ್ನು ಸ್ವತಃ ಹೇಳುತ್ತಾರೆ. ಯಾರಿಗೂ ತನ್ನ ಪಾತ್ರದ ಮಾತುಗಳನ್ನು ನೆನಪಿಡುವ ಅವಶ್ಯಕತೆ ಇಲ್ಲ. ವೇಷಭೂಷಣ ನಾಟಕದ ಗೌಣ ಅಂಗಗಳಾದರೂ ಅಭಿನಯ ಮತ್ತು ಭಾವ ಪ್ರದರ್ಶನ ಮಹತ್ವಪೂರ್ಣವಾದ ಅಂಗಗಳಾಗಿವೆ. ನಾವು ಅವುಗಳಿಗೆ ಹೆಚ್ಚು ಮಹತ್ವ ಕೊಡುತ್ತೇವೆ, ವೇಷಭೂಷಣಕ್ಕಲ್ಲ. ಆದ್ದರಿಂದ ಅಭಿನಯದ ವಿಕಾಸವು ಸಂಪೂರ್ಣವಾಗುವುದು. ತಮಗೂ ಹೀಗೆಯೇ ಅನ್ನಿಸಿರಬಹುದು. ನನ್ನ ವಿದ್ಯಾರ್ಥಿಗಳಿಗೂ ಇಂಥದರಲ್ಲಿ ಬಹಳ ಆನಂದವಾಗುತ್ತದೆ. ಅವರಿಗೆ ಶಭಾಶ್‌ಗಿರಿಯ ಆವಶ್ಯಕತೆ ಇಲ್ಲ. ತಮ್ಮ ಕೆಲಸದಲ್ಲಿಯೇ ಅವರಿಗೆ ಸಂಪೂರ್ಣ ಸಂತೋಷ ದೊರೆಯುತ್ತದೆ.

'ಸಜ್ಜನರೇ, ತಾವು ಪ್ರೇಮ ಹಾಗೂ ಶಾಂತಿಯಿಂದ ಈ ಮಕ್ಕಳ ನಾಟಕ ನೋಡಿದ್ದಕ್ಕಾಗಿ ನಾನು ತಮಗೆ ಮತ್ತೊಮ್ಮೆ ವಂದಿಸುವೆ' ಎಂದು ಹೇಳಿ ಕೈ ಮುಗಿದು ಕುಳಿತುಕೊಂಡೆ.

ನಿರ್ದೇಶಕರ ಮುಖದ ಮೇಲೆ ಸಂತೋಷ ಲಾಸ್ಯವಾಡುತ್ತಿದ್ದುದನ್ನು ಬಹಳ ಹೊತ್ತಿನಿಂದ ಗಮನಿಸುತ್ತಿದ್ದೆ. ಕೂಡಲೆ ಅವರೆಂದರು.

'ಲಕ್ಷ್ಮೀಶಂಕರ ಬಾಬು ಹಾಗೂ ಅವರ ವಿದ್ಯಾರ್ಥಿಗಳು ಇದೀಗ ನಮಗೆಲ್ಲ ನಿಜವಾದ ಮನೋರಂಜನೆಯನ್ನು ಒದಗಿಸಿದ್ದಾರೆ. ಅದಕ್ಕಾಗಿ ನಾನು ಅವರನ್ನು ಅಭಿನಂದಿಸುತ್ತೇನೆ.

ಅವರ ಕಾರ್ಯಕ್ರಮ ನಿಜವಾಗಿಯೂ ಸೊಗಸಾಗಿತ್ತು. ಈ ಕಾರ್ಯಕ್ರಮವನ್ನು ನೋಡುತ್ತಿದ್ದಾಗ ನಾನು ನನ್ನ ಮಾತೃ ಭೂಮಿ ಇಂಗ್ಲೆಂಡ್‌ನಲ್ಲಿದ್ದೇನೆ ಎಂದು ಅನಿಸುತ್ತಿತ್ತು. ಆ ದೃಶ್ಯ ನಿಸ್ಸಂದೇಹವಾಗಿಯೂ ಅದ್ಭುತವಾಗಿತ್ತು. ಮಕ್ಕಳು ಸ್ವಯಂ ಸ್ಫೂರ್ತಿಯಿಂದ ಇಲಿ, ಸಿಂಪಿಗ, ರಾಜನ ಅಭಿನಯ ಮಾಡಿ ತೋರಿಸಿದ್ದು ನಿಜವಾಗಿಯೂ ಅದ್ಭುತವಾಗಿದೆ. ಕಂಠಪಾಠ ಹಾಗೂ ಸಂಭಾಷಣೆಗಳ ಕಾಲ ಮುಗಿದು ಹೋಗಿದೆ. ಈ ಸಂಗತಿಗಳು ನಿಜವಾಗಿಯೂ ಕ್ರೂರವಾಗಿವೆ, ಅಸಭ್ಯವಾಗಿವೆ ಹಾಗೂ ಆತ್ಮನಾಶಮಾಡುವಂತಹ ವಾಗಿವೆ.' ಉದ್ವೇಗದಿಂದ ಇಷ್ಟು ನುಡಿದು, ಸ್ವಲ್ಪಹೊತ್ತು ಸುಮ್ಮನಾಗಿ ಪುನಃ ಹೇಳತೊಡಗಿದರು.

'ಈ ಕೆಲಸ ನೋಡಿ ನನಗೆ ಬಹಳ ಆನಂದವಾಗಿದೆ ಎಂದು ಮತ್ತೊಮ್ಮೆ ಹೇಳಬಯಸುತ್ತೇನೆ. ನಾನು ಬಹುಮಾನಗಳನ್ನು ಕೊಡುವುದಿಲ್ಲ. ಅಭಿನಯಿಸುವಾಗಲೇ ಅವರು ನಿಜವಾದ ಆನಂದ ಅನುಭವಿಸಿದ್ದಾರೆ; ಇದು ಯವುದೇ ಬಹುಮಾನಕ್ಕಿಂತ ದೊಡ್ಡದು. ನನಗೆ ನಿಜವಾಗಿಯೂ ಸಂತೋಷವಾಗಿದೆ.'

ಸಮಾರಂಭ ಮುಗಿಯಿತು. ಎಲ್ಲರೂ ತಮ್ಮ ತಮ್ಮ ಮನೆಗಳಿಗೆ ತೆರಳಿದರು.

ನಮ್ಮ ಸಾಹೇಬರ ಸಂತೋಷಕ್ಕೆ ಪಾರವೇ ಇರಲಿಲ್ಲ. ಅವರು ದೊಡ್ಡ ಸಾಹೇಬರಿಗೆ ನನ್ನ ಪರಿಚಯ ಮಾಡಿಸಿದರು. ನನ್ನ ಪ್ರಯೋಗಗಳ ಬಗೆಗೂ ಹೇಳಿದರು. ನಿರ್ದೇಶಕರು ಕೈ ಕುಲುಕಿಸುತ್ತ ನುಡಿದರು: 'ಶಾಬ್ಬಾಶ್ ನೀವು ನಿಜವಾಗಿಯೂ ಯಶಸ್ವಿಗಳು. ನಿಮ್ಮ ಪ್ರಯೋಗಗಳನ್ನು ಮುಂದುವರೆಸಿ. ಅದೇ ನಿಜವಾದುದು, ಉಳಿದಿದ್ದೆಲ್ಲ ನಿಷ್ಪ್ರಯೋಜಕ, ಕೇವಲ ಆಡಂಬರ.'

ನಿರ್ದೇಶಕರ ಈ ಮಾತುಗಳಿಂದ ನನಗೆ ಎಷ್ಟು ಸಂತೋಷ ಹಾಗೂ ಹೆಮ್ಮೆ ಉಂಟಾಗಿರಬಹುದೆಂಬುದನ್ನು ನೀವೇ ಊಹಿಸಿ.

ನನಗಂತೂ ಬಹಳ ಆನಂದವಾಗಿತ್ತು.

ನಾನು ಆನಂದಪುಲಕಿತನಾಗಿ ಮನೆಗೆ ಹೋದೆ. ಸಾಹೇಬರು ನನ್ನ ಕೈಕುಲುಕಿ ಶಹಭಾಶ್‌ಗಿರಿ ನೀಡಿದ್ದರು. ನನ್ನ ಆನಂದಕ್ಕೆ ಇದೂ ಒಂದು ಕಾರಣ. ಆದರೆ ನಿಜವಾದ ಕಾರಣ ನನ್ನ ಪ್ರಯೋಗಗಳಿಗೆ ದೊರೆತ ಮಾನ್ಯತೆ. ಸಾಹೇಬರು – ರಾಜಕೀಯ ಅಧಿಕಾರಿಗಳು – ಹೊಸ ಶಿಕ್ಷಣದ ಎಲ್ಲ ಸಂಗತಿಗಳನ್ನು ಏನು ಬಲ್ಲರು ಎಂದುಕೊಂಡೆ. ಆದರೆ ಅವರು ತಮ್ಮ ಮಕ್ಕಳನ್ನು ಯುರೋಪಿನ ಹೊಸ ಹೊಸ ಶಾಲೆಗಳಲ್ಲಿ ಸೇರಿಸಿದ್ದಾರೆ. ಹೊಸ ಶಿಕ್ಷಣದ ಬಗೆಗೆ ಅವರಿಗೆ ಪ್ರೀತಿಯಿದೆ ಎನ್ನುವುದು ಆಮೇಲೆ ನನಗೆ ತಿಳಿಯಿತು.

ರಾತ್ರಿ ನನ್ನ ಸಹಶಿಕ್ಷಕರು ಒಬ್ಬೊಬ್ಬರೇ ನನ್ನ ಬಳಿಗೆ ಬಂದರು. ಡೈರೆಕ್ಟರ ಸಾಹೇಬರು ನನಗೆ ಏನು ಹೇಳಿದರು ಎಂದು ಅವರು ಕೇಳಿದರು. ಅಷ್ಟರಲ್ಲಿ ನಮ್ಮ ಅಧಿಕಾರಿಗಳು ಹೇಳಿಕಳಿಸಿದ್ದರಿಂದ ನಾನು ಅವರ ಮನೆಗೆ ಹೋದೆ.



ಸಾಹೇಬರು ಅಂದು ಸಂತೋಷದಿಂದಿದ್ದರು. ಇದಕ್ಕೆ ಕಾರಣ ಡೈರೆಕ್ಟರ ಸಾಹೇಬರು ನಮ್ಮ ಶಾಲೆಯ ಕೆಲಸವನ್ನು ಮೆಚ್ಚಿಕೊಂಡುದು. ಹೋಗುತ್ತಲೇ ಅವರು ನನಗೆ ಕುಳಿತುಕೊಳ್ಳಲು ಹೇಳಿ ಆರಾಮ ಕುರ್ಚಿಯ ಮೇಲೆ ಕುಳಿತುಕೊಳ್ಳುತ್ತ ಹೇಳಿದರು:

'ಮಕ್ಕಳು ನಾಟಕದ ಮಾತುಗಳನ್ನು ಬಾಯಿಪಾಠ ಮಾಡಿದ್ದರೆ?'

'ತಮಗೆ ಹೇಗನಿಸುತ್ತದೆ?'

'ನನಗಂತೂ ಬಹಳ ಸಂತೋಷವಾಗಿದೆ. ಆದರೆ ಮಕ್ಕಳು ಇಷ್ಟೆಲ್ಲಾ ಹೇಗೆ ನೆನಪಿಟ್ಟುಕೊಂಡರೋ? ಅವರು ನಿಜವಾಗಿಯೂ ಬಹಳ ಸಲೀಸಾಗಿ ಮಾತನಾಡಿದರು.'

ನಾನು ಹೇಳಿದೆ. 'ತಮ್ಮ ಮಾತು ನಿಜ, ನಾನವರಿಗೆ ಕತೆಗಳನ್ನು ಹೇಳಿದ್ದೆ. ಅವುಗಳನ್ನು ಅವರು ಬಹಳ ಮೆಚ್ಚಿಕೊಂಡರು. ಕತೆಯ ಪಾತ್ರಗಳೊಂದಿಗೆ ಒಂದಾಗಿದ್ದರು. ತಾವು ಅರ್ಥಮಾಡಿಕೊಂಡ ಮಾತುಗಳನ್ನು ಅದೇ ರೀತಿಯಲ್ಲಿ ವ್ಯಕ್ತಪಡಿಸಿದರು'.

'ಆದರೆ ಅವರಿಗೆ ಅಭಿನಯವನ್ನು ಯಾರು ಕಲಿಸಿದರು?'

'ಯಾರೇಕೆ ಕಲಿಸಬೇಕು? ನಾವು ಪ್ರತಿವಾರ ನಾಟಕವಾಡುತ್ತೇವೆ. ನಾನು, ಮಕ್ಕಳು ಅದರಲ್ಲಿ ಭಾಗವಹಿಸುತ್ತೇವೆ. ನಾನು ನನಗೆ ಬಂದಂತೆ ಪಾತ್ರದ ಹಾವಭಾವ ಪ್ರದರ್ಶಿಸುತ್ತೇನೆ. ಮಕ್ಕಳು ತಮ್ಮದೇ ಆದ ರೀತಿಯಲ್ಲಿ ಪ್ರದರ್ಶಿಸುತ್ತಾರೆ.'

'ಆದರೆ ಇದು ಹೇಗೆ ಸಾಧ್ಯವಾಗುತ್ತದೆಂಬುದು ನನಗೆ ತಿಳಿಯಲಿಲ್ಲ.'

'ಮಕ್ಕಳು ಕಣ್ಣು ತೆರೆದೇ ಇರುತ್ತಾರೆ. ಅವರು ಸಿಂಪಿಗ, ಬಡಗಿ, ಕಮ್ಮಾರ, ಇಲಿ ಇವೆಲ್ಲವನ್ನೂ ಗಮನಿಸುತ್ತಾರೆ. ಅವರ ಮಾತು ಕೇಳಿರುತ್ತಾರೆ. ಕತೆಗಳಲ್ಲಿ ಅವರ ಬಗೆಗೆ ಬರುವ ವರ್ಣನೆಯನ್ನು ಕೇಳುತ್ತಾರೆ. ದೇವರು ಅವರಿಗೆ ಕಲ್ಪನಾಶಕ್ತಿಯನ್ನು ಕೊಟ್ಟಿದ್ದಾನೆ. ಆದ್ದರಿಂದ ಅವರು ಅನುಭವ, ಕಲ್ಪನೆಗಳನ್ನು ಬೆರೆಸಿ ಅಭಿನಯಿಸುತ್ತಾರೆ. ತಮಗೆ ತಿಳಿದಂತೆ ಮಾಡುತ್ತಾರೆ. ಅವರೇ ತಮ್ಮ ಪರೀಕ್ಷಕರಾಗುತ್ತಾರೆ. ಅನುಭವ ಮತ್ತು ಕಲ್ಪನೆ ರಂಗಸ್ಥಳದ ಮೇಲೆ ಹೇಗೆ ಪ್ರದರ್ಶಿಸಬೇಕು ಎಂಬುದನ್ನೂ ಅವರೇ ನೋಡಿಕೊಳ್ಳುತ್ತಾರೆ.'

ಸಾಹೇಬರು 'ಇವು ಬಹಳ ಗಂಭೀರವಾದ ಕಠಿಣ ಸಂಗತಿಗಳು' ಎಂದರು.

'ಹೌದು. ಆದರೆ ಮಕ್ಕಳಿಗೆ ಈ ಮಾತುಗಳ ಬಗ್ಗೆ ಲಕ್ಷ್ಯವಿರುವುದಿಲ್ಲ. ನಾನು ಅವರ ಕಾರ್ಯಗಳನ್ನು ಪೃಥಃಕ್ಕರಿಸಿ ಈ ಮಾತುಗಳಲ್ಲಿ ತಮಗೆ ತಿಳಿಸುತ್ತಿರುವೆ.'

'ಐ ಸೀ, ನೀವು ನಿಜವಾಗಿಯೂ ಇಂದು ಅದ್ಭುತವನ್ನೇ ಮಾಡಿದಿರಿ. ಡೈರೆಕ್ಟರ ಸಾಹೇಬರಂತೂ ಬಹಳ ಸಂತೋಷ ಪಟ್ಟರು.'

'ಅವರು ಸಂತೋಷಪಡದಿದ್ದರೂ ನಮ್ಮ ನಾಟಕ ಮುಂದುವರಿಯುತ್ತಿತ್ತು.'

'ಆದರೆ ನಿಮ್ಮ ಈ ಪ್ರಯೋಗಗಳ ಬಗೆಗೆ ನೀವೆಂದೂ ನನಗೆ ಹೇಳಿಲ್ಲ. ಬಹುಶಃ ಮುಖ್ಯಾಧ್ಯಾಪಕರಿಗೂ ಉಳಿದ ಶಿಕ್ಷಕರಿಗೂ ಗೊತ್ತಿಲ್ಲ ಎಂದು ಕಾಣುತ್ತದೆ.'

'ಹೌದು, ಈ ವಿಷಯವನ್ನು ಅವರಿಗೆ ಹೇಳಿಲ್ಲ. ಅವರ ವಿಚಾರದಲ್ಲಿ ಇವೆಲ್ಲ ವ್ಯರ್ಥ. ಅವರು ಆರು ತಿಂಗಳು ಪರೀಕ್ಷೆಗಾಗಿ ಅಭ್ಯಾಸ ಮಾಡಿಸುತ್ತಿದ್ದಾರೆ...'

'ಆದರೂ ಈ ಸಂಗತಿಗಳು ಅವರಿಗೆ ಹೇಗೆ ತಿಳಿಯಲಿಲ್ಲ...?

'ಪ್ರತಿವಾರ ನಾವು ಹೊರಗೆ ತಿರುಗಾಡಲು ಹೋಗುತ್ತೇವೆ. ಅಲ್ಲಿಯೇ ಆಟದ ರೂಪದಲ್ಲಿ ಇವನ್ನು ಮಾಡುತ್ತೇವೆ. ನಾನು ಒಂದು ದುಪ್ಪಟಿ ಒಯ್ದಿರುತ್ತೇನೆ. ಅದನ್ನೇ ಪರದೆ ಮಾಡುತ್ತೇವೆ. ಇಬ್ಬರು ಬಾಲಕರು ಅದನ್ನು ಹಿಡಿದುಕೊಂಡು ನಿಲ್ಲುತ್ತಾರೆ. ಈ ಕಡೆಗೆ ನೋಡುತ್ತಾ, ಆ ಕಡೆಗೆ ನಾಟಕ ಆಡುವರು.'

'ನಿಜವಾಗಿಯೂ?'

'ಖಂಡಿತವಾಗಿಯೂ.'

ಸಾಹೇಬರು ಹೇಳಿದರು: 'ಒಳ್ಳೆಯದು, ಶಾಲೆಗಳ ಎಲ್ಲ ತರಗತಿಗಳಲ್ಲೂ ನಾಟಕದ ಕಾರ್ಯಕ್ರಮ ಇಡಲು ಡೈರೆಕ್ಟರ್ ಒಪ್ಪಿದ್ದಾರೆ. ನಿಜವಾಗಿಯೂ ಈ ದಿನ ನಾಟಕಗಳು ಬಹಳ ಚೆನ್ನಾಗಿದ್ದುವು. ಕಂಠಪಾಠ ಮುಂತಾದವುಗಳ ತಂಟೆಯೇ ಬೇಡ.'

'ನನ್ನದೂ ಇದೇ ಅಭಿಪ್ರಾಯ. ತಮಗೆ ಸರಿ ಕಂಡಂತೆ ಮಾಡಬಹುದು' ಎಂದೆ.

'ಆಯಿತು, ನಾನೂ ಕಂಠಪಾಠವನ್ನೇ ಮಾಡುತ್ತಿದ್ದೆ. ಆ ದಿನಗಳು ಇನ್ನೂ ಚೆನ್ನಾಗಿ ನೆನಪಿದೆ. ನನ್ನ ಜ್ಞಾಪಕ ಶಕ್ತಿ ಚೆನ್ನಾಗಿದ್ದ ಕಾರಣ ಅಷ್ಟು ತೊಂದರೆ ಆಗಲಿಲ್ಲವೇನೋ. ಪಾಪ, ಬೇರೆ ಹುಡುಗರು ಬಾಯಿಪಾಠ ಮಾಡಿದ್ದೇ ಮಾಡಿದ್ದು. ಇನ್ನು ಬಾಯಿಪಾಠ ಬೇಡ.' ಎಂದು ಸಾಹೇಬರು ತೀರ್ಮಾನಿಸಿದರು.

ನಾನು ಮನಸ್ಸಿನಲ್ಲಿಯೇ ಮುಗುಳುನಗುತ್ತಿದ್ದೆ. ಅಂತೂ ಇಂದು ಡೈರೆಕ್ಟರ ಸಾಹೇಬರು ಬಂದುದು ಬಹಳ ಒಳ್ಳೆಯದಾಯಿತು. ಒಂದು ದೊಡ್ಡ ಭಾರವಿಳಿದಂತಾಯಿತು. ನನ್ನ ಪ್ರಯೋಗಗಳಲ್ಲಿ ಈ ದಿನದ ಅನುಭವವೂ ಮಹತ್ವದ್ದಾಗಿದೆ. ನಾನು ಮನೆಗೆ ಹೋಗಿ ಮಲಗಿಕೊಂಡೆ.

## 2

ಆರು ತಿಂಗಳ ಪರೀಕ್ಷೆ ಸಮೀಪಿಸಿತು. ಬೇರೆ ತರಗತಿಗಳಲ್ಲಿ ಮಾಡಿ ಮುಗಿಸಿದ ಪಾಠಗಳನ್ನು ಮತ್ತೆ ಮಾಡಲಾಗುತ್ತಿತ್ತು. ಗಣಿತ ಮತ್ತು ಉಳಿದ ಪಾಠಗಳು, ಪ್ರಶ್ನೋತ್ತರಗಳನ್ನು ಕಂಠಪಾಠಮಾಡುವುದು ನಡೆದಿತ್ತು. ನನ್ನ ಗಾಡಿ ಇನ್ನೂ ಸಾಕಷ್ಟು ಹಿಂದೆ ಇತ್ತು. ಪರೀಕ್ಷೆಯ ದೃಷ್ಟಿಯಿಂದ ವಿಚಾರ ಮಾಡಿದರೆ ನಾನು ಬಹಳ ಹಿಂದಿದ್ದೆ. ಆದರೂ ನನ್ನ ತರಗತಿಯ ಮಕ್ಕಳಿಗೆ ಪರೀಕ್ಷೆ ಮಾಡಲೇಬೇಕಾಗಿತ್ತು.

ಪುನಃ ಪಾಠಮಾಡುವ ಆವಶ್ಯಕತೆ ನನಗೆ ಇರಲಿಲ್ಲ. ಅಷ್ಟು ಸಮಯ ನನಗೆ ಉಳಿಯಲಿತ್ತು. ವರ್ಷವಿಡೀ ಪಾಠ ಮುಂದುವರಿಯಲಿತ್ತು. ನನ್ನ ತರಗತಿಯಲ್ಲಿ ಆದ ಅಭ್ಯಾಸವನ್ನು ಮಕ್ಕಳು ತಾವೇ ಮತ್ತೆ ಓದಿಕೊಳ್ಳುತ್ತಿದ್ದರು. ನಾನು ಅಂತಹ ಯೋಜನೆಗಳನ್ನು ಸಿದ್ಧಪಡಿಸಿದ್ದೆ. ಉದಾಹರಣೆಗಾಗಿ ಅಂತಾಕ್ಷರಿ ಮುಂತಾದ ಆಟಗಳಲ್ಲಿ ಮಕ್ಕಳು ಕವಿತೆಗಳನ್ನು ಮೇಲಿಂದ ಮೇಲೆ ಹೇಳಿಕೊಳ್ಳುತ್ತಿದ್ದರು.



ಆದರೆ ಇದುವರೆಗೆ ನಾನು ಭೂಗೋಳ, ಪದಗಳ ಅರ್ಥ ಮತ್ತು ವ್ಯಾಕರಣವನ್ನು ಮುಟ್ಟಿರಲಿಲ್ಲ. ವ್ಯಾಕರಣವನ್ನು ಒಂದು ಕಠಿಣ ವಿಷಯ ಎಂದು ತಿಳಿಯಲಾಗುತ್ತದೆ. ಸಾಮಾನ್ಯವಾಗಿ ವಿದ್ಯಾರ್ಥಿಗಳಿಗೆ ಇದರಲ್ಲಿ ಆಸಕ್ತಿ ಇರುವುದೇ ಇಲ್ಲ. ಅವರ ಜೀವನಕ್ಕೆ ಉಪಯೋಗವಾಗುವ ಜ್ಞಾನ ಮತ್ತು ಆನಂದವನ್ನು ಒದಗಿದಸುವ ಯಾವ ರಸಿಕ ತತ್ವವೂ ಅದರಲ್ಲಿಲ್ಲ. ವಿದ್ಯಾರ್ಥಿಗಳು ಓದಿ ಆನಂದಪಡುವಂತಹ ಯಾವ ಪ್ರಸಂಗವೂ ಅದರಲ್ಲಿಲ್ಲ. ಪ್ರಾಥಮಿಕ ಶಾಲೆಯಿಂದ ಈ ವಿಷಯವನ್ನು ತೆಗೆದೇ ಹಾಕಬೇಕು. ಕಲಿಯಲು ಕಠಿಣವಿದ್ದ, ಬೇಜಾರು ತರುವ ವಿಷಯಗಳನ್ನು ಏಕೆ ಕಲಿಸಬೇಕು? ಜ್ಞಾನ ನೀಡುವ ಬೇರೆ ಅನೇಕ ವಿಷಯಗಳಿರುವಾಗ ಇಂಥ ಶುಷ್ಕವಾದ ವಿಷಯವನ್ನು ಕಲಿಸುವುದರ ಅಗತ್ಯವಾದರೂ ಏನಿದೆ?

ಆದರೆ ನನಗೆ ಪ್ರಯೋಗ ಅನಿವಾರ್ಯವಾದರೂ ಕರಾರಿನಂತೆ ನಾನು ಪರೀಕ್ಷೆಯ ಒಳಗಾಗಿ ಈ ವಿಷಯವನ್ನು ಮಕ್ಕಳಿಗೆ ಚೆನ್ನಾಗಿ ಕಲಿಸಲೇಬೇಕಾಗಿತ್ತು. ನನ್ನ ಪ್ರಯೋಗದ ಸಿದ್ಧಾಂತಕ್ಕನುಗುಣವಾಗಿ ಈ ವಿಷಯವನ್ನು ಹೇರುವುದು ಸರಿಯಲ್ಲ. ಅದರ ಬದಲಾಗಿ ನಾಲ್ಕನೆಯ ತರಗತಿಯ ಮಕ್ಕಳಿಗೆ ಇದನ್ನು ಎಷ್ಟು ಚೆನ್ನಾಗಿ ಕಲಿಸಬಹುದು ಎಂಬುದನ್ನು ನಾನು ತೋರಿಸಬೇಕು.

ವ್ಯಾಕರಣದ ಪಠ್ಯಕ್ರಮವನ್ನು ನೋಡಿದೆ. ನಾನು ಬೇರೆ ಕ್ರಮವನ್ನೇ ಇದಕ್ಕಾಗಿ ರೂಪಿಸಿಕೊಳ್ಳಬೇಕೆಂದುಕೊಂಡೆ. ನಾಮಪದ, ಸರ್ವನಾಮ, ಕ್ರಿಯಾಪದ ಇವುಗಳ ವ್ಯಾಖ್ಯೆಗಳನ್ನು ಶೀಘ್ರವಾಗಿ ಕಂಠಪಾಠ ಮಾಡಿಸಬಹುದು. ಆದರೆ ಅದು ಸಹಜವಾಗಿ ಅರ್ಥವಾಗುವುದಿಲ್ಲ. ಚಿಕ್ಕವನಿದ್ದಾಗ ನಾನಾದರೂ ಇವುಗಳನ್ನು ನೆನಪಿನಲ್ಲಿಟ್ಟುಕೊಳ್ಳುತ್ತಿದ್ದೆ. ಆದರೆ ತಿಳಿಯುತ್ತಿರಲಿಲ್ಲ. ಆದರೂ ನಾನು ಚೆನ್ನಾಗಿ ತಿಳಿದುಕೊಂಡಿದ್ದೇನೆ ಎಂಬ ಭ್ರಮೆ ನನ್ನ ಶಿಕ್ಷಕರಿಗಾಗುತ್ತಿತ್ತು. ಈ ಪದ್ಧತಿಗೆ ದೂರದಿಂದಲೇ ಕೈಮುಗಿಯೋಣವೆಂದುಕೊಂಡೆ. ವ್ಯಾಕರಣವನ್ನು ಹೇಗೆ ಕಲಿಸಬೇಕೆಂಬುದೇ ನನ್ನ ಈಗಿನ ಸಮಸ್ಯೆ. ಇದರ ಬಗ್ಗೆ ಆಲೋಚಿಸಿ ಒಂದು ಯೋಜನೆ ತಯಾರಿಸಿದೆ. ಆ ರೀತಿ ಕಾರ್ಯ ಮಾಡಲಾರಂಭಿಸಿದೆ. ಇದು ವಿದ್ಯಾರ್ಥಿಗಳಿಗೆ ನಿಜವಾಗಿಯೂ ಹಿಡಿಸಿತು. ಅವರಿಗೆ ಅದೊಂದು ಸುಂದರ ಆಟವಾಯಿತು. ಎರಡೇ ತಿಂಗಳುಗಳಲ್ಲಿ ಅವರು ನಾಮಪದ, ಸರ್ವನಾಮ, ವಿಶೇಷಣ, ಕ್ರಿಯಾಪದ ಮತ್ತು ಅವ್ಯಯಗಳನ್ನು ಗುರುತು ಹಿಡಿದು ಅವುಗಳನ್ನು ವಾಕ್ಯಗಳಲ್ಲಿ ಎತ್ತಿ ತೋರಿಸುವುದನ್ನು ಕಲಿತರು. ಏಕವಚನ, ಬಹುವಚನ, ಪುಲ್ಲಿಂಗ ಮತ್ತು ಸ್ತ್ರೀಲಿಂಗ ಶಬ್ದಗಳ ಅಂತರವನ್ನೂ ಚೆನ್ನಾಗಿ ಅರಿತುಕೊಂಡರು. ಕರ್ತೃ, ಕರ್ಮಗಳನ್ನು ಗುರುತುಹಿಡಿಯುವ ಯೋಜನೆಯನ್ನು ರೂಪಿಸುತ್ತಿದ್ದಂತೆಯೇ ಒಂದು ದಿನ ನಮ್ಮ ತರಗತಿಗೆ ವ್ಯಾಕರಣದ ಆಟ ನಡೆದಾಗ ಡೆಪ್ಯುಟಿ ಡೈರೆಕ್ಟರ ಸಾಹೇಬರು ಬಂದರು. ಅವರಿಗೆ ನನ್ನ ಕೆಲಸ ನೋಡಿ ಆಶ್ಚರ್ಯವಾಯಿತು. "ಮಕ್ಕಳಿಗೆ ಇಷ್ಟೇಟು ಯಾಕೆ ಕಲಿಸುತ್ತೀರಿ ? ಆರು ತಿಂಗಳ ಪರೀಕ್ಷೆ ಸಮೀಪಿಸಿದೆ. ಬೇಗನೆ ಅಭ್ಯಾಸ ಮಾಡಿಸಿ.

ಬೇರೆಯವರೆದುರಿಗೆ ತಲೆ ತಗ್ಗಿಸುವಂತಾಗಬಾರದು. ನಿಮ್ಮ ಪ್ರಯೋಗ ಸಫಲವಾಗಬೇಕು" ಎಂದರು.

ನಾನು ನಗುತ್ತ ಹೇಳಿದೆ: "ಅದರ ಬಗ್ಗೆ ನನಗೆ ಸಂಪೂರ್ಣ ಎಚ್ಚರವಿದೆ. ಇವು ವ್ಯಾಕರಣದ ಆಟಗಳು. ತಾವು ಮಕ್ಕಳಿಗೆ ವ್ಯಾಕರಣ ಪರೀಕ್ಷೆ ತೆಗೆದುಕೊಳ್ಳಿ."

ಸಾಹೇಬರು ಮಕ್ಕಳನ್ನು ನಾಲ್ಕಾರು ಪ್ರಶ್ನೆ ಕೇಳಿದರು. ಅವರಿಗೆ ಅಚ್ಚರಿಯೆನಿಸಿತು. "ನಿಜವಾಗಿಯೂ ಒಳ್ಳೆ ಕೆಲಸ ಮಾಡಿದ್ದೀರಿ. ಈ ಇಡೀ ಯೋಜನೆ ಬಗ್ಗೆ ನನಗೆ ತಿಳಿಸಿ ಹೇಳಿರಿ. ಇಷ್ಟು ಸುಂದರವಾಗಿ ನೀವು ವಿದ್ಯಾರ್ಥಿಗಳಿಗೆ ವ್ಯಾಕರಣ ಕಲಿಸುವುದಾದರೆ ಬೇರೆ ತರಗತಿಗಳಲ್ಲೂ ಇದೇ ರೀತಿ ಏಕೆ ಕಲಿಸಬಾರದು ? ನಾಳೆ ರಜೆ ಇದೆ. ನಮ್ಮ ಮನೆಗೆ ಬಂದು ನೀವು ಹೇಗೆ ಯೋಜನೆ ಮಾಡಿದ್ದೀರಿ ಎಂಬುದನ್ನು ವಿವರಿಸಿ" ಎಂದು ಹೇಳಿ ಹೊರಟು ಹೋದರು.

* * *

ಮರುದಿನ ವ್ಯಾಕರಣದ ಎಲ್ಲ ಸಾಮಗ್ರಿಯನ್ನು ತೆಗೆದುಕೊಂಡು ಸಾಹೇಬರ ಮನೆಗೆ ಹೋದೆ ಮತ್ತು ಅವರಿಗೆ ನನ್ನ ಯೋಜನೆಯನ್ನು ಪ್ರಾರಂಭದಿಂದ ವಿವರಿಸಿದೆ.

"ಸಾಹೇಬರೇ, ನೋಡ್ರಿ ಇದು ನನ್ನ ಮೊದಲನೆಯ ಸಾಧನೆ. ಈ ರಟ್ಟಿನ ತುಂಡುಗಳ ಮೇಲೆ ಪುಲ್ಲಿಂಗ ಅಥವಾ ಸ್ತ್ರೀಲಿಂಗ ಎಂದು ಬರೆದಿದ್ದೇನೆ. ಅವುಗಳ ಮೇಲ್ಭಾಗದಲ್ಲಿ ಅವಕ್ಕನುಗುಣವಾದ ಶಬ್ದಗಳನ್ನು ಬರೆದು ವಿದ್ಯಾರ್ಥಿಗಳಿಗೆ ಓದಲು ಕೊಡುತ್ತೇನೆ. ಅವೆಲ್ಲವುಗಳನ್ನು ಅವರು ಓದುತ್ತಾರೆ. ಈ ರೀತಿಯಾಗಿ ಅವರಿಗೆ ಲಿಂಗವಾಚಕ ಶಬ್ದಗಳ ಪರಿಚಯವಾಗುತ್ತದೆ. ರಟ್ಟಿನ ತುಂಡುಗಳ ಮೇಲೆ ಸ್ತ್ರೀಲಿಂಗ ಹಾಗೂ ಪುಲ್ಲಿಂಗ ಎಂದು ಬರೆದಿರುವುದರಿಂದ ಶಬ್ದಗಳ ಪರಿಚಯ ಅವರಿಗೆ ಸ್ವಲ್ಪಮಟ್ಟಿಗೆ ಆಗುತ್ತದೆ.

"ಇಷ್ಟು ಮಾಡಿದ ಮೇಲೆ ಒಂದು ದಿನ ನಾನು ಅವರನ್ನು ಕೇಳಿದೆ. 'ಎತ್ತಿನ ಸ್ತ್ರೀ ಯಾರು ?' ಅವರು ನುಡಿದರು, 'ಆಕಳು'. 'ಸಿಂಹದ ಸ್ತ್ರೀ?' 'ಸಿಂಹಿಣಿ.' 'ಹುಡುಗರ ಸ್ತ್ರೀ?' 'ಹುಡುಗಿ.' 'ಮುದುಕನ ಸ್ತ್ರೀ?' 'ಮುದುಕಿ.' ಈ ರೀತಿ ನನ್ನ ಯೋಜನೆ ತುಂಬಾ ಯಶಸ್ವಿಯಾಯಿತು. ಮೊದಲ ಪರಿಚಯದಿಂದ ಅವರಲ್ಲಿ ವಿಚಾರಶಕ್ತಿ ಜಾಗ್ರತವಾಗಿತ್ತು. ಈಗ ಶಬ್ದಗಳ ಪರಿಚಯದಿಂದ ಅವರಲ್ಲಿ ಜ್ಞಾನ ಮೂಡಿತು.

ನಾನು ಹೇಳಿದೆ: 'ಬನ್ನಿ, ನಾವೀಗ ಒಂದು ಆಟ ಆಡೋಣ. ನಾನು ಪುಲ್ಲಿಂಗ ಶಬ್ದಗಳನ್ನು ಬರೆಯುತ್ತೇನೆ. ನೀವು ಅವುಗಳ ಸ್ತ್ರೀಲಿಂಗಗಳನ್ನು ಬರೆಯಿರಿ'. ನಾನು ಬರೆಯಲು ಪ್ರಾರಂಭಿಸಿದೆ. ಅವರೂ ಅತ್ಯಂತ ಸಂತೋಷದಿಂದ ಸ್ತ್ರೀಲಿಂಗ ಶಬ್ದಗಳನ್ನು ಬರೆಯಲಾರಂಭಿಸಿದರು. ಪರೀಕ್ಷೆಮಾಡಿದಾಗ ಅತ್ಯಂತ ಕಡಿಮೆ ತಪ್ಪುಗಳು ಕಂಡುಬಂದವು. ಕೆಲವೇ ವಿದ್ಯಾರ್ಥಿಗಳು ತಪ್ಪು ಮಾಡಿದ್ದರು.



ನಾನು ಹೇಳಿದೆ, 'ಈಗ ನಾನು ಇನ್ನೊಂದು ಆಟ ಕಲಿಸುವೆ. ಇಲ್ಲಿ ಎರಡು ಪೆಟ್ಟಿಗೆಗಳಿವೆ. ಒಂದರಲ್ಲಿ ಪುಲ್ಲಿಂಗ ಶಬ್ದಗಳಿವೆ. ಇನ್ನೊಂದರಲ್ಲಿ ಸ್ತ್ರೀಲಿಂಗ ಶಬ್ದಗಳಿವೆ. ನೀವು ಪುಲ್ಲಿಂಗದ ಸ್ತ್ರೀಲಿಂಗ ಹಾಗೂ ಸ್ತ್ರೀಲಿಂಗ ಶಬ್ದದ ಪುಲ್ಲಿಂಗ ಶಬ್ದಗಳನ್ನು ಹುಡುಕಿ ತೆಗೆಯಿರಿ'. ಮಕ್ಕಳು ಈ ಆಟವನ್ನು ಅನೇಕ ಗಂಟೆಗಳ ಕಾಲ ಆಡಿದರು."

ಸಾಹೇಬರೆಂದರು: "ಆದರೆ ಪೆಟ್ಟಿಗೆ ಒಂದೇ ಇದೆಯಲ್ಲ, ಬೇರೆ ಬೇರೆ ಆಟಗಳನ್ನು ಹೇಗೆ ಆಡಿದಿರಿ ?

ನಾನು ಹೇಳಿದೆ: "ಇದಕ್ಕಾಗಿ ನಾನೊಂದು ಉಪಾಯವನ್ನು ಯೋಚಿಸಬೇಕಾಯಿತು. ತರಗತಿಯಲ್ಲಿ ಎರಡು ಕಡೆಗೆ ಹತ್ತು ಹತ್ತು ವರ್ತುಳಗಳನ್ನು ಬರೆದಿದ್ದೆ. ಒಂದು ಸಾಲಿನ ಹತ್ತು ವರ್ತುಳಗಳಲ್ಲಿ ಪುಲ್ಲಿಂಗ ಹಾಗೂ ಇನ್ನೊಂದು ಕಡೆಗೆ ಹತ್ತು ವರ್ತುಳಗಳಲ್ಲಿ ಸ್ತ್ರೀಲಿಂಗ ಶಬ್ದಗಳನ್ನು ಇಡಲಾಗಿತ್ತು. ಒಂದೊಂದು ವರ್ತುಳದ ಬಳಿ ಒಬ್ಬೊಬ್ಬ ವಿದ್ಯಾರ್ಥಿ ಕುಳಿತಿದ್ದ. ಅವನು ಒಂದು ವರ್ತುಳದಿಂದ ಸ್ತ್ರೀಲಿಂಗ ಶಬ್ದವನ್ನು ತೆಗೆದುಕೊಂಡು ಅದರ ಪುಲ್ಲಿಂಗ ಶಬ್ದವನ್ನು ಹುಡುಕಲು ಹೊರಡುತ್ತಿದ್ದ. ಅದು ಎಲ್ಲಿ ಸಿಗುತ್ತಿತ್ತೊ ಅಲ್ಲಿಂದ ತೆಗೆದುಕೊಂಡು ಪುಲ್ಲಿಂಗ ಸ್ತ್ರೀಲಿಂಗಗಳನ್ನು ಹೊಂದಿಸಿ ಇಡುತ್ತಿದ್ದ. ಈ ರೀತಿ ಪ್ರತಿಯೊಂದು ವರ್ತುಳದಲ್ಲಿ ಪುಲ್ಲಿಂಗ–ಸ್ತ್ರೀಲಿಂಗ ಶಬ್ದಗಳ ಹೊಂದಾಣಿಕೆ ನಡೆಯಿತು. ಎಲ್ಲಾ ಶಬ್ದಗಳು ಮುಗಿದ ಮೇಲೆ ಆಟವನ್ನು ಪುನಃ ಪ್ರಾರಂಭಿಸಲಾಯಿತು. ಆಟ ಆಡುವವರು ಇಬ್ಬರೇ ಬಾಲಕರಿದ್ದಾಗ ಅವರು ಒಂದೊಂದು ಪೆಟ್ಟಿಗೆ ತೆಗೆದುಕೊಂಡು ಸ್ತ್ರೀಲಿಂಗ ಪುಲ್ಲಿಂಗ ಶಬ್ದಗಳನ್ನು ಕಂಡುಹಿಡಿಯಬಹುದು."

ಸಾಹೇಬರೆಂದರು: "ಇದು ನಿಜವಾಗಿಯೂ, ಉತ್ತಮ ಉಪಾಯ. ಆದರೆ ನಪುಂಸಕ ಲಿಂಗದ ಶಬ್ದಗಳ ಬಗೆಗೆ ನೀವೇನು ಮಾಡಿದಿರಿ ?"

ಸ್ತ್ರೀಲಿಂಗ ಮತ್ತು ಪುಲ್ಲಿಂಗ ಶಬ್ದಗಳ ಪರಿಚಯ ಚೆನ್ನಾಗಿ ಆದಮೇಲೆ ಒಂದು ದಿನ ನಾನು ಹಲಗೆಯ ಮೇಲೆ ಕೆಲವು ಶಬ್ದಗಳನ್ನು ಬರೆದೆ. ಹೋಲ್ಡರ್, ಟೇಬಲ್, ಹಲಗೆ, ಬಟ್ಟೆ, ಮಸಿಕುಡಿಕೆ ಇತ್ಯಾದಿ. ಮಕ್ಕಳು ಅವನ್ನು ಓದಿ ಇವುಗಳ ಲಿಂಗ ಯಾವುದಾಗಿರಬಹುದು ಎಂದು ಯೋಚಿಸತೊಡಗಿದರು. ತಮಗೆ ಇದ್ದ ತಿಳುವಳಿಕೆಯಿಂದ ಅವರು ಅವುಗಳ ಲಿಂಗನಿರ್ಣಯ ಮಾಡಲು ಅಸಮರ್ಥರಾಗಿದ್ದರು. ಅನಂತರ ನಾನು ಇವು ನಪುಂಸಕ ಲಿಂಗ ಶಬ್ದಗಳು ಎಂದು ತಿಳಿಸಿ ಅವುಗಳಿಗೆ ಆ ರೀತಿ ತಲೆ ಬರಹವನ್ನು ಬರೆದೆ.

ಒಬ್ಬ ಬಾಲಕನು ಕೇಳಿದ: 'ನಪುಂಸಕವೆಂದರೇನು ?'

ನಾನು ಹೇಳಿದೆ: 'ಅವು ಪುರಷನೂ ಅಲ್ಲ, ಸ್ತ್ರೀಯೂ ಅಲ್ಲ.' ಮಕ್ಕಳಿಗೆ ಸ್ವಲ್ಪ ತಿಳಿಯುತ್ತಿದ್ದಂತೆ ಕಾಣಿಸಿತು. ನಾನು ಕೂಡಲೇ ಹೇಳಿದೆ–ಮೂರು ಖಾನೆ ಮಾಡಿರಿ. ಪುಲ್ಲಿಂಗ, ಸ್ತ್ರೀಲಿಂಗ ಮತ್ತು ಇನ್ನೊಂದು ನಪುಂಸಕ ಲಿಂಗ. ಆಮೇಲೆ ಎಲ್ಲ ಶಬ್ದಗಳನ್ನು ಬರೆಯಿರಿ.

ನಾನು ಅರವತ್ತು ಶಬ್ದಗಳನ್ನು ಬರೆಸಿದೆ. ಅನೇಕ ವಿದ್ಯಾರ್ಥಿಗಳು ಅವುಗಳನ್ನು ಸರಿಯಾದ ಖಾನೆಗಳಲ್ಲಿ ಬರೆದುದ್ದು ನೋಡಿ ನನಗೇ ಆಶ್ಚರ್ಯವಾಯಿತು. ವ್ಯಾಖ್ಯೆ ಮುಂತಾದ ಗೊಂದಲದಲ್ಲಿ ಬೀಳದೆ ಈ ರೀತಿಯಾಗಿ ವ್ಯಾಕರಣದ ಪರಿಚಯ ಮಾಡಿಕೊಡುವುದೇ ಒಳ್ಳೆಯದು ಎಂದು ನನಗೆ ಅನಿಸಿತು. ಆಟಗಳ ಮೂಲಕ ಈ ಪರಿಚಯ ಮಾಡಿಸಬಹುದು. ಆನಂತರ ನಿಧಾನವಾಗಿ ಅವುಗಳ ಶಾಸ್ತ್ರೀಯ ವ್ಯಾಖ್ಯೆಯನ್ನು ಹೇಳಿಕೊಡಬಹುದು."

"ಆದರೆ ಎಂಥವನ, ಎಂಥವಳ ಎಂದು ಪ್ರಶ್ನೆಕೇಳಿ ಇವುಗಳನ್ನು ತಿಳಿಸಬಹುದಿತ್ತಲ್ಲ" ಎಂದರು ಸಾಹೇಬರು.

"ಹಾಗೆ ಮಾಡಿದರೂ ಕೂಡ ಬಾಯಿಪಾಠ ಮಾಡಿಸಿದಂತೆಯೇ ಆಗುತ್ತಿತ್ತು. ಅರಿತುಕೊಳ್ಳದೆ, ಮಕ್ಕಳು ಅವುಗಳನ್ನು ಬಾಯಿಪಾಠ ಮಾಡಿದಂತಾಗುತ್ತದೆ. ಅವರ ಮನೋವಿನೋದಕ್ಕಾಗಿ ಈಗ ಎಂಥವನ, ಎಂಥವಳ ಎಂಬುದನ್ನು ತಿಳಿಸಿ ಹೇಳಬಹುದು.

ಸಾಹೇಬರು: "ಸರಿ ಮುಂದೆ ಹೇಳಿ."

"ಇದಾದ ನಂತರ ಏಕವಚನ, ಬಹುವಚನಗಳನ್ನು ಅದೇ ರೀತಿ ಕಲಿಸಿದೆ."

"ಹೇಗೆ ?"

"ಏಕವಚನುಳ್ಳವನು ಬಹುವಚನವನ್ನು ಹುಡುಕಿ ತಂದು ಹೊಂದಿಸಿ ಇಡುತ್ತಿದ್ದ."

ಸಾಹೇಬರು ಕೇಳಿದರು: "ಇದೀಗ ಸರಿಯಾಯಿತು. ನಾಮಪದ, ಕ್ರಿಯಾಪದಗಳನ್ನು ಹೇಗೆ ಕಲಿಸಿದಿರಿ ?


"ನಾನು ಮೊದಲು ಕ್ರಿಯಾಪದಗಳನ್ನು ಬರೆದೆ. ವಿದ್ಯಾರ್ಥಿಗಳಿಗೆ ಓದಲಂತೂ ಬರುತ್ತಿತ್ತು. ನಾನು ಹಲಗೆಯ ಮೇಲೆ ಬರೆಯುತ್ತ ಹೋದಂತೆ ಆ ರೀತಿಯ ಕ್ರಿಯೆಗಳನ್ನು ಮಾಡಬೇಕು ಎಂದು ತಿಳಿಸಿದೆ. ನಾನು ಕ್ರಿಯೆಗಳನ್ನು ಬರೆದು ಹಾಗೆ ಮಾಡಲು ಹೇಳಿದೆ. ಒಬ್ಬೊಬ್ಬರಿಗೆ ಒಂದೊಂದು ಕ್ರಿಯೆ ಮಾಡಲು ಹೇಳಿದೆ."

"ನಾನು ಹಲಗೆಯ ಮೇಲೆ ಬರೆದೆ: ಏಳು, ಕೂಡು, ಓಡು, ಮಲಗು, ಆಡು, ಕುಣಿ, ಓದು, ಮಾತಾಡು, ಸರಿದಾಡು, ಬೀಳು, ಜಿಗಿ, ಅಂಜು, ಕುಪ್ಪಳಿಸು, ನಗು, ಹಾಡು, ಇತ್ಯಾದಿ."

"ಈ ಎಲ್ಲ ಕ್ರಿಯೆಗಳನ್ನು ಮಾಡುವುದರಲ್ಲಿ ವಿದ್ಯಾರ್ಥಿಗಳು ಬಹಳ ಸಂತೋಷಪಟ್ಟರು. ಇನ್ನೂ ಅನೇಕ ಶಬ್ದಗಳನ್ನು ಬರೆಯಲು ಅವರು ಕೇಳಿಕೊಂಡರು. ನಾನು ಬರೆಯುತ್ತ ಹೋದಂತೆ ಅವರು ಆ ಬಗೆಯ ಕ್ರಿಯೆಗಳನ್ನು ಮಾಡಿದರು.

"ಮರುದಿನ ನಾನು ಕೆಲವು ಕ್ರಿಯಾಪದಗಳನ್ನು ಒಂದು ಕಾರ್ಡಿನ ಮೇಲೆ ಬರೆದೆ–ಏಳು, ಓಡು, ಕುಳಿತುಕೊ ಮುಂತಾದವು. ಎಲ್ಲರೂ ಓದಿದರು. ಮೂರನೆಯ ದಿನ ನಾನು ಒಂದು ಪೆಟ್ಟಿಗೆಯನ್ನು ತಂದು ಅದರ ಮೇಲೆ ಕ್ರಿಯಾಪದದ ಪೆಟ್ಟಿಗೆ ಎಂದು ಬರೆದೆ. ವಿದ್ಯಾರ್ಥಿಗಳು ಪೆಟ್ಟಿಗೆಯನ್ನು ತೆರೆದು ಅದರಲ್ಲಿಯ ಕ್ರಿಯಾಪದಗಳನ್ನು ಎತ್ತಿಕೊಂಡರು.





ನಂತರ ನಾನು ಕೆಲವು ಹುಡುಗರಿಗೆ ಓಡಲು,
ಕುಣಿಯಲು, ಬರೆಯಲು, ಓದಲು ಆದೇಶ ನೀಡಿದೆ.

ಅವುಗಳಲ್ಲಿ ಬರೆದಂತಹ ಕ್ರಿಯೆಗಳನ್ನು ಮಾಡುತ್ತ ಹೋದರು. ಆಗ ನಾನು, ಅವರಿಗೆ ಕೆಲವು ಕ್ರಿಯಾಪದಗಳನ್ನು ಬರೆದುಕೊಂಡು ಬರಲು ಹೇಳಿದೆ. ಅವರು ಅದೇ ರೀತಿ ಬರೆದುಕೊಂಡು ಬಂದರು."

ಸಾಹೇಬರು ಕೇಳಿದರು: "ಅನಂತರ ನೀವೇನು ಮಾಡಿದಿರಿ ?"

'ನಾನು ವಿದ್ಯಾರ್ಥಿಗಳಿಗೆ ಎಲ್ಲ ಕ್ರಿಯಾಪದಗಳನ್ನು ಬರೆದುಕೊಂಡು ಬನ್ನಿ ಎಂದು ಹೇಳಿದೆ. ಮಕ್ಕಳೆಲ್ಲರೂ ಉತ್ಸಾಹದಿಂದ ಅನೇಕ ಕ್ರಿಯಾಪದಗಳನ್ನು ಬರೆದು ತೋರಿಸಿದರು.'

'ಆಮೇಲೆ ?'

'ಆಮೇಲೆ ಬೇರೆ ಆಟ ಪ್ರಾರಂಭಿಸಿದೆ. ಹಲಗೆಯ ಮೇಲೆ ಕೆಲವು ವಾಕ್ಯಗಳನ್ನು ಬರೆದೆ. ರಾಮನು ಓದುತ್ತಾನೆ, ಚಂಪಕನು ಬೀಳುತ್ತಾನೆ ಮುಂತಾದವು. ವಾಕ್ಯಗಳಲ್ಲಿ ಕ್ರಿಯಾಪದಗಳನ್ನು ಬಿಟ್ಟು ಉಳಿದ ಶಬ್ದಗಳನ್ನು ಅಳಿಸಲು ಹೇಳಿದೆ. ವಿದ್ಯಾರ್ಥಿಗಳು ಈ ಕಾರ್ಯವನ್ನು ಸರಿಯಾಗಿ ಮಾಡಿದರು. ಕ್ರಿಯಾಪದಗಳ ಪಾಠವನ್ನು ನಾನು ಇಲ್ಲಿಯೇ ನಿಲ್ಲಿಸಿದೆ.'

ಸಾಹೇಬರು ಹೇಳಿದರು : 'ಈ ರೀತಿಯಿಂದ ಅವರಿಗೆ ಚೆನ್ನಾಗಿ ನೆನಪು ಉಳಿಯುತ್ತದೆ. ಆದರೆ ಇದಕ್ಕೆ ಬಹಳ ವೇಳೆ ಬೇಕಾಗುತ್ತದೆ. ಅನೇಕ ಆಟಗಳನ್ನು ಅವರು ಆಡಬೇಕಾಗುತ್ತದೆ.'

ನಾನು ಹೇಳಿದೆ: "ಆಟ ಆಡುವುದರಲ್ಲಿ ಅವರಿಗೆ ಆನಂದ ದೊರೆಯುತ್ತದೆ. ಸ್ವಲ್ಪ ಸಮಯ ನಷ್ಟವಾದರೂ ಪರಿಣಾಮ ಒಳ್ಳೆಯದು ಮತ್ತು ಸ್ಥಿರವಾದದ್ದೂ ಆಗಿದ್ದರೆ ಏನು ಹಾನಿ ?"

ಸಾಹೇಬರು: "ನೀವು ಹೇಳುವುದು ನಿಜ. ನಾಮಪದಗಳ ಬಗೆಗೆ ನೀವೇನು ಮಾಡಿದಿರಿ?"

ನಾನು ಹೇಳಿದೆ: "ನಾಮಪದಗಳ ಪಾಠವನ್ನೂ ಇದೇ ರೀತಿ ಪ್ರಾರಂಭಿಸಿದೆ. ಮೊದಲು ನಾಮಪದಗಳ ಅನೇಕ ಚೀಟಿಗಳನ್ನು ಬರೆದೆ. ಮಕ್ಕಳು ಎಲ್ಲ ನಾಮಪದಗಳನ್ನು ಮೇಲಿಂದಮೇಲೆ ಓದಿಕೊಂಡರು. ನಾಮಪದಗಳಲ್ಲಿ ವೈವಿಧ್ಯವಿತ್ತು. ಈ ವಿವಿಧ ನಾಮಪದಗಳು ಅನೇಕ ಗುಂಪುಗಳಲ್ಲಿ ಹಂಚಲ್ಪಟ್ಟಿದ್ದವು. ಇದರಿಂದ ಅವರಿಗೆ ಇವುಗಳನ್ನು ಓದುವಾಗ ಸಾಕಷ್ಟು ಆನಂದವಾಯಿತು. ವಿದ್ಯಾರ್ಥಿಗಳಿಗೆ ಆಯಾಸವಾಗದಂತೆ ನಾನು ಕಲಿಸಬೇಕಾಗಿತ್ತು. ಈ ರೀತಿ ಮಾಡುವುದರಿಂದ ಅವರಿಗೆ ಅವುಗಳ ಪರಿಚಯ ದೃಢವಾಗಿ ಆಗುತ್ತಿತ್ತು. ಒಮ್ಮೆ ನಾನು ಅವೆಲ್ಲವುಗಳನ್ನು ಒಂದುಗೂಡಿಸಿ ಹೇಳಿದೆ. ನಾನು ಬೇಡಿದ್ದನ್ನು ನೀವು ಕೊಡಿ. ಏನು ಬೇಡುತ್ತೇನೆ ಎಂಬುದನ್ನು ಈಗಲೇ ಹೇಳುವುದಿಲ್ಲ. ಮಕ್ಕಳು ಸಂತೋಷದಿಂದ ಒಪ್ಪಿಕೊಂಡರು. ಹಲಗೆ, ಮೇಜು, ಕಲ್ಲು, ಕಟ್ಟಿಗೆ, ಕಾಗದ, ಪುಸ್ತಕ, ಡಬ್ಬ, ಹೀಗೆ ಯಾರ ಬಳಿ ಯಾವ ಚೀಟಿಯಿತ್ತೋ ಎಲ್ಲವನ್ನೂ ತೆಗೆದುಕೊಂಡು ಬಂದರು. ಕೆಲವರಂತೂ ನಾನು ಹೇಳಿದ ವಸ್ತುಗಳನ್ನು ಪ್ರತ್ಯಕ್ಷವಾಗಿ ತರಲು ಪ್ರಯತ್ನಿಸಿದರು. ಗುರುಗಳೇ 'ಸೂರ್ಯನನ್ನು ಹೇಗೆ ತರುವುದು ?' ಎಂದೊಬ್ಬ ಕೇಳಿದ. ಮತ್ತೊಬ್ಬ 'ಬೇವಿನ ಗಿಡವನ್ನು ಹೇಗೆ ತರುವುದು ಸಾಧ್ಯ?' ಎಂದ. ಅಂತೂ ಇವರು ನಾಮಪದಗಳನ್ನು ಚೆನ್ನಾಗಿ ಅರಿತುಕೊಂಡಿದ್ದಾರೆ ಎಂದು ನನಗನ್ನಿಸಿತು. ಈ ಆಟ ನಡೆದಾಗ ನಾನು ನಾಮಪದಗಳ ಪೆಟ್ಟಿಗೆಯನ್ನು ತೆಗೆದುಕೊಂಡು ಬಂದೆ. ಒಳಗೆ ಐದಾರು ನಾಮಪದಗಳಿದ್ದವು. ಮಕ್ಕಳು ಅಭ್ಯಾಸ ಬಲದಿಂದ ಎಲ್ಲವನ್ನೂ ಓದಿಕೊಂಡರು. ಒಬ್ಬನು ಕೇಳಿದ 'ಈ ಕೆಂಪು ಯಾವ ವಸ್ತುವಿನ ಹೆಸರು ಗುರುಗಳೇ?' ನಾನು ಕೇಳಿದೆ 'ಈ ಕೆಂಪು ಬಣ್ಣಕ್ಕೆ ನೀನೇನು ಹೇಳುವೆ ?' ವಿದ್ಯಾರ್ಥಿಯು ನಗುತ್ತ ಮರಳಿ ಹೋದನು. ನಂತರ ನಾನು ನಾಮಪದ ಮತ್ತು ಕ್ರಿಯಾಪದಗಳನ್ನು ಬೇರ್ಪಡಿಸಲು ಹೇಳಿದೆ. ಮಕ್ಕಳಿಗೆ ಇದು ಬಹಳ ಹಿಡಿಸಿತು. ನಂತರ ನಾನು ಬೇರೊಂದು ಆಟ ಹೇಳಿದೆ. ಕ್ರಿಯಾಪದಕ್ಕೆ ಯೋಗ್ಯವಾದ ನಾಮಪದವನ್ನು ಹುಡುಕುವ ಆಟ. ಉದಾಹರಣೆಗೆ ಕುದುರೆ ಎಂಬ ನಾಮಪದಕ್ಕೆ ಓಡುತ್ತದೆ ಅಥವಾ ಓಡಿತು ಎಂಬ ಕ್ರಿಯಾಪದವನ್ನು ಹುಡುಕುವುದು. ಮಕ್ಕಳು ಬಹಳ ಆಸಕ್ತಿಯಿಂದ ಈ ಆಟವನ್ನು ಆಡಿದರು. ನಂತರ ನಾನು ಹಲಗೆಯ ಮೇಲೆ ಕೆಲವು ವಾಕ್ಯಗಳನ್ನು ಬರೆದು ಅವುಗಳಲ್ಲಿ ನಾಮಪದ, ಕ್ರಿಯಾಪದಗಳನ್ನು ಗುರುತಿಸಲು ಹೇಳಿದೆ. ಇನ್ನು ಕೆಲವು ವಾಕ್ಯಗಳಲ್ಲಿ ನಾಮಪದಗಳನ್ನೂ, ಬೇರೆ ಕೆಲವಲ್ಲಿ ಕ್ರಿಯಾಪದಗಳನ್ನೂ ಗುರುತಿಸಿ ಉಳಿದದ್ದನ್ನು ಅಳಿಸಿ ಎಂದು ಹೇಳಿದೆ. ಮಕ್ಕಳು ಸರಿಯಾಗಿ ಉತ್ತರ ನೀಡಿದರು. ಈ ರೀತಿ ಅವರಿಗೆ ನಾಮಪದ ಹಾಗೂ ಕ್ರಿಯಾಪದಗಳ ಅಭ್ಯಾಸವಾಯಿತು."



"ಬಹಳ ಒಳ್ಳೆಯ ಉಪಾಯ. ನಿಜವಾಗಿಯೂ ಈ ಉಪಾಯದಿಂದ ಮಕ್ಕಳಿಗೆ ಆಯಾಸವಾಗುವುದಿಲ್ಲ. ಆದರೆ ಇದಕ್ಕೆ ಬೇಕಾದ ಸಾಮಗ್ರಿಗೆ ಸ್ವಲ್ಪ ಖರ್ಚು ಮಾತ್ರ ಆಗುವುದು. ಇದಕ್ಕೆ ನಿಮ್ಮಂತಹ ಅಧ್ಯಾಪಕರು ಬೇಕು" ಎಂದು ಸಾಹೇಬರು ನುಡಿದರು.

"ಸಾಹೇಬರೆ, ಮಕ್ಕಳಿಗೆ ಕಂಠಪಾಠ ಮಾಡುವ ತೊಂದರೆಯನ್ನು ತಪ್ಪಿಸಲು ಅಲ್ಪಸ್ವಲ್ಪ ಖರ್ಚಾದರೂ ಚಿಂತೆಯಿಲ್ಲ. ಇದಕ್ಕೆ ನಾನು ಸ್ವಂತ ಹಣ ಖರ್ಚು ಮಾಡಿದ್ದೇನೆ. ಹಳೆಯ ರಟ್ಟಿನಿಂದ ಪೆಟ್ಟಿಗೆಗಳನ್ನು ಮಾಡಿ ಅಲ್ಲಲ್ಲಿ ಬಿದ್ದ ಕಾಗದಗಳಿಂದ ಚೀಟಿಗಳನ್ನು ತಯಾರಿಸಿದ್ದೇನೆ."

"ನಿಮ್ಮ ಹಣ ನಿಮಗೆ ದೊರೆಯುವಂತೆ ಪ್ರಯತ್ನಿಸುವೆ."

"ನನ್ನ ಹಣ ವಾಪಸ್ಸು ಕೊಡಿಸುವ ಬದಲು ತಾವು ಈ ಪದ್ಧತಿಯನ್ನು ಒಪ್ಪಿಕೊಂಡು ಜಾರಿಗೆ ತಂದರೆ, ನನ್ನ ಹಣ ನನಗೆ ದೊರೆತದ್ದಕ್ಕಿಂತಲೂ ಹೆಚ್ಚು ತೃಪ್ತಿಯಾಗುವುದು"

"ಸರಿ, ವಿಚಾರ ಮಾಡುವೆ. ಅನಂತರ ಏನು ಮಾಡಿದಿರಿ ಹೇಳಿ?"

"ನಂತರ ನಾನು ವಿಶೇಷಣವನ್ನು ಪ್ರಾರಂಭಿಸಿದೆ. ಆದರೆ ನನ್ನ ಮಾತುಗಳಿಂದ ತಮಗೆ ಬೇಜಾರಾಗುತ್ತಿಲ್ಲವಷ್ಟೆ. ಯಾಕೆಂದರೆ ಮೊದಲೇ ವ್ಯಾಕರಣ ಶುಷ್ಕ ವಿಷಯ. ಅದನ್ನು ನಾನು ಸುತ್ತು ಬಳಸು ಮಾತುಗಳಿಂದ ತಮಗೆ ಹೇಳುತ್ತಿದ್ದೇನೆ."

"ಇಲ್ಲ, ನೀವು ಹೇಳಿ. ನಾನು ಇಡೀ ಕ್ರಮವನ್ನು ಸವಿಸ್ತಾರವಾಗಿ ತಿಳಿಯ ಬಯಸುತ್ತೇನೆ. ವಿಸ್ತಾರವಾಗಿ ತಿಳಿದುಕೊಳ್ಳದೆ ಹೋದರೆ ಇಡೀ ವಿಷಯ ತಿಳಿಯುವುದಾದರೂ ಹೇಗೆ? ಇರಲಿ, ಸ್ವಲ್ಪ ತಡೆಯಿರಿ. ಚಹಾ ತೆಗೆದುಕೊಂಡೇ ಮುಂದುವರಿಯೋಣ."

ಸಾಹೇಬರು ತುಂಬಾ ರಸಿಕರಾಗಿದ್ದರು. ಉತ್ತಮ ದರ್ಜೆಯ ಚಹಾ ಕುಡಿಯುತ್ತಿದ್ದರು. ನನ್ನ ಚಟವನ್ನೂ ಅವರು ಬಲ್ಲರು. ಚಹಾ ಕುಡಿಯುವುದರಲ್ಲೇ ಇಪ್ಪತ್ತು ನಿಮಿಷಗಳು ಕಳೆದವು. ನಂತರ ಉತ್ಸಾಹದಿಂದ ಮಾತು ಮುಂದುವರೆಯಿತು.

ನಾನು ಮುಂದುವರಿಸಿದೆ; ನನ್ನ ಪದ್ಧತಿ ಪ್ರಕಾರ ಮೊದಲು ವಿದ್ಯಾರ್ಥಿಗಳ ಎದುರು ವಿಶೇಷಣಗಳ ಚೀಟಿಗಳನ್ನಿಟ್ಟೆ. ಅವರು ಅವುಗಳನ್ನು ಓದಲಾರಂಭಿಸಿದರು. ಅಷ್ಟರಲ್ಲಿ ಒಬ್ಬ ಕೇಳಿದ: 'ಗುರುಗಳೇ, ವಿಶೇಷಣವೆಂದರೇನು?' ನಾನು ಹೇಳಿದೆ, 'ನೀವು ಓದುತ್ತಿರುವುವೆಲ್ಲ ವಿಶೇಷಣಗಳೇ'. ಅವರಿಗೆ ನನ್ನ ಮಾತಿನ ಅರ್ಥವಾಯಿತು. ಪುನಃ ಆಟ ಪ್ರಾರಂಭವಾಯಿತು. ಅವರು ವಿಶೇಷಣ, ನಾಮಪದ, ಕ್ರಿಯಾಪದಗಳ ಚೀಟಿಗಳನ್ನು ಓದಿ ಬೇರ್ಪಡಿಸುವುದರಲ್ಲಿ ತೊಡಗಿದರು.

'ಇದಾದನಂತರ ನಾನು ಅವರಿಗೆ ಒಂದು ಹೊಸ ಆಟ ಸೂಚಿಸಿದೆ. ನೋಡಿ ಮಕ್ಕಳೆ, ನಾನು ಹೇಳಿದ್ದನ್ನು ನೀವು ತಂದು ಕೊಡಬೇಕು' ಎಂದು ಹೇಳಿದೆ.

'ಪೆನ್ಸಿಲ್ ತನ್ನಿ'. ಒಬ್ಬ ಬಾಲಕ ಪೆನ್ಸಿಲ್ ತಂದುಕೊಟ್ಟ.

'ಕೆಂಪು ಪೆನ್ಸಿಲ್ ತಂದು ಕೊಡು.'

ಅವನು ಕೆಂಪು ಪೆನ್ಸಿಲ್ ತಂದು ಕೊಟ್ಟನು.

‘ಹಳದಿ ಪೆನ್ಸಿಲ್ ತಂದು ಕೊಡು’.

ಅವನು ಹಳದಿ ಪೆನ್ಸಿಲ್ ತಂದನು.

‘ಪೆನ್ಸಿಲ್ ಇಟ್ಟು ಬಾ.’

ಹುಡುಗ ಕೇಳಿದ ‘ಯಾವುದು?’

ನಾನು ಹೇಳಿದೆ. ‘ಕೆಂಪು ಪೆನ್ಸಿಲ್.’

ಪುನಃ ಹೇಳಿದೆ ‘ಕೆಂಪು ಪೆನ್ಸಿಲ್ ತಂದು ಕೊಡು’.

ಮತ್ತೆ ಹೇಳಿದೆ: ‘ಬೂದು ಬಣ್ಣದ ಪೆನ್ಸಿಲ್ ತಾ, ಗುಲಾಬಿ ಬಣ್ಣದ್ದು, ಉದ್ದ ಪೆನ್ಸಿಲ್, ಗಿಡ್ಡ ಪೆನ್ಸಿಲ್’.

ಬಾಲಕರು ಅದೇ ರೀತಿ ಪೆನ್ಸಿಲ್‌ಗಳನ್ನು ತಂದುಕೊಟ್ಟರು.

ನಾನು ಹೊಸ ಪಾಠ ಪ್ರಾರಂಭಿಸಿದೆ. ‘ಯಾವುದಾದರೊಂದು ಪೆನ್ಸಿಲ್ ತೆಗೆದುಕೊಳ್ಳಿ’.

ಒಬ್ಬ ಹುಡುಗ ಒಂದು ಪೆನ್ಸಿಲ್‌ಎತ್ತಿಕೊಂಡನು. ‘ಈಗ ಹಸಿರು ಪೆನ್ಸಿಲ್ ತೆಗೆದುಕೋ’.

ಹಸಿರು ಪೆನ್ಸಿಲ್ ತೆಗೆದುಕೊಂಡನು. ‘ಈಗ ಹಳದಿ ಪೆನ್ಸಿಲ್ ತೆಗೆದುಕೊ’

ಅವನು ಹಳದಿ ಪೆನ್ಸಿಲ್ ತೆಗೆದುಕೊಂಡನು.

‘ಈಗ ಉದ್ದವಾದ ಪೆನ್ಸಿಲ್ ತೆಗೆದುಕೊ’.

ಅವನು ಉದ್ದವಾದ ಪೆನ್ಸಿಲ್ ತೆಗೆದುಕೊಂಡನು.

ನಾನು ಕೇಳಿದೆ ‘ನೀನು ಯಾವ ಪೆನ್ಸಿಲ್ ತೆಗೆದುಕೊಂಡೆ?’

‘ಉದ್ದವಾದ ಪೆನ್ಸಿಲ್.’

‘ನಾನು ಹಲಗೆಯ ಮೇಲೆ ಬರೆದೆ. ಈ ವಿಶೇಷ ಶಬ್ದಗಳಿಗೆ ವಿಶೇಷಣೆಗಳು ಎನ್ನುತ್ತಾರೆ. ಇವು ಯಾವುದೇ ವಸ್ತುವಿನ ವಿಶೇಷ ಗುಣಗಳನ್ನು ತಿಳಿಯಪಡಿಸುತ್ತವೆ. ಮಕ್ಕಳು ಓದಿ ತಿಳಿದುಕೊಂಡರು. ನಾನು ನಾಮಪದಗಳ ಹಾಗೂ ವಿಶೇಷಣಗಳ ಪೆಟ್ಟಿಗೆಗಳನ್ನು ತೆರೆದು ನಾಮಪದಗಳಿಗೆ ಸರಿಯಾದ ವಿಶೇಷಣಗಳನ್ನು ವಿಶೇಷಣಗಳಿಗೆ ಸರಿಹೊಂದುವ ನಾಮಪದಗಳನ್ನು ಹುಡುಕಲು ಹೇಳಿದೆ. ಒಬ್ಬ ಬಾಲಕ ಕೆಂಪು ಎನ್ನುವ ವಿಶೇಷಣವನ್ನು ಹುಡುಕಿದ. ನಾಮಪದಗಳ ಪೆಟ್ಟಿಗೆಯಿಂದ ಕುದುರೆ ಎನ್ನುವ ಶಬ್ದವನ್ನು ಹುಡುಕಿದ. ಎರಡನ್ನು ಜೋಡಿಸಲಾಗಿ ಅದು ‘ಕೆಂಪು ಕುದುರೆ’ ಎಂಬ ಶಬ್ದವಾಯಿತು. ಈ ರೀತಿ ಬಾಲಕರು ಅನೇಕ ಜೋಡಿಗಳನ್ನು ಹುಡುಕತೊಡಗಿದರು. ನಾನು ಅವರ ಕಾರ್ಯವನ್ನು ಗಮನಿಸುತ್ತಾ ತರಗತಿಯಲ್ಲಿ ತಿರುಗುತ್ತಿದ್ದೆ. ಅಲ್ಲಲ್ಲಿ ಕೆಲವು ತಪ್ಪುಗಳನ್ನು ಅವರು ಮಾಡುತ್ತಿದ್ದರು. ಆಮೇಲೆ ನಾನು ಅನೇಕ ಬಗೆಯಾಗಿ ಅವರ ಪರೀಕ್ಷೆ ತೆಗೆದುಕೊಂಡೆ. ಅವರಿಗೆ ವಿಶೇಷಣದ ಬಗ್ಗೆ ಸರಿಯಾಗಿ ತಿಳಿದಿತ್ತು. ಅವುಗಳನ್ನು ಬೇರ್ಪಡಿಸುವ ರೀತಿಯನ್ನು ಅವರು ಚೆನ್ನಾಗಿ ಅರಿತಿದ್ದರು’.

ಸಾಹೇಬರೆಂದರು: ‘ನೀವು ನಿಜವಾಗಿಯೂ ಅನೇಕ ಆಟಗಳನ್ನು ಯೋಜಿಸಿ ಮಕ್ಕಳಿಗೆ ಬಹಳ ಸರಳ ಮತ್ತು ಸುಂದರ ರೀತಿಯಿಂದ ನಾಮಪದ, ವಿಶೇಷಣ ಹಾಗೂ ಕ್ರಿಯಾಪದಗಳ ಬಗ್ಗೆ ತಿಳಿಸಿರುವಿರಿ.ಅವರಿಗೆ ಅವುಗಳ ವ್ಯಾಖ್ಯೆಗಳನ್ನು ಕಲಿಸುವುದಿಲ್ಲವೇ?’



‘ವ್ಯಾಖ್ಯೆಗಳನ್ನು ಈಗಾಗಲೇ ಕಲಿಸಿಯೇ ಇರುವೆನಲ್ಲ. ವ್ಯಾಕರಣದಲ್ಲಿ ಕೊಟ್ಟ ವ್ಯಾಖ್ಯೆಗಳನ್ನು ನಾನು ಕಲಿಸುವುದಿಲ್ಲ. ತಾವು ಅವುಗಳನ್ನು ಪರೀಕ್ಷೆಯಲ್ಲಿ ಕೇಳಲೂಬಾರದು. ತಾವು ಪದಚ್ಛೇದದ ಬಗೆಗೆ ಕೇಳಬಹುದು.’

‘ನಾನು ಈ ವಿಷಯದ ಪರೀಕ್ಷೆಯನ್ನೇ ತೆಗೆದುಕೊಳ್ಳುವುದಿಲ್ಲ. ನಿಮ್ಮ ಈ ಪದ್ಧತಿಯನ್ನು ಇಡೀ ಶಾಲೆಯಲ್ಲಿ ಜಾರಿಗೆ ತರಬೇಕಾಗಿದೆ. ಪಾಪ, ಮಕ್ಕಳು ವ್ಯಾಕರಣವನ್ನು ಕಂಠಪಾಠ ಮಾಡಿ ಮಾಡಿ ಸುಸ್ತು ಹೊಡೆದಿದ್ದಾರೆ.’

‘ವ್ಯಾಕರಣ ಕಲಿಯುತ್ತ ಕಲಿಯುತ್ತ ನನ್ನ ಉಸಿರೇ ಕಟ್ಟುತ್ತಿತ್ತು. ಚೆನ್ನಾಗಿ ಏಟುಗಳನ್ನೂ ತಿನ್ನುತ್ತಿದ್ದೆ. ವ್ಯಾಕರಣದ ಪ್ರಶ್ನೆಗಳಿಗೆ ಸರಿಯಾಗಿ ಉತ್ತರ ಕೊಡದಿದ್ದರೆ ನಮ್ಮ ಶಿಕ್ಷಕರು ನಮಗೆ ಚೆನ್ನಾಗಿ ಏಟು ಕೊಡುತ್ತಿದ್ದರು.’

‘ಈಗಲೂ ಅದೇರೀತಿ ಏಟು ಕೊಡುತ್ತಾರೆ.’

‘ಹಾಗಾದರೆ ತಾವು ಈ ಪದ್ಧತಿಯನ್ನೇ ಏಕೆ ನಿಲ್ಲಿಸುವುದಿಲ್ಲ?’

‘ಇದು ನನ್ನ ಕೈಯಲ್ಲಿಲ್ಲ. ಸ್ವಲ್ಪ ಮಟ್ಟಿಗೆ ನನ್ನ ಕೈಯಲ್ಲಿರಬಹುದು. ಆದರೆ ನನ್ನ ಅಭಿಪ್ರಾಯದಂತೆ ನಾವೇ ಚೆನ್ನಾಗಿ ಕಲಿಸಿದರೆ ಈ ಹೊಡೆತ ಬಡಿತ ಎಲ್ಲವೂ ನಿಲ್ಲುತ್ತವೆ. ನೀವೇ ನೋಡಿ. ವ್ಯಾಕರಣ ಕಲಿಸಬೇಕಾದರೆ ನೀವು ಯಾರಿಗೆ ದಂಡಿಸುವ ಪ್ರಸಂಗ ಬಂದೀತು? ಸರಿ, ಸರ್ವನಾಮಗಳನ್ನು ಹೇಗೆ ತಿಳಿಸಿದಿರಿ?’

"ನಾನವರಿಗೆ ಒಂದು ಸಣ್ಣ ಆಟ ಕಲಿಸಿದೆ. ಆ ಆಟದಲ್ಲಿ ‘ನಾನು ಅಂದರೆ ಯಾರು?’ ಎಂದು ಕೇಳಿದೆ."

ಅವರು ಹೇಳಿದರು: ‘ಲಕ್ಷ್ಮೀಶಂಕರರು.’

‘ನೀವು ಅಂದರೆ ಯಾರು?’ ಶಾಮಸುಂದರನು ಹೇಳಿದ, ‘ನಾನು ಶಾಮಸುಂದರ’.

ನಾನು ಕೇಳಿದೆ, ‘ಇವನು ಯಾರು?’

‘ರಾಮಚಂದ್ರ.’

ಮೇಲಿನ ಪ್ರಶ್ನೆ ಕೇಳಿದ ನಂತರ ನಾನು ಹಲಗೆ ಮೇಲೆ ಬರೆದೆ.

ನಾನು – ಲಕ್ಷ್ಮೀಶಂಕರ.

ನೀನು – ಭೀಮಾಶಂಕರ.

ಅವನು – ಧನಂಜಯ.

ನಾವು – ಲಕ್ಷ್ಮೀಶಂಕರ, ಭೀಮಾಶಂಕರ, ಶಾಮಸುಂದರ ಮತ್ತು ಧನಂಜಯ.

ನೀವು – ದೇವಾರಾಮ, ಲಕ್ಷ್ಮೀಸಿಂಹ, ಟೀಕಮಸಿಂಹ, ದೇವೀಪ್ರಸಾದ.

ಅವರು – ಆ ಮೂರನೇ ತರಗತಿಯವರು ಮೋಹನಸಿಂಹ, ಮೂಲಚಂದ, ಲಕ್ಷ್ಮೀಚಂದ, ರೂಪಸಿಂಹ.

ಮಕ್ಕಳು ಓದಿದರು. ನಾನು ಹೇಳಿದೆ. ‘ಇವರು, ನಾನು, ನೀನು ಇವುಗಳಿಗೆ ಸರ್ವನಾಮಗಳೆನ್ನುತ್ತಾರೆ’. ಒಬ್ಬ ಬಾಲಕ ಕೇಳಿದನು. ‘ಸರ್ವನಾಮ ಅಂದರೇನು, ಗುರುಗಳೇ?’

ನಾನು ಹೇಳಿದೆ – ನೀವೇ ಯೋಚಿಸಿ.

ಇನ್ನೊಬ್ಬನು ಹೇಳಿದನು.'ಗುರುಗಳು ನನ್ನ ಅಂದರೆ ಲಕ್ಷ್ಮಣಸಿಂಹನ, ಲಕ್ಷ್ಮೀಶಂಕರರು ಅಂದರೆ ತಮ್ಮ, ಇವೇ ಸರ್ವನಾಮಗಳಲ್ಲವೇ ಗುರುಗಳೇ?'

ಮೂರನೆಯವನು ನುಡಿದನು: 'ನಿನ್ನ, ನನ್ನ, ನಿಮ್ಮ ಇವು ಕೂಡ ಸರ್ವನಾಮಗಳು ಅಲ್ಲವೇ?'

ನಾನು ಹೇಳಿದೆ: 'ಹೌದು ಇವೆಲ್ಲ ಸರ್ವನಾಮಗಳೇ'.

ನಾಲ್ಕನೆಯ ವಿದ್ಯಾರ್ಥಿ ಕೇಳಿದ – 'ಆದರೆ ಸರ್ವನಾಮ ಅಂದರೇನು ಗುರುಗಳೇ?'

ನಾನು ಹಲಗೆಯ ಮೇಲೆ ಬರೆದೆ – ರಾಮನ ಕೈಯಲ್ಲಿ ಪುಸ್ತಕವಿದೆ.

ರಾಮನ ಕೈಯಲ್ಲಿ ಲೆಕ್ಕಣಿಕೆ ಇದೆ.

ರಾಮನು ಬ್ರಾಹ್ಮಣನಿದ್ದಾನೆ.

ರಾಮು ಓದುತ್ತಾನೆ.

ರಾಮನು ನಿತ್ಯವೂ ಬೇಗನೆ ಬರುತ್ತಾನೆ.

ಲಕ್ಷ್ಮೀಶಂಕರರು ನಿಮ್ಮ ಗುರುಗಳು.

ಲಕ್ಷ್ಮೀಶಂಕರರು ನಿಮಗೆ ಕಲಿಸುತ್ತಾರೆ.

ಲಕ್ಷ್ಮೀಶಂಕರರು ನಿಮ್ಮನ್ನು ತಿರುಗಾಡಲು ಕರೆದುಕೊಂಡು ಹೋಗುತ್ತಾರೆ.

ಎಲ್ಲರೂ ಇವನ್ನು ಓದಿದರು. ನಂತರ ನಾನು 'ರಾಮ' ಶಬ್ದವನ್ನು ತೆಗೆದು 'ಅವನ' ಎಂಬ ಶಬ್ದವನ್ನು ಸೇರಿಸಿದೆ. 'ಲಕ್ಷ್ಮೀಶಂಕರ' ಎಂಬ ಶಬ್ದ ತೆಗೆದು – 'ನಾನು' ಎಂಬ ಶಬ್ದ ಸೇರಿಸಿದೆ.

ನಾನು ಕೇಳಿದೆ: 'ಸರ್ವನಾಮನ್ನು ಯವುದರ ಸ್ಥಾನದಲ್ಲಿ ಉಪಯೋಗಿಬೇಕು?'

ರಾಮನ ಸ್ಥಾನದಲ್ಲಿ ಎಂದು ಒಬ್ಬನೆಂದರೆ, ಲಕ್ಷ್ಮೀಶಂಕರರ ಸ್ಥಾನದಲ್ಲಿ ಎಂದು ಇನ್ನೊಬ್ಬನೆಂದ.

ನಾನು ಕೇಳಿದೆ: 'ರಾಮ ಮತ್ತು ಲಕ್ಷ್ಮೀಶಂಕರ ನಾಮಪದಗಳೋ ಅಥವಾ ಕ್ರಿಯಾಪದಗಳೋ?'

'ನಾಮಪದಗಳು'.

'ಅಂದರೆ ರಾಮ, ಲಕ್ಷ್ಮೀಶಂಕರ ಈ ಹೆಸರುಗಳ ಬದಲಿಗೆ ಬಂದ ಶಬ್ದಗಳಿಗೆ ಏನನ್ನುತ್ತಾರೆ?'

'ಸರ್ವನಾಮಗಳು'.

ಸಾಹೇಬರು ನಗುತ್ತ ಹೇಳಿದರು: 'ನೀವು ಉತ್ತಮ ಶಿಕ್ಷಕರಿದ್ದೀರಿ. ಬಹಳ ವಿಸ್ತಾರವಾಗಿ ಎಲ್ಲವನ್ನೂ ವರ್ಣಿಸುತ್ತೀರಿ'.

'ಅದು ನನ್ನ ಅಭ್ಯಾಸ; ಹೇಗೆ ಬಿಟ್ಟೀತು? ಸಂಕ್ಷಿಪ್ತವಾಗಿ ಹೇಳಲು ನಾನು ವಕೀಲನಂತೂ ಅಲ್ಲ'.



ಸಾಹೇಬರಿಗೆ ಸಾಕಷ್ಟು ದಣಿವಾದಂತೆ ಕಂಡುಬಂತು. ಆದರೂ ಅವರು ನನ್ನ ಮಾತುಗಳನ್ನು ಅಸಕ್ತಿಯಿಂದ ಕೇಳುತ್ತಿದ್ದರು. ನಾನು ಮಾತು ಮುಗಿಸಿ ಅವರ ಅಪ್ಪಣೆ ಕೇಳಿದೆ.

'ನಿಮ್ಮ ವರ್ಗವನ್ನು ವ್ಯಾಕರಣದ ಪರೀಕ್ಷೆಯಿಂದ ಮುಕ್ತಗೊಳಿಸಿರುವೆ. ಆದರೆ ಕಾಲ ಹಾಗೂ ವಿಭಕ್ತಿಗಳು ಇನ್ನೂ ಬಾಕಿ ಇವೆ. ಇವು ಮುಗಿದ ಮೇಲೆ ನನಗೆ ತಿಳಿಸಿ. ನಾನು ಮುಂದಿನ ವರ್ಷ ಈ ವಿಷಯವಾಗಿ ಏನಾದರೂ ಮಾಡುವೆ.' ಎಂದು ಹೇಳಿ ಮನೆಗೆ ಹೋಗಲು ನನಗೆ ಅಪ್ಪಣೆ ನೀಡಿದರು.

ನಾನು ದಣಿದು ಮನೆಗೆ ಬಂದು ಮಲಗಿಕೊಂಡೆ.

## 3


ಅರ್ಧವಾರ್ಷಿಕ ಪರೀಕ್ಷೆಯ ದಿನ ಬಂತು. ಸಾಹೇಬರು ಸ್ವತಃ ಪರೀಕ್ಷೆ ತೆಗೆದುಕೊಳ್ಳಲು ಬಂದರು. ಅವರಿಗೆ ಬಹಳ ಆಸಕ್ತಿ ಇತ್ತು.

ನಾನು ನನ್ನದೇ ರೀತಿಯಲ್ಲಿ ನನ್ನ ತರಗತಿಯ ಮಕ್ಕಳನ್ನು ಸಿದ್ಧಗೊಳಿಸಿದ್ದೆ. ಬೇರೆ ಎಲ್ಲ ತರಗತಿಗಳ ಪರೀಕ್ಷೆ ಆದ ನಂತರ ನನ್ನ ತರಗತಿಯ ಮಕ್ಕಳ ಪರೀಕ್ಷೆ ಮಾಡಲು ಕೇಳಿಕೊಂಡಿದ್ದೆ. ನನ್ನ ತರಗತಿಯ ಪರೀಕ್ಷೆ ನಡೆದಾಗ ಮುಖ್ಯಾಧ್ಯಾಪಕರು ಮತ್ತು ಎಲ್ಲ ಶಿಕ್ಷಕರಿಗೂ ಹಾಜರಿರಲು ಕೇಳಿಕೊಂಡಿದ್ದೆ. ಅಲ್ಲದೆ ಪ್ರತಿಯೊಂದು ತರಗತಿಯ ಐದೈದು ವಿದ್ಯಾರ್ಥಿಗಳೂ ಬರಲಿ ಎಂದು ಹೇಳಿದ್ದೆ.

ಪರೀಕ್ಷೆಯ ದಿನ ನನ್ನ ಮನಸ್ಸು ಶಾಂತವಾಗಿತ್ತು. ನನ್ನ ಎದೆ ಡವಗುಟ್ಟುತ್ತಿರಲಿಲ್ಲ. ಮನಸ್ಸಿನಲ್ಲಿ ಪಾಸು–ನಾಪಾಸಿನ ಚಿಂತೆ ಇರಲಿಲ್ಲ; ಚಿಂತೆಗೆ ಕಾರಣವೇ ಇರಲಿಲ್ಲ. ನಿತ್ಯವೂ ಮಾಡುವುದನ್ನೇ ಇಂದೂ ಮಾಡುವುದು ಎಂದು ನಾನು ವಿದ್ಯಾರ್ಥಿಗಳಿಗೆ ಹೇಳಿದ್ದೆ. ಪರೀಕ್ಷೆಯಲ್ಲಿ ಎಲ್ಲರೂ ಪಾಸಾಗುವಿರಿ. ಅಂತರವೆಂದರೆ ನಮ್ಮ ಕೆಲಸವನ್ನು ನೋಡಲು ಇಂದು ಬೇರೆಯವರನ್ನು ಕರಸಿದ್ದೇವೆ ಅಷ್ಟೆ.

ನನ್ನ ನಾಟಕೀಯ ಪದ್ಧತಿಗನುಗುಣವಾಗಿ ನಾನು ಎಲ್ಲ ವ್ಯವಸ್ಥೆಯನ್ನು ಪರದೆಯ ಹಿಂದೆ ಮಾಡಿದ್ದೆ. ಮುಂದೆ ಎಲ್ಲರನ್ನೂ ಕುಳ್ಳಿರಿಸಿದ ನಂತರ ಪರದೆ ಸರಿಸಿದೆ.

ರಂಗದ ಮೇಲೆ ಬೇರೆ ವರ್ಗಗಳ ಮಕ್ಕಳ ಗುಂಪುಗಳನ್ನು ಕುಳ್ಳಿರಿಸಿದ್ದೆವು. ಪ್ರತಿಯೊಂದು ಗುಂಪಿನ ಮಕ್ಕಳಿಗೆ ನನ್ನ ತರಗತಿಯ ಬಾಲಕ ಕತೆ ಹೇಳುತ್ತಿದ್ದ. ಈ ರೀತಿಯಿಂದ ಕತೆ ಹೇಳುವುದು ಮುಂದುವರೆಯಿತು. ಪ್ರತಿಯೊಬ್ಬ ವಿದ್ಯಾರ್ಥಿ ತನಗಿಷ್ಟವಾದ ಕತೆಯನ್ನು ಆರಿಸಿಕೊಂಡಿದ್ದನು. ಮರೆತರೆ ನೋಡಿಕೊಳ್ಳಲು ಪುಸ್ತಕವಂತೂ ಬಳಿಯೇ ಇತ್ತು. ತನ್ನದೇ ಆದ ರೀತಿಯಿಂದ ಕತೆ ಹೇಳುತ್ತ ತಾನೂ ಆನಂದಪಡುತ್ತಿದ್ದ. ತಾನು ಹೇಳುವ ಕತೆಯನ್ನು ಅವನು ಚೆನ್ನಾಗಿ ಬಲ್ಲವನಾಗಿದ್ದ. ಭಾವಪೂರ್ಣವಾಗಿ ಅರ್ಥ ತಿಳಿದುಕೊಂಡು ಅವನು



ನಮ್ಮ ನಾಟಕದ ರೀತಿಯಲ್ಲೇ ಎಲ್ಲಾ ಏರ್ಪಾಟುಗಳನ್ನು ಪರದೆಯ ಹಿಂದೆಯೇ ಮಾಡಿದೆ.

ತನ್ನ ಕತೆ ಹೇಳುತ್ತಿದ್ದ. ಕತೆಗಳು ಮುಗಿದವು. ಎಲ್ಲ ಶಿಕ್ಷಕರೂ ಒಬ್ಬರನ್ನೊಬ್ಬರು ನೋಡಿಕೊಳ್ಳತೊಡಗಿದರು. ನಾನು ಹೇಳಿದೆ – ಇದು ನನ್ನ ಒಂದು ಪರೀಕ್ಷೆ.

ಒಬ್ಬ ಶಿಕ್ಷಕ ಇನ್ನೊಬ್ಬನ ಕಿವಿಯಲ್ಲುಸುರಿದ – 'ಯಾವ ವಿಷಯದ್ದು?' ನಾನು ಉತ್ತರಿಸಿದೆ – 'ಭಾಷೆಯಮೇಲೆ ಅಧಿಕಾರದ ಪರೀಕ್ಷೆ. ಕತೆ ಹೇಳುವ ಕಲೆ. ನೆನಪಿನ ಶಕ್ತಿ ಹಾಗೂ ಅಭಿನಯ ಕಲೆಯ ಪರೀಕ್ಷೆ.'

ಎಲ್ಲ ಶಿಕ್ಷಕರು ಇನ್ನೊಂದು ಪರೀಕ್ಷೆಗಾಗಿ ಕಾಯತೊಡಗಿದರು. ಮತ್ತೆ ಪರದೆ ಸರಿಯಿತು. ಎಲ್ಲ ವಿದ್ಯಾರ್ಥಿಗಳು ಗೋಳಾಕಾರವಾಗಿ ಕುಳಿತಿದ್ದರು. ಎದುರಿನ ಹಲಗೆಯ ಮೇಲೆ ಬರೆದಿತ್ತು. ಅಂತಾಕ್ಷರಿಯ ಆಟ.

ಒಬ್ಬನು ಕವಿತೆ ಓದಿದ. ಇನ್ನೊಬ್ಬ ಆ ಕವಿತೆಯ ಕೊನೆಯ ಅಕ್ಷರದಿಂದ ಪ್ರಾರಂಭವಾಗುವ ಇನ್ನೊಂದು ಕವಿತೆ ಓದಿದ. ಈ ರೀತಿ ಇಡೀ ವರ್ತುಲ ಪೂರ್ಣವಾಯಿತು ಮತ್ತು ಅದೇ ಅಂತಾಕ್ಷರಿ ಪ್ರಾರಂಭವಾಯಿತು.

ಸಾಹೇಬರು ಕೇಳಿದರು. – ಇವರನ್ನು ಎದುರು ಬದುರಾಗಿ ಏಕೆ ಕೂಡಿಸಲಿಲ್ಲ? ಇಲ್ಲಿ ಗುಂಪಿನ ಆವಶ್ಯಕತೆ ಇದೆಯಲ್ಲವೇ?



ನಾನು – ಇಲ್ಲ ನಾನು ಆ ಪದ್ಧತಿಯನ್ನೂ ಕೈಬಿಟ್ಟಿರುವೆ. ಅದರಲ್ಲಿ ಸೋಲು ಗೆಲುವಿನ ಮಾತು ಬರುತ್ತದೆ. ಇಂಥ ಸ್ಪರ್ಧೆಯಿಂದ ಈರ್ಷ್ಯೆ ಬೆಳೆಯುತ್ತದೆ. ಆದರೆ ಈ ಪದ್ಧತಿಯಲ್ಲಿ ಒಬ್ಬ ವಿದ್ಯಾರ್ಥಿಗೆ ನೆನಪಿರದಿದ್ದರೆ ಮುಂದಿನ ವಿದ್ಯಾರ್ಥಿ ಹೇಳಲು ಪ್ರಾರಂಭಿಸುತ್ತಾನೆ. ಹೀಗೆ ಕೆಲಸ ಮುಂದುವರೆಯುತ್ತದೆ. ಒಂದೊಂದು ಸಲ ನೆನಪಿರದೆ ಹೋದರೂ ಇನ್ನೊಂದು ಸಲ ಅವನಿಗೆ ನೆನಪಾಗುತ್ತದೆ.

ಸಾಹೇಬರು ತಮ್ಮ ಗಡ್ಡ ಕೆರೆಯುತ್ತ ಕಣ್ಣು ಮಿಟುಕಿಸಿದರು. ಮಕ್ಕಳನ್ನು ಸ್ವಲ್ಪ ಹೊತ್ತು ಮಾತ್ರ ಇಂತಹ ಆಟ ಆಡಲು ನಾನು ಕುಳ್ಳಿರಿಸಿದ್ದೆ. ಆದರೆ ಅವರೆಲ್ಲರಿಗೂ ಅದು ಎಷ್ಟು ಹಿಡಿಸಿತೆಂದರೆ ಗಂಟೆ ಬಾರಿಸಿದರೂ ಅಲ್ಲಿಂದ ಏಳುವ ಮನಸ್ಸಾಗಲಿಲ್ಲ. ನಾನು ಸ್ವಲ್ಪ ಹೊತ್ತು ತಡೆದು ಪರದೆ ಸರಿಸಿದೆ. ಪರದೆಯ ಹೊರಗೆ ಬಂದು ನಾನು ಹೇಳಿದೆ, 'ಮಹಾಶಯರೇ, ನೀವೆಲ್ಲ ಮಕ್ಕಳಿಗೆ ಎಷ್ಟು ಕವಿತೆಗಳು ಚೆನ್ನಾಗಿ ನೆನಪಿವೆ ಎನ್ನುವುದನ್ನು ಗಮನಿಸಿರುವಿರಾ? ಕವಿತೆಯ ತರಗತಿಯಲ್ಲಿ ನಿತ್ಯವೂ ನಾನು ಇದೇ ಆಟ ಆಡಿಸುತ್ತೇನೆ'.

ಮತ್ತೆ ಪರದೆ ಎದ್ದಿತು. ಗೋಳಾಕಾರದಲ್ಲಿ ಕುಳಿತ ಹುಡುಗರು ಉತ್ಸಾಹದಿಂದ ಒಗಟುಗಳನ್ನು ಬಿಡಿಸುತ್ತಿದ್ದರು. ಸಾಹೇಬರೆಂದರು – ಓಹೋ ಇವು ಒಗಟುಗಳು; ಚಿಕ್ಕವನಿದ್ದಾಗ ನಾನು ಇವುಗಳ ಬಗ್ಗೆ ಕೇಳಿದ್ದೆ. ಆದರೆ ಇವು ಪಠ್ಯಕ್ರಮದಲ್ಲಿ ಇಲ್ಲವಲ್ಲ?'

'ಪಠ್ಯಕ್ರಮದಲ್ಲಿ ಭಾಷಾ ಶಿಕ್ಷಣ ಕ್ರಮವಂತು ಇದ್ದೇಇದೆಯಲ್ಲ. ಪಠ್ಯಕ್ರಮದ ಮೂಲ ಉದ್ದೇಶ, ಮಕ್ಕಳಲ್ಲಿ ಜಿಜ್ಞಾಸೆ ಮತ್ತು ಜ್ಞಾನವನ್ನು ವಿಕಸಿತಗೊಳಿಸುವುದು. ನನ್ನ ಎಲ್ಲ ವಿದ್ದಾರ್ಥಿಗಳೂ ಇಂತಹ ಆಟಗಳೆಂದರೆ ಹುಚ್ಚೆದ್ದು ಕುಣಿಯುವರು. ಇವರಿಗೆ ಅನೇಕ ಒಗಟುಗಳು ನೆನಪಿನಲ್ಲಿವೆ. ಮುಂದಿನ ವರ್ಷವಾದರೂ ತಾವು ಇವುಗಳಿಗೆ ಪಠ್ಯಕ್ರಮದಲ್ಲಿ ಸ್ಥಾನ ಕೊಡುವಿರಿ ಎಂದು ಆಶಿಸುವೆ.' ಎಂದು ನಾನು ಹೇಳಿದೆ.

ಅನಂತರ ಶಬ್ದಗಳ ಆಟ ಪ್ರಾರಂಭಿಸಿದೆವು. ಒಂದು ಶಬ್ದದ ಕೊನೆಯ ಅಕ್ಷರದಿಂದ ಮತ್ತೊಂದು ಶಬ್ದ ಪ್ರಾರಂಭವಾಗುತ್ತಿತ್ತು. ಇದು ಸುಲಭವಾದ ಆಟವಾಗಿತ್ತು. ಆದರೆ ಇದರಿಂದ ವಿದ್ಯಾರ್ಥಿಗಳು ನದಿಗಳ, ಪರ್ವತಗಳ ಹಿಂದೂ–ಮುಸಲ್ಮಾನರ, ಬ್ರಾಹ್ಮಣರ, ವ್ಯಾಪಾರಿಗಳ ಹೆಸರುಗಳನ್ನು ಆಯ್ದುಕೊಂಡದ್ದು ಕಂಡು ಬರುತ್ತಿತ್ತು. ತಮ್ಮ ಸರದಿ ಬಂದಾಗ ಅವುಗಳನ್ನೇ ಹೇಳುತ್ತಿದ್ದರು. ಇದರಿಂದ ಎಲ್ಲರಿಗೂ ಈ ಆಟ ತುಂಬಾ ಹಿಡಿಸಿತು.

ನಾನು ನನ್ನ ಶಿಕ್ಷಕ ಬಂಧುಗಳಿಗೆ ಹೇಳಿದೆ 'ಈ ಆಟದ ನಿಮಿತ್ತ ಹೆಚ್ಚು ಹೆಚ್ಚು ಶಬ್ದಗಳನ್ನು ಸಂಗ್ರಹಿಸಲು ಮಕ್ಕಳಿಗೆ ಹೇಳುತ್ತೇನೆ. ನಕಾಶೆಗಳನ್ನು, ಶಬ್ದಕೋಶಗಳನ್ನು ನೋಡುತ್ತ ಇರಿ ಎಂದು ಸಲಹೆ ಕೊಡುತ್ತೇನೆ. ಇದರಿಂದ ಬಹಳ ಶಬ್ದಗಳು ನಿಮ್ಮ ನಾಲಿಗೆ ಮೇಲೆ ಇರುತ್ತವೆ. ಆಟ ಆಡುವ ಮುಂಚೆ ಅನೇಕ ಹೊಸ ಶಬ್ದಗಳ ಪರಿಚಯವೂ ನಿಮಗೆ ಆಗುತ್ತದೆ. ಕೆಲವರು ಶಬ್ದವನ್ನು ಬರೆದುಕೊಳ್ಳುತ್ತಾರೆ.'

‘ಈ ಆಟದ ಮೂಲದಲ್ಲಿ, ಇನ್ನೊಂದು ಮಹತ್ವಪೂರ್ಣವಾದ ತತ್ವ ಅಡಗಿದೆ. ಅದ್ದೆಂದರೆ ಬುದ್ಧಿಶಕ್ತಿ ಹಾಗೂ ಸಾಮಾನ್ಯ ಜ್ಞಾನದ ವಿಕಾಸ. ಬೇರೆ ಎಲ್ಲ ವರ್ಗಗಳಲ್ಲಿಯೂ ಇಂತಹ ಆಟಗಳು ಪ್ರಾರಂಭವಾಗಬೇಕು.’ ನನ್ನನ್ನು ವಿಶೇಷವಾಗಿ ನೋಡುತ್ತ ಸಾಹೇಬರೆಂದರು; ‘ನೀವು ಹೊಸ ಹೊಸ ಆಟಗಳನ್ನು ಹುಡುಕಿ ತೆಗೆಯುತ್ತೀರಿ.’

ಒಬ್ಬ ಶಿಕ್ಷಕ ಇನ್ನೊಬ್ಬನ ಕಿವಿಯಲ್ಲಿ ಉಸುರಿದ ‘ಮತ್ತೆ ಅದಕ್ಕಾಗಿಯೇ ಇವರು ಬಂದಿರುವುದು, ಅವರೇನು ಕಲಿಸುವುದಕ್ಕಾಗಿ ಬಂದಿದ್ದಾರೆಯೆ? ಮಜಾ ಮಾಡಲು ಬಂದಿದ್ದಾರೆ. ಕಲಿಸಿ, ಕಲಿಸಿ, ನಮ್ಮ ತಲೆ ಕೆಟ್ಟು ಹೋಗಿದೆ. ಇವರಿಗಾದರೋ, ಆಟವಾಡಿಸುವದರಲ್ಲಿಯೇ ವೇಳೆ ಹೋಗುತ್ತದೆ.’

ಇನ್ನೊಬ್ಬನು ನುಡಿದ: ‘ಹಳೆಯ ಓದಿನ ಕಾಲ ಮುಗಿಯಿತು. ಹೊಸ ಕಲಿಕೆಯ ಕಾಲ ಬಂದಿದೆ. ಜೋರಾಗಿ ಪಾಠ ಓದುವುದು, ಕವಿತೆಗಳನ್ನು ಕಂಠಪಾಠಮಾಡುವುದು. ಇಂತಹ ಯಾವ ಗೊಂದಲವೂ ಈಗ ಇಲ್ಲ, ಈಗ ಕೇವಲ ಆಟಕ್ಕೆ ಮಹತ್ವವಿದೆ. ಮುಂದೇನು ಆಗುತ್ತದೋ ಯಾರು ಬಲ್ಲರು. ಓದು ಬರೆಹ, ವಿಚಾರ ಈಗ ಯಾರಿಗೂ ಇಲ್ಲ, ಎಲ್ಲರಿಗೂ ಕೇವಲ ಆಟದ್ದೇ ಚಿಂತೆ.’

ನನ್ನ ಎಲ್ಲ ಲಕ್ಷ್ಯ ವಿದ್ಯಾರ್ಥಿಗಳ ಚಟುವಟಿಕೆಗಳನ್ನು ತೋರಿಸುವುದರ ಕಡೆ ಇತ್ತು. ಹೀಗಾಗಿ ನಾನು ಅವರ ಮಾತಿನ ಕಡೆಗೆ ಗಮನ ಕೊಡಲಿಲ್ಲ. ನಂತರ ಯಾರೋ ನನಗೆ ಇವೆಲ್ಲ ಹೇಳಿದರು.

ನಾನು ಸೀಟಿ ಬಾರಿಸಿದೆ. ಎಲ್ಲ ಮಕ್ಕಳು ಕೈಯಲ್ಲಿ ಕಸಬರಿಕೆಯನ್ನು ಹಿಡಿದುಕೊಂಡು ಸಾಲಾಗಿ ನಿಂತರು. ನಾನು ಕಸಬರಿಕೆಯೊಂದಿಗೆ ಅವರಿಗೆ ವ್ಯಾಯಾಮ ಮಾಡಿಸಿದೆ. ನಂತರ ಶಾಲೆಯ ಆವರಣವನ್ನು ಗುಡಿಸಲು ಹೇಳಿದೆ. ಅವರು ಶಾಲೆಯ ತುಂಬ ಅಡ್ಡಾಡಿ ಕಸವಿದ್ದಲ್ಲೆಲ್ಲ, ಸ್ವಚ್ಛಗೊಳಿಸಿ, ಕಸವನ್ನು ಬುಟ್ಟಿಯಲ್ಲಿ ತುಂಬಿಕೊಂಡು, ನಮ್ಮೆದುರು ಬಂದರು. ಸಾಹೇಬರು ಹಾಗೂ ಶಿಕ್ಷಕರು ಆಶ್ಚರ್ಯದಿಂದ ನಮ್ಮ ಕಡೆಗೆ ನೋಡುತ್ತಿದ್ದರು. ನನ್ನ ವಿದ್ಯಾರ್ಥಿಗಳಿಗೆ ಇದು ಒಂದು ಪರೀಕ್ಷೆಯಾಗಿತ್ತು. ಸಾಹೇಬರು ಕೇಳಿದರು ‘ಕಸಬರಿಕೆಯೊಂದಿಗೆ ಕವಾಯಿತು ಯಾವಾಗ ಮಾಡಿಸಿದಿರೆಂಬುದು ತಿಳಿಯಲಿಲ್ಲ.’

‘ನಮ್ಮ ದೇಶದಲ್ಲಿ ಇಂದು ಎಲ್ಲಿ ನೋಡಿದರಲ್ಲಿ ಹೊಲಸೇ ಹೊಲಸು. ಹೊಲಸು ನಮ್ಮ ರಾಷ್ಟ್ರೀಯ ಕಳಂಕವಾಗಿದೆ. ಇದು ಇರುವವರೆಗೆ ದುರವಸ್ಥೆ ಮುಗಿಯಲಾರದು, ಆದ್ದರಿಂದಲೇ ನಾವು ನಿಯಮಿತವಾಗಿ ಸೆಣಸಬೇಕು. ಕಸಬರಿಕೆ ಕೇವಲ ಒಂದು ಸಂಕೇತ ಮಾತ್ರ. ಈ ಮಕ್ಕಳ ಮೊದಲನೆಯ ಪಾಠ, ಕವಾಯತು ಇದೇ. ಪ್ರತಿ ಕೋಣೆ ಸ್ವಚ್ಛಗೊಳಿಸದ ಹೊರತು ನಾವು ತರಗತಿಯಲ್ಲಿ ಬೇರೆ ಕೆಲಸ ಮಾಡುವುದಿಲ್ಲ. ಈಗ ಈ ಮಕ್ಕಳಿಗೂ ಹೊಲಸು ಸೇರುವುದಿಲ್ಲ’ ಎಂದು ನಾನು ಹೇಳಿದೆ.



ಈ ರೀತಿ ಮಾತು ನಡೆದಾಗ ಮಕ್ಕಳು ಕೈ-ಕಾಲು ಮುಖ ತೊಳೆದುಕೊಂಡು ಬಂದರು. ನಾನು ಎರಡನೆಯ ಸಲ ಸೀಟಿ ಬಾರಿಸಿದೆ.

ಸಾಹೇಬರು ‘ನಿಮ್ಮ ಈ ಪ್ರಯೋಗ ನಿಜವಾಗಿಯೂ ಮೆಚ್ಚತಕ್ಕದ್ದು. ನಾಲ್ಕನೆಯ ತರಗತಿಯಲ್ಲಿ ಕಲಿಸುವುದರ ಜೊತೆಗೆ ಮತ್ತೆ ಯಾವ ಪ್ರಯೋಗಗಳನ್ನು ಮಾಡಿದ್ದೀರಿ?’ ಎಂದು ಕೇಳಿದರು.

ನಾನು ‘ನನ್ನ ಪ್ರಯೋಗಗಳಲ್ಲಿ ಈ ಎಲ್ಲ ವಿಷಯಗಳಿಗೂ ಅವಕಾಶವಿದೆ. ನಾಲ್ಕನೆಯ ವರ್ಗದ ವಿಷಯ ಕಲಿಸುವುದಕ್ಕಿಂತ ಮುಂಚೆ ಇವರಿಗೆ ಮೊದಲನೇ ವರ್ಗದ ಅಭ್ಯಾಸ ಮಾಡಿಸಬೇಕಲ್ಲವೇ?’ ಎಂದು ಸೀಟಿ ಬಾರಿಸಿದೆ.

ಮಕ್ಕಳು ಓಡಿ ಹೋಗಿ ಶಾಲೆಯ ಆವರಣದಲ್ಲಿನ ಗಿಡಗಳನ್ನು ಹತ್ತಿ ಕುಳಿತರು. ಮತ್ತೊಮ್ಮೆ ಸೀಟಿ ಬಾರಿಸಿದೆ, ಕೂಡಲೇ ಎಲ್ಲರೂ ಕೆಳಗಿಳಿದು ಬಂದರು. ಮೂರನೆಯ ಸೀಟಿಗೆ ಮತ್ತೆ ಮೇಲೇರಿದರು. ನಾಲ್ಕನೆಯ ಸೀಟಿಗೆ ಮತ್ತೆ ಕೆಳಗಿಳಿದು ಬಂದರು.

ಮುಖ್ಯೋಪಾಧ್ಯಾಯರು: ‘ಇದೇನು ವಿಚಿತ್ರವಾದ ಆಟ. ಇದನ್ನು ಯಾರೂ ಕಲಿಸಬೇಕಾಗಿಲ್ಲ. ತಾನಾಗೇ ಬರುತ್ತದೆ. ಇದರಲ್ಲಿ ಕಲಿಸುವುದೇನು ಬಂತು?’

ನಾನು ಹೇಳಿದೆ: ‘ಕಲಿಸದಿದ್ದರೆ ಮಕ್ಕಳಿಗೆ ಇದೂ ಬರುವುದಿಲ್ಲ. ನಾವು ಎಷ್ಟು ಸಲ ಮಕ್ಕಳಿಗೆ ಈ ರೀತಿ ಆಟಗಳನ್ನು ಕಲಿಸುತ್ತೇವೆ?’

ಮುಖ್ಯೋಪಾಧ್ಯಾಯರು: ‘ಇದು ಸುಳ್ಳು.’

ನಾನು: ‘ಹಾಗಾದರೆ ಶಾಲೆಯ ಬೇರೆ ಮಕ್ಕಳೂ ಇಲ್ಲಿ ನಿಂತಿದ್ದಾರೆ, ಅವರಲ್ಲಿ ಎಷ್ಟು ಜನರು ಈ ರೀತಿ ಹತ್ತಿ ಇಳಿಯಬಲ್ಲರು?’

ಸಾಹೇಬರು ಬೇರೆ ವಿದ್ಯಾರ್ಥಿಗಳಿಗೆ ಆ ರೀತಿ ಮಾಡಲು ತಿಳಿಸಿದಾಗ ಇಬ್ಬರು, ಮೂವರು ಮಾತ್ರ ಅದರಲ್ಲಿ ಯಶಸ್ವಿಯಾದರು.

ನಾನು ಹೇಳಿದೆ: ಸಾಹೇಬರೇ, ‘ ಈ ರೀತಿಯ ಅನೇಕ ಆಟಗಳನ್ನು ನಾನು ಇವರಿಗೆ ಕಲಿಸಿದ್ದೇನೆ. ಇವೆಲ್ಲ ನನ್ನ ಹಾಗೂ ಪ್ರಯೋಗದ ವಿಷಯಗಳಾಗಿವೆ. ಪರೀಕ್ಷೆಯ ಪಠ್ಯಕ್ರಮದಲ್ಲಿ ಈ ಎರಡೂ ಆಟಗಳಿಗೆ ತಾವು ಅಂಕಗಳನ್ನು ಕೊಡಬೇಕು.

ಸಾಹೇಬರು ವಿನೋದದಿಂದ ನುಡಿದರು: ‘ನೀವೂ ನನ್ನಿಂದ ಅಂಕಗಳನ್ನು ಅಪೇಕ್ಷಿಸುವಿರಾ?’

ನಾನು ಮೂರನೆಯ ಸೀಟಿ ಬಾರಿಸಿದೆ. ಮಕ್ಕಳು ಪಾಠಶಾಲೆಯ ಕಪಾಟಿನಿಂದ ಲಾಠಿಗಳು ಮತ್ತು ಹುರಿ ತೆಗೆದುಕೊಂಡು ಬಂದು, ತಮ್ಮ ತಮ್ಮ ಲಾಠಿಗಳನ್ನು ತಿರುಗಿಸತೊಡಗಿದರು. ಓಣಿಯ ಗೂಂಡಾ ಹುಡುಗರಂತಲ್ಲ. ಕೊಂಚವೂ ಗಲಾಟೆಯಿಲ್ಲದೇ ತುಂಬ ಶಿಸ್ತಿನಿಂದ ತಿರುಗಿಸುತ್ತಿದ್ದರು. ಅವರು ಎಷ್ಟು ತನ್ಮಯರಾಗಿದ್ದರೆಂದರೆ ಅವರಿಂದ ಯಾವುದೇ ತಪ್ಪು ಆಗಲು ಸಾಧ್ಯವಿರಲಿಲ್ಲ. ನಿಶ್ಚಿತ ಸ್ಥಳದಲ್ಲಿ ನಿಂತು ಆಟವಾಡುತ್ತಿದ್ದರು. ಅವರೆಲ್ಲರಿಗೂ ಒಬ್ಬ ಮುಖಂಡನಿದ್ದನು.

ನಾವೆಲ್ಲರೂ ಬಾಲ್ಯದಲ್ಲಿ ಲಾಠಿ ತಿರುಗಿಸುವ ಅಟವಾಡುತ್ತಿದ್ದೆವು. ನಮಗೆಲ್ಲ ಈ ಅಟ ಅನಂದ ತರುತ್ತಿತ್ತು.

ಸಾಹೇಬರು: 'ಇವರಿಗೆ ಈ ಆಟ ಯಾವಾಗ ಕಲಿಸಿದಿರಿ?'

'ಸಾಹೇಬರೇ, ನಮ್ಮ ಆಟಗಳೆಲ್ಲಾ ನದಿ ದಂಡೆಯ ಮೇಲೆ ನಡೆಯುತ್ತವೆ. ತಿರುಗಾಡಲು ಹೋದಾಗ ಇಂಥ ಅನೇಕ ಆಟಗಳನ್ನು ಆಡುತ್ತೇವೆ. ಆಟಗಳನ್ನು ಆಡುತ್ತ ಆಡುತ್ತ ಮಕ್ಕಳು ಅನೇಕ ಹೊಸ ಸಂಗತಿಗಳನ್ನು ಕಲಿಯುತ್ತಾರೆ.'

ಸಾಹೇಬರು ಇಂಗ್ಲೀಷಿನಲ್ಲಿ ಹೇಳಿದರು: 'ನೀವು ಹೇಳುವುದು ನಿಜ. ಇತ್ತೀಚೆಗೆ ನಾನು ಓದಿದ್ದೇನೆ. ಮಕ್ಕಳು ಆಟದ ಮೂಲಕ ಬಹಳ ಸಂಗತಿಗಳನ್ನು ಕಲಿಯುತ್ತಾರೆ.' ಮುಖ್ಯಾಧ್ಯಾಪಕರತ್ತ ತಿರುಗಿ ಹೇಳಿದರು: 'ಶಾಲೆಯಲ್ಲಿ ನೀವು ಇವೆಲ್ಲವುಗಳನ್ನು ಏಕೆ ಪ್ರಾರಂಭಿಸಬಾರದು?'

ಮುಖ್ಯಾಧ್ಯಾಪಕರು ಹೇಳಿದರು: 'ಆದರೆ, ಸಾಹೇಬರೆ ಇವೆಲ್ಲ ಮಾಡುತ್ತಾ ಕುಳಿತರೆ ಅಭ್ಯಾಸ ಹೇಗೆ ಮುಗಿಯುತ್ತದೆ? ಇವರ ಮೇಲೆ ಯಾವ ಹೊಣೆಗಾರಿಕೆ ಇದೆ? ಒಂದು ವರ್ಷ ಹೇಗಾದರೂ ತಳ್ಳುತ್ತಾರೆ. ಸಾಧ್ಯವಾದರೆ ಓದಿಸುತ್ತಾರೆ. ಇಲ್ಲವಾದರೆ ಇದು ಒಂದು ಪ್ರಯೋಗ, ಇದರಲ್ಲಿ ಇಷ್ಟಾದುದೇ ಹೆಚ್ಚಿನದು ಎನ್ನುತ್ತಾರೆ. ನಾವು ಈ ಪಠ್ಯಕ್ರಮದ ಬೇಡಿಯಲ್ಲಿ ಸಿಕ್ಕುಬಿದ್ದಿದ್ದೇವೆ. ಅಭ್ಯಾಸ ಯಾಕೆ ಆಗಲಿಲ್ಲ ಎಂದು ನೀವೇ ನಮ್ಮನ್ನು ಕೇಳುತ್ತೀರಿ. ಫಲಿತಾಂಶ ಏಕೆ ಚೆನ್ನಾಗಿ ಬರಲಿಲ್ಲ ಎಂದು ತರಾಟೆಗೆ ತೆಗೆದುಕೊಳ್ಳುತ್ತೀರಿ.'

ಸಾಹೇಬರು ನಕ್ಕರು. ಅವರಿಗೆ ಸ್ವಲ್ಪ ಬೇಸರವೂ ಆಯಿತು. ಆದರೆ ಸುಮ್ಮನಾದರು.

ನಾನು ಸೀಟಿ ಬಾರಿಸಿದೆ. ಎಲ್ಲರೂ ಎದೆ ಸೆಟಿಸಿ ನಿಂತಿದ್ದರು. ಎಲ್ಲರೂ ಸ್ವಚ್ಛವಾಗಿದ್ದರು. ಬ್ರಾಹ್ಮಣ ಹುಡುಗರ ಮೈಮೇಲಿನ ಜನಿವಾರ ಕೊಳಕಾಗಿರಲಿಲ್ಲ. ಕೈ, ಕಾಲು, ಮುಖ, ಕೂದಲು ಎಲ್ಲವೂ ನಿರ್ಮಲವಾಗಿದ್ದವು. ಯಾರ ಕಣ್ಣುಗಳಲ್ಲಿಯೂ ಹೊಲಸಿರಲಿಲ್ಲ. ಟೊಪ್ಪಿಗೆಗಳು ಸ್ವಚ್ಛವಾಗಿದ್ದವು.

ಸಾಹೇಬರು ಕೇಳಿದರು: 'ಇದೆಷ್ಟು ದಿನಗಳ ತಯಾರಿ? ಇದಕ್ಕೆಲ್ಲ ನಿಮಗೆ ಬಹಳ ಪರಿಶ್ರಮಪಡಬೇಕಾಗಿದ್ದಿರಬಹುದು.'

ನಾನು ಹೇಳಿದೆ: 'ಆರು ತಿಂಗಳಿಂದ ತಯಾರಿ ನಡೆದಿದೆ. ತಮ್ಮಿಂದ ಯಾವ ಮಾತು ಮುಚ್ಚಿಟ್ಟಿರುವೆ?'

ನಾನು ಮತ್ತೊಮ್ಮೆ ಸೀಟಿ ಬಾರಿಸಿದೆ. ಮಕ್ಕಳು ಬಟ್ಟೆ ಧರಿಸಿ ಸಂತೋಷದಿಂದ ನಮಸ್ಕರಿಸಿ ಸಾಲಾಗಿ ಹೊರಟು ಹೋದರು.

ಮುಖ್ಯಾಧ್ಯಾಪಕರು ವ್ಯಂಗ್ಯವಾಗಿ ಕೇಳಿದರು: 'ಅಂತೂ ನಿಮ್ಮ ಪರೀಕ್ಷೆ ಮುಗಿಯಿತಲ್ಲವೇ?'

ನಾನು ಹೇಳಿದೆ: 'ಇಲ್ಲ, ಇನ್ನೂ ಇದೆ. ತಾವೆಲ್ಲ ಆ ಕೋಣೆಗೆ ನಡೆಯಿರಿ.'



ಮುಖ್ಯಾಧ್ಯಾಪಕರು ಹೇಳಿದರು: 'ಹೌದು, ಕೆಲವು ದಿನಗಳ ಹಿಂದೆ ನೀವು ಆ ಕೋಣೆಯನ್ನು ಬೇಡಿದ್ದಿರಿ. ನಮ್ಮನ್ನು ಯಾರಿಗೂ ಒಳಗೆ ಬರಲು ಬಿಡುತ್ತಿದ್ದಿಲ್ಲ. ಏನಾದರೂ ಸಿದ್ಧತೆ ಮಾಡುತ್ತಿದ್ದಿರೋ ಹೇಗೆ?'

'ನೀವು ಬಂದಾದರೂ ಬನ್ನಿ' ಎಂದೆ ನಾನು.

ನಾವೆಲ್ಲರೂ ಕೋಣೆಯೊಳಗೆ ಹೋದೆವು.

ಸಾಹೇಬರು – 'ಓಹೋ ಇದೊಂದು ಸಂಗ್ರಹಾಲಯವಾಗಿದೆ.'

ಮುಖ್ಯಾಧ್ಯಾಪಕ: 'ನಾನೂ ಅದನ್ನೇ ಊಹಿಸಿದ್ದೆ. ಏಕೆಂದರೆ ವಿದ್ಯಾರ್ಥಿಗಳು ಸಲಕರಣೆಗಳನ್ನು ತಂದು ಜೋಡಿಸುತ್ತಲೇ ಇದ್ದರು.

ನಾನು ಹೇಳಿದೆ: 'ಮಕ್ಕಳು ಬಹಳ ಉತ್ಸಾಹದಿಂದ ಈ ಕೆಲಸ ಮಾಡಿದ್ದಾರೆ. ನಿಮಗೆ ಹೇಗೆ ಬೇಕೋ ಹಾಗೆ ಶೃಂಗರಿಸಿ, ನಾನೇನೂ ನಿಮಗೆ ಸಲಹೆ–ಸೂಚನೆ ಕೊಡುವುದಿಲ್ಲ ಎಂದೂ ತಿಳಿಸಿದ್ದೆ.'

ಸಾಹೇಬರು: 'ಅಂದರೆ ಇದೆಲ್ಲ ಶೃಂಗಾರ ಮಕ್ಕಳೇ ಮಾಡಿದ್ದಾರೆಯೇ?'

'ಹೌದು.'

'ಆದರೆ ಇದು ಹೇಗೆ ಸಾಧ್ಯ? ಬಹಳ ಕಲಾತ್ಮಕವಾಗಿ ಸಜ್ಜುಗೊಳಿಸಿದ್ದಾರೆ' ಎಂದರು ಸಾಹೇಬರು. ನಾನು ಸುಮ್ಮನಿದ್ದೆ. ನನ್ನ ಕಾರ್ಯದ ಪರಿಣಾಮ ತನ್ನ ಪ್ರಭಾವವನ್ನು ತೋರಿಸುತ್ತಿತ್ತು.

ಸಾಹೇಬರು ಕೇಳಿದರು: 'ಈ ಎಲ್ಲ ವಸ್ತುಗಳನ್ನು ಹೇಗೆ ಸಂಗ್ರಹಿಸಿದಿರಿ? ಮಕ್ಕಳ ಸ್ವಭಾವಕ್ಕೆ ಇದು ಅತ್ಯಂತ ಆವಶ್ಯಕವಾಗಿದೆ.'

ಮುಖ್ಯಾಧ್ಯಾಪಕರು ಹೇಳಿದರು: 'ಇವರು ಬಹುಶಃ ಮಕ್ಕಳನ್ನು ಪ್ರವಾಸಕ್ಕೆ ಕರೆದೊಯ್ಯುತ್ತಾರೆ. ಅಲ್ಲಿಂದಲೇ ಬಹುಶಃ ಎಲ್ಲವನ್ನೂ ತಂದಿರಬಹುದು.'

ಸಾಹೇಬರು ಸಂತೃಪ್ತರಾಗಿ ಹೇಳಿದರು: 'ನಿಜವಾಗಿಯೂ ಬಹಳ ಒಳ್ಳೆಯ ಕೆಲಸವಾಗಿದೆ. ಇದನ್ನು ಕೆಡಿಸಬೇಡಿ. ಇಡೀ ಪಾಠಶಾಲೆಗೇ ಬಹಳ ಉಪಯುಕ್ತವಾಗಿದೆ. ಇದನ್ನು ಬಳಸಿಕೊಳ್ಳಿ ಎಂದು ಬೇರೆ ಶಿಕ್ಷಕರಿಗೆ ಹೇಳೋಣ', ಮುಖ್ಯೋಪಾಧ್ಯಾಯರು ಒಳಗೊಳಗೇ ಗೊಣಗುಟ್ಟಿದರು.

ಮಕ್ಕಳು ಸಂಗ್ರಹಾಲಯದಲ್ಲಿದ್ದ ವಸ್ತುಗಳ ಪಟ್ಟಿಯನ್ನು ತಯಾರಿಸಿದ್ದರು. ಸಾಹೇಬರು ಅದನ್ನು ಓದಿ ಬಹಳ ಸಂತೋಷಪಟ್ಟರು. ಈ ಮಕ್ಕಳಿಗೆ ನಿಜವಾಗಿಯೂ ಬಹುಮಾನ ಕೊಡಬೇಕು ಎಂದು ನುಡಿದರು.

'ಈ ಸಂಗ್ರಹಾಲಯವನ್ನು ಸಿದ್ಧಪಡಿಸುವಾಗ ನಮಗೆ ದೊರೆತ ಆನಂದವೇ ನಮ್ಮ ಬಹುಮಾನವಾಗಿದೆ. ಇಡೀ ಸಂಗ್ರಹಾಲಯವೇ ದೊರೆತ ಬಹುಮಾನವಾಗಿದೆ', ಎಂದು ನಾನು ಹೇಳಿದೆ.

'ಆದರೂ....'

ನಾನೇನೂ ಮಾತನಾಡಲಿಲ್ಲ.

ಕೋಣೆಯ ಒಂದು ಮೂಲೆಯಲ್ಲಿ ಮಣ್ಣಿನ ಕೆಲವು ಆಟಿಕೆಗಳಿದ್ದುವು. ಅವುಗಳನ್ನು ಯಾರು ಮಾಡಿದ್ದಾರೆಂದು ಸಾಹೇಬರು ಕೇಳಿದರು.

'ಎಲ್ಲವನ್ನೂ ಮಕ್ಕಳೇ ಮಾಡಿದ್ದಾರೆ. ಈ ಸಂಗ್ರಹಾಲಯದಲ್ಲಿ ನನ್ನದೇನೂ ಇಲ್ಲ, ಎಲ್ಲವೂ ಮಕ್ಕಳದೇ' ಎಂದೆ ನಾನು.

'ಆದರೆ ಇವರು ಈ ಆಟಕೆಗಳನ್ನು ಎಲ್ಲಿ ಯಾವಾಗ ಮಾಡಿದರು?'

'ನಾವು ಇವುಗಳನ್ನು ಪ್ರತಿವಾರ ನದಿ ದಂಡೆಯ ಮೇಲೆ ಮಾಡಿದ್ದೇವೆ. ಅಲ್ಲಿಯೇ ಭಟ್ಟಿ ತಯಾರಿಸಿ ಅವುಗಳನ್ನು ಸುಟ್ಟಿದ್ದೇವೆ.'

ಸಾಹೇಬರು: 'ಶಾಬ್ಬಾಶ್. ನಿಮ್ಮ ಬುದ್ಧಿಶಕ್ತಿ ವಿಲಕ್ಷಣವಾಗಿದೆ. ಈ ಪ್ರಯೋಗಗಳು ನಿಜವಾಗಿಯೂ ಅದ್ಭುತವಾಗಿವೆ. ಏನೂ ಸಾಧನ ಸಲಕರಣೆಗಳು ಸಿಗದಿದ್ದರೆ ನದಿ ದಂಡೆಗೆ ಓಡುತ್ತೀರಿ. ಮಣ್ಣಿನಿಂದ ಆಟಿಕೆ ಮಾಡುತ್ತೀರಿ. ನನಗೆ....'

ನಾನವರಿಗೆ ಮುಂದೆ ಮಾತನಾಡಲು ಅವಕಾಶ ನೀಡಲಿಲ್ಲ. ತಾವು ದಯಮಾಡಿ ಈ ಕೋಣೆಯಲ್ಲಿ ಸ್ವಲ್ಪ ಹೊತ್ತು ಕುಳಿತುಕೊಳ್ಳಿ. ವಿದ್ಯಾರ್ಥಿಗಳ ಮತ್ತೊಂದು ಕೆಲಸವನ್ನು ತಮಗೆ ತೋರಿಸುವೆ ಎಂದು ಹೇಳಿದೆ. ಎಲ್ಲರೂ ತಮ್ಮ ತಮ್ಮ ಸ್ಥಳಗಳಲ್ಲಿ ಕುಳಿತರು.

ಅಷ್ಟರಲ್ಲಿ ನಾನು ಕೆಲವು ರಟ್ಟಿನ ತುಂಡುಗಳನ್ನು ತೆಗೆದುಕೊಂಡು ಬಂದೆ. ಒಂದು ರಟ್ಟಿನ ಮೆಲೆ ನಾನು ಕಲಿಸಲು ಪ್ರಾರಂಭಿಸಿದಾಗಿನ ಮಕ್ಕಳ ಅಕ್ಷರಗಳ ನಮೂನೆಗಳಿದ್ದವು. ಮತ್ತೊಂದರ ಮೇಲೆ ಇದೀಗ ಬರೆದ ಅಕ್ಷರಗಳಿದ್ದವು. ಅದರ ಮೇಲೆ 'ಅಕ್ಷರ ಪ್ರಗತಿ ಸೂಚಕ ಪತ್ರಿಕೆ' ಎಂದು ಬರೆಯಲಾಗಿತ್ತು.

ಎಲ್ಲರಿಗೂ ಅಕ್ಷರಗಳ ಪ್ರಗತಿ ತೃಪ್ತಿಕರವೆನಿಸಿತು. ಆದರೆ ಒಬ್ಬ ಶಿಕ್ಷಕ ಇನ್ನೊಬ್ಬನ ಕಿವಿಯಲ್ಲುಸುರಿದ–'ಕೆಲವೇ ಚೆನ್ನಾಗಿ ಬರೆಯುವ ಮಕ್ಕಳಿಂದ ಇವುಗಳನ್ನು ಬರೆಸಿರಬಹುದು.'

ನನಗೆ ಆ ಶಿಕ್ಷಕನ ಮಾತು ಕುಟುಕಿತು. ಆದರೂ ಲಕ್ಷ್ಯಕ್ಕೆ ತೆಗೆದುಕೊಳ್ಳಲಿಲ್ಲ. ಅವರ ವಿಚಾರ ನನಗೆ ಬಹಳ ತುಚ್ಛವೆನಿಸಿತು.

ಸಾಹೇಬರು: 'ನೀವು ಈ ಬದಲಾವಣೆ ಹಾಗೂ ಸುಧಾರಣೆಗಳನ್ನು ಹೇಗೆ ಮಾಡಿದಿರಿ?'

'ಅನೇಕ ಉಪಾಯಗಳಿಂದ.'

'ನಿಮ್ಮ ಈ ಉಪಾಯಗಳನ್ನು ಶಾಲೆಯಲ್ಲಿ ಉಳಿದ ತರಗತಿಗಳಲ್ಲಿ ಏಕೆ ಜಾರಿಯಲ್ಲಿ ತರಬಾರದು?' ಎಂದು ಸಾಹೇಬರು ಕೇಳಿದರು.

'ಅವಶ್ಯವಾಗಿ ತರಬಹುದು. ನಾನು ತಮಗೆ ಇದು ಸಾಧ್ಯವೆಂದು ತೋರಿಸಬಲ್ಲೆ.'

ಬಳಿಕ ನಾನು ಮತ್ತೊಂದು ಪುಸ್ತಕವನ್ನು ತಂದೆ. ಅದರಲ್ಲಿ ಕಳೆದ ಆರು ತಿಂಗಳುಗಳಲ್ಲಿ



ಮಕ್ಕಳು ಎಷ್ಟು, ಪುಸ್ತಕಗಳನ್ನು ಓದಿದ್ದಾರೆ ಎನ್ನುವುದನ್ನು ನಮೂದಿಸಲಾಗಿತ್ತು. ಪುಸ್ತಕದ ಪ್ರತಿ ಪುಟದಲ್ಲಿಯೂ ಒಬ್ಬೊಬ್ಬ ವಿದ್ಯಾರ್ಥಿಯ ಹೆಸರಿತ್ತು. ಅದರಲ್ಲಿ ಅವನು ತಾನು ಓದಿದ ಪುಸ್ತಕಗಳ ಹೆಸರುಗಳನ್ನು ಬರೆದಿದ್ದನು.

ಇದರ ಮೇಲಿಂದ ನಾನು ಕೊನೆಯ ಪುಟದಲ್ಲಿ ಎಷ್ಟು ವಿದ್ಯಾರ್ಥಿಗಳು ಎಷ್ಟು ಪುಸ್ತಕಗಳನ್ನು ಓದಿದರು. ಎಲ್ಲಕ್ಕಿಂತ ಹೆಚ್ಚು ಪುಸ್ತಕಗಳನ್ನು ಯಾರು ಓದಿದರು. ಯಾರು ಕಡಿಮೆ ಓದಿದರು, ಯಾವ ಪುಸ್ತಕವನ್ನು ಹೆಚ್ಚಾಗಿ ಓದಿದರು? ಎಂಬುದರ ಅಂಕಿ–ಅಂಶಗಳನ್ನು ಸಿದ್ಧಪಡಿಸಿ ಪುಸ್ತಕಗಳ ವರ್ಗೀಕರಣ ಮಾಡಿ ಮಕ್ಕಳಿಗೆ ಯಾವ ವಿಷಯದ ಪುಸ್ತಕಗಳು ಹೆಚ್ಚಾಗಿ ಹಿಡಿಸುತ್ತವೆ ಎಂಬುದನ್ನು ವಿವರಿಸಿದ್ದೆ.

ಸಾಹೇಬರು ಪಟ್ಟಿ ನೋಡಿದರು. ಅವರಿಗೆ ಆಶ್ಚರ್ಯವಾಯಿತು. 'ಇಷ್ಟೊಂದು ಪುಸ್ತಕಗಳನ್ನು ಅದೂ ಈ ಎಲ್ಲ ವಿಷಯಗಳ ಬಗ್ಗೆ ಓದಿದ್ದಾರೆಯೇ? ಯಾವಾಗ ಓದಿದ್ದಾರೆ?' ಎಂದು ಆಶ್ಚರ್ಯ ವ್ಯಕ್ತಪಡಿಸಿದರು.

'ನನ್ನ ಕಣ್ಣೆದುರಿಗೇ ಅವರು ಈ ಎಲ್ಲ ಪುಸ್ತಕಗಳನ್ನು ಓದಿದ್ದಾರೆ' ಎಂದು ಹೇಳಿದೆ.

ಸಾಹೇಬರು: 'ಮುಖ್ಯಾಧ್ಯಾಪಕರೇ, ನಮ್ಮ ಏಳನೇ ತರಗತಿಯ ವಿದ್ಯಾರ್ಥಿಗಳು ಈ ಆರು ತಿಂಗಳುಗಳಲ್ಲಿ ಎಷ್ಟು ಪುಸ್ತಕಗಳನ್ನು ಓದಿರಬಹುದು?'

ಮುಖ್ಯಾಧ್ಯಾಪಕರು: 'ಹೇಗೆ ಓದುತ್ತಾರೆ ಸಾಹೇಬರೇ? ಬೇರೆ ಪುಸ್ತಕ ಓದುತ್ತ ಕುಳಿತರೆ. ಇತಿಹಾಸ, ಭೂಗೋಳ, ರೇಖಾಗಣಿತ ಮುಂತಾದವುಗಳ ಗತಿ ಏನು? ಇವನ್ನೆಲ್ಲಾ ಯಾವಾಗ ಅಭ್ಯಾಸ ಮಾಡಬೇಕು?' ಸಾಹೇಬರು ಮಾತನಾಡಲಿಲ್ಲ. ಆದರೂ ಸ್ವಲ್ಪ ಚಿಂತೆಗೊಳಗಾದರು. ನನ್ನನ್ನು ನೋಡಿ ಹೇಳಿದರು. 'ನಿಮ್ಮ ವಿದ್ಯಾರ್ಥಿಗಳನ್ನು ಪರೀಕ್ಷೆಯಿಲ್ಲದೆ ಭಾಷೆಯಲ್ಲಿ ಪಾಸು ಮಾಡಲಾಗುತ್ತಿದೆ. ಮತ್ತೇನು ಉಳಿಯಿತು ಹೇಳಿ.'

ನಾನು ವಿದ್ಯಾರ್ಥಿಗಳ ಒಂದು ಹಸ್ತ–ಲಿಖಿತ ಮಾಸಿಕ ಪತ್ರಿಕೆಯನ್ನು ಅವರ ಮುಂದಿಟ್ಟೆ.

ಸಾಹೇಬರು ಕೇಳಿದರು–'ಈ ಎಲ್ಲಾ ಲೇಖನಗಳನ್ನು ವಿದ್ಯಾರ್ಥಿಗಳೇ ಬರೆದಿದ್ದಾರೆಯೇ?'

'ಹೌದು'.

'ಈ ಒಂದೆರಡು ಕವಿತೆಗಳನ್ನು ಕೂಡ.'

'ಹೌದು, ಇದೀಗ ನನ್ನ ವಿದ್ಯಾರ್ಥಿಗಳು ಕವಿತೆಗಳನ್ನು ಬರೆಯುವ ಪ್ರಯತ್ನ ಮಾಡುತ್ತಿದ್ದಾರೆ.'

'ಆದರೆ ಅವರ ಕವಿತೆಗಳನ್ನು ನೀವು ತಿದ್ದಿರುವಿರೋ ಇಲ್ಲವೋ?'

'ಇದುವರೆಗೂ ತಿದ್ದಿಲ್ಲ. ಹೇಗೆ ಬರೆದಿದ್ದಾರೋ ಹಾಗೆಯೇ ಪ್ರಕಟಿಸಿರುವೆವು.'

'ಆದರೆ ಮಕ್ಕಳು ಇವುಗಳನ್ನು ತಾವೇ ಬರೆಯುತ್ತಾರೋ ಅಥವಾ ಬೇರೆಲ್ಲಿಂದಾದರೂ



ನಿಮಗೆ ತೋಚಿದ್ದನ್ನು ಬರೆಯಿರಿ, ನಿಮಗೆ ಇಷ್ಟ ಬಂದದ್ದನ್ನು ಬರೆಯಿರಿ,
ಬರೆದಿದ್ದನ್ನೆಲ್ಲಾ ಪ್ರಕಟಿಸಿ ಎಂದು ಅವರಿಗೆ ಹೇಳುತ್ತೇನೆ.

ತಂದು ಸೇರಿಸುತ್ತಾರೋ ಎಂಬುದು ನಿಮಗೆ ಹೇಗೆ ಗೊತ್ತಾಗುತ್ತದೆ?'

'ನಿಮಗೆ ತಿಳಿದದ್ದನ್ನು ಬರೆಯಿರಿ; ಬೇಕಾದದ್ದು ಬರೆಯಿರಿ. ಎಲ್ಲವನ್ನೂ ಪ್ರಕಟಿಸುವೆ ಎಂದು ಅವರಿಗೆ ಹೇಳಿರುವಾಗ ಬೇರೆಯ ಕಡೆಯಿಂದ ಕದಿಯುವ ಪ್ರಸಂಗವಾದರೂ ಏಕೆ ಬರುತ್ತದೆ?'

ಸಾಹೇಬರು: 'ಇದನ್ನು ವಿಶೇಷವಾಗಿ ಆರು ತಿಂಗಳ ಪರೀಕ್ಷೆಗಾಗಿ ಸಿದ್ಧಪಡಿಸಿರುವಿರಾ?'

'ಇಲ್ಲ, ಕಳೆದ ಮೂರು ತಿಂಗಳಿಂದ ಪ್ರತಿ ತಿಂಗಳೂ ಈ ಪತ್ರಿಕೆ ಹೊರಡುತ್ತಿದೆ. ಆದರೆ ಇದನ್ನು ತಯಾರಿಸುವಾಗ ಆರು ತಿಂಗಳ ಪರೀಕ್ಷೆಯನ್ನು ಲಕ್ಷ್ಯದಲ್ಲಿ ಇಟ್ಟುಕೊಳ್ಳಲಾಗಿದೆ. ಆದರೆ ಪರೀಕ್ಷೆಗಾಗಿಯೇ ಇದನ್ನು ಸಿದ್ಧಪಡಿಸಿದ್ದೇವೆ ಎನ್ನುವುದು ನಿಜವಲ್ಲ.'

ಸಾಹೇಬರು ಸಂತೋಷದಿಂದ ತಲೆ ಅಲ್ಲಾಡಿಸುತ್ತ ಬಹಳ ಸುಂದರವಾದ ಕೆಲಸವೆಂದು ಹೊಗಳಿದರು. ಮತ್ತೆ ನನ್ನನ್ನು ಕಾಣಿ ಎಂದು ಹೇಳಿದರು. ನೀವು ಅದ್ಭುತ ಕಾರ್ಯ ಮಾಡಿ ತೋರಿಸಿದ್ದೀರಿ. ಆರು ತಿಂಗಳಲ್ಲಿ ಎಲ್ಲಿಂದ ಎಲ್ಲಿಗೆ ತಲುಪಿದ್ದೀರಿ !

ಮುಖ್ಯಾಧ್ಯಾಪಕರು ಮೆಲ್ಲನೆ ನುಡಿದರು: 'ಇನ್ನು ಗಣಿತ, ಭೂಗೋಳ ಇತಿಹಾಸದ ಪರೀಕ್ಷೆಗಳನ್ನು ಯಾವಾಗ ಮಾಡುವಿರಿ? ನಾವು ಮಧ್ಯಾಹ್ನ ಬರೋಣವೇ?'



ಬಹುಶಃ ಮುಖ್ಯಾಧ್ಯಾಪಕರು ನನ್ನ ಕಾಲೆಳೆಯ ಬಯಸಿರಬಹುದು. ನಾನು ಭೂಗೋಳ, ಗಣಿತದ ವಿಷಯಗಳನ್ನು ಇನ್ನೂ ಕಲಿಸಿಲ್ಲ ಎನ್ನುವುದು ಬಹುಶಃ ಅವರಿಗೆ ಗೊತ್ತಾಗಿರಬಹುದು.

ನಾನು ಹೇಳಿದೆ: 'ಭೂಗೋಳ, ಗಣಿತದ ವಿಷಯಗಳ ಬಗ್ಗೆ ಕೆಲಸ ಮಾಡಲಾಗಿಲ್ಲ, ಆದರೆ ವರುಷ ಮುಗಿಯುವುದರೊಳಗೆ ಮಾಡಿ ತೋರಿಸುವೆ. ಇತಿಹಾಸದಲ್ಲಿ ಸ್ವಲ್ಪ ಕೆಲಸವಾಗಿದೆ.

ಮುಖ್ಯಾಧ್ಯಾಪಕರು: 'ಹಾಂ ಹಾಗೆ ಹೇಳಿ; ಅಂತೂ ಇನ್ನೂ ಮುಖ್ಯವಾದ ವಿಷಯಗಳೇ ಉಳಿದಿವೆ ಎಂದಾಯಿತು.'

ಸಾಹೇಬರು: 'ಮುಖ್ಯಾಧ್ಯಾಪಕರೇ, ಅವು ನಿಮ್ಮ ದೃಷ್ಟಿಯಲ್ಲಿ ಮುಖ್ಯ ವಿಷಯಗಳಾಗಿರಬಹುದು. ಇವರ ದೃಷ್ಟಿಯಲ್ಲಿ ಅಲ್ಲ. ಇತಿಹಾಸ, ಭೂಗೋಳ, ಗಣಿತ, ಅಂಕಿ, ಮಗ್ಗಿ, ಕಲಿಸಿದರೆ ನಿಮ್ಮ ಅಭ್ಯಾಸ ಮುಗಿದಂತೆ ಆಯಿತು. ಹೌದೋ ಅಲ್ಲವೋ?'

ಸಾಹೇಬರು ಆನಂದದಿಂದ ಇದ್ದುದನ್ನು ನೋಡಿ ಮುಖ್ಯಾಧ್ಯಾಪಕರು ನುಡಿದರು. 'ಆದರೆ ತಮ್ಮ ದೃಷ್ಟಿಯೂ ಅದೇ ಆಗಿದೆಯಲ್ಲ ಸಾಹೇಬರೆ. ತಾವು ಇದೇ ವಿಷಯಗಳ ಪರಿಣಾಮವನ್ನು ಕೇಳುತ್ತೀರಿ.'

ಎಲ್ಲರೂ ಹಾಸ್ಯ ಮಾಡುತ್ತ ಎದ್ದು ಹೋದರು. ನನ್ನ ತರಗತಿಯ ಅರ್ಧವಾರ್ಷಿಕ ಪರೀಕ್ಷೆ ಮುಗಿಯಿತು. ಹೋಗುತ್ತ ಸಾಹೇಬರು ನುಡಿದರು. ನಿಮ್ಮ ಪ್ರಶ್ನೆ ಪತ್ರಿಕೆ ಎಲ್ಲಿದೆ?

'ಅದನ್ನು ತಯಾರಿಸಿಲ್ಲ, ಸಾಹೇಬರೇ' ಎಂದೆ.

ಸಾಹೇಬರು– ಆಗಲಿ ನಿಮ್ಮ ತರಗತಿಯನ್ನೇ ಪರೀಕ್ಷೆಯಿಂದ ಮುಕ್ತಗೊಳಿಸಲಾಗಿದೆ.

# ನಾಲ್ಕನೆಯ ಖಂಡ

# ಅಂತಿಮ ಸಮ್ಮೇಳನ

## 1

ಆರು ತಿಂಗಳ ಪರೀಕ್ಷೆ ಮುಗಿದಿತ್ತು. ನನ್ನ ಶಾಲೆಯ ಸಹ ಶಿಕ್ಷಕರೊಂದಿಗೆ ಒಂದು ದಿನ ಮಾತನಾಡುತ್ತ ಕುಳಿತಾಗ ಚಂದ್ರಶೇಖರ ಹೇಳಿದರು: 'ನಿಜವಾಗಿಯೂ ತಾವೊಬ್ಬ ವಿಚಿತ್ರ ಮನುಷ್ಯರೆಂದು ನನಗನಿಸುತ್ತದೆ. ತಮ್ಮ ಪ್ರಯೋಗಗಳು ಸಫಲಗೊಂಡಿವೆ ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಪ್ರಾಥಮಿಕ ಶಾಲೆಯಲ್ಲಿಯ ಶಿಕ್ಷಣದಲ್ಲಿಯೂ ಇಂತಹ ಪರಿವರ್ತನೆ ಮಾಡಲು ಸಾಧ್ಯ ಎಂದು ನಮಗೆ ನಿಜವಾಗಿಯೂ ಅನಿಸಿರಲಿಲ್ಲ.'

ಭದ್ರಾ ಶಂಕರರು ಹೇಳಿದರು: 'ಇವರು ಇಂಗ್ಲೀಷ್ ಕಲಿತವರಲ್ಲವೇ, ಇಂಗ್ಲೀಷ್ ಪುಸ್ತಕಗಳನ್ನು ಓದಿ ಓದಿ ಹೊಸ ಹೊಸ ಪ್ರಯೋಗಗಳನ್ನು ಮಾಡುತ್ತಾರೆ.'

ಚಂಪಕಲಾಲರು ನುಡಿದರು: 'ಅದಂತೂ ಸರಿಯೇ, ಆದರೆ ಎಲ್ಲರಿಗೂ ಹಾಗೆ ಮಾಡಲು ಸಾಧ್ಯವಿಲ್ಲ. ಇವರಿಗೆ ಹಣಕಾಸಿನ ಚಿಂತೆ ಇಲ್ಲ, ಪರಿಣಾಮದ ಕಾಳಜಿ ಇಲ್ಲ, ಒಂದು ವೇಳೆ ಇವರಿಗೆ ಯಶಸ್ಸು ದೊರೆಯದೆ ಹೋದರೂ ಇವರಿಗೆ ಯಾವ ಶಿಕ್ಷೆಯೂ ಇಲ್ಲ.'

ದೇಶೀಲಾಲ ಹೇಳಲಾರಂಭಿಸಿದರು: 'ಪ್ರಯೋಗ ಮಾಡುವುದಾದರೂ ಯಾವಾಗ? ಇಲ್ಲಿ ಪುರುಸೊತ್ತು ಯಾರಿಗಿದೆ? ಇಷ್ಟೆಲ್ಲ ಸಂಗತಿಗಳನ್ನು ಯೋಜಿಸಿ ಸಿದ್ಧತೆ ಮಾಡಲು ವೇಳೆ ಯಾರ ಬಳಿ ಇದೆ?

'ನಾವಾದರೂ ಏನು ಮಾಡೋಣ, ಮನೆಪಾಠ ಬಿಡುವ ಹಾಗಿಲ್ಲ, ಸಂಜೆಯಾಗುತ್ತಲೇ ನಿತ್ಯವೂ ದೊಡ್ಡ ಸಾಹೇಬರ ಮನೆಗೆ ಹಾಜರಿ ಹಾಕಬೇಕಾಗುತ್ತದೆ. ಮನೆಯಲ್ಲಿ ಮಕ್ಕಳು ಮರಿಗಳ ಪೋಷಣೆ. ಇಷ್ಟೆಲ್ಲಾ ಮಾಡಿದ ಮೇಲೆ ನಮಗೆ ವೇಳೆ ಎಲ್ಲಿದೆ?. ಇವರು ಒಬ್ಬರೇ ಇದ್ದಾರೆ, ಹಿಂದಿಲ್ಲ ಮುಂದಿಲ್ಲ ಎಲ್ಲಾ ಮಾಡ್ತಾರೆ.'

ಕೊನೆಗೆ ಹೇಳಿದೆ: 'ನಾವು ನಮ್ಮ ಪ್ರಾಥಮಿಕ ಶಾಲೆಯ ಸ್ವರೂಪವೇ ಬದಲಾಗುವಷ್ಟು ಕಾಯಕಲ್ಪವಾಗುವಂತಹ ಕೆಲಸ ಮಾಡಿ ತೋರಿಸಬಹುದು. ಇಂದಿನ ಶಿಕ್ಷಣದ



ಸ್ವರೂಪವನ್ನೇ ಬದಲಾಯಿಸಬಹುದು. ಆದರೆ ನಮ್ಮಲ್ಲಿ ಕೆಲಸ ಮಾಡುವವರ ಕೊರತೆ ಇದೆ. ಪ್ರಪಂಚ ಮೊದಲು ಹೀಗಿರಲಿಲ್ಲ, ಇದನ್ನು ಬದಲಾಯಿಸಿದವರಾರು? ಮನುಷ್ಯರೇ ಅಲ್ಲವೇ? ಶ್ರದ್ಧೆ ಬೇಕು, ಆತ್ಮವಿಶ್ವಾಸ ಬೇಕು, ಅಖಂಡ ಏಕಾಗ್ರತೆ ಬೇಕು, ಪ್ರಯೋಗ ಮಾಡಬೇಕಾದರೆ ಇಂಗ್ಲಿಷ್ ಕಲಿಯಬೇಕು ಎಂದೇನೂ ಇಲ್ಲ. ಇವೆಲ್ಲಾ ಪೊಳ್ಳು ಮಾತು. ಮಾಡಲು ಮನಸ್ಸಿರದಿದ್ದಾಗ ನಾವು ಇಂಥ ಕುಂಟುನೆಪ ಹೇಳುತ್ತೇವೆ. ಬೇಕಾಗಿರುವುದು ಕೆಲಸದ ಬಗ್ಗೆ ಶ್ರದ್ಧೆ. ಚಂಪಕಲಾಲರೇ, ಪರಿಣಾಮದ ಚಿಂತೆ ಪ್ರಯೋಗ ಮಾಡುವವನಿಗಿರುವಷ್ಟು ಬೇರೆಯವರಿಗಿರುವುದಿಲ್ಲ. ತಾವು ಸಂಬಳ ಹೆಚ್ಚಾಗಲಿ ಎಂದು ಒಳ್ಳೆಯ ಫಲಿತಾಂಶವನ್ನು ಬಯಸುತ್ತೀರಿ. ನಾನು ಪ್ರಯೋಗಕ್ಕಾಗಿ ಪ್ರಯೋಗ ಮಾಡುತ್ತೇನೆ. ಆದ್ದರಿಂದ ನನ್ನ ಉದ್ದೇಶ ಈಡೇರಿಸಲು ಬೇಕಾದ ಕಾರ್ಯಕ್ಷೇತ್ರ ವಿಶಾಲವಾಗುತ್ತದೆ.

ನನ್ನ ಅಪಯಶಸ್ಸು ನನ್ನ ನಂತರ ಪ್ರಯೋಗ ಮಾಡಬಯಸುವವರಿಗೆ ಬಾಧಕವಾಗಬಾರದೆಂಬ ಚಿಂತೆ ಯಾವಾಗಲೂ ನನ್ನನ್ನು ಕಾಡುತ್ತಿರುತ್ತದೆ. ದೇಶೀಲಾಲರೇ, ಕಾಡು ಹರಟೆ ಹೊಡೆಯಲು, ಗುಂಪಿನಲ್ಲಿ ಕೂಡಲು ಯಾರಿಗಾದರೂ ಸಮಯ ಬೇಕಾಗುತ್ತದೆಯೇ? ಅವೇನು ಮಹಾದೊಡ್ಡ ಕೆಲಸಗಳೇ? ದೊಡ್ಡ ಸಾಹೇಬರ ಮನೆಗೆ ನೀವು ದಿನವೂ ಹಾಜರಿ ಹಾಕುವ ಆವಶ್ಯಕತೆಯಾದರೂ ಏನಿದೆ? ನೀವು ಒಳ್ಳೆಯ ಕೆಲಸ ಮಾಡಿ ತೋರಿಸಿದರೆ ಅವರು ತಾವೇ ಸಂತುಷ್ಟರಾಗುತ್ತಾರೆ. ಮುಖಸ್ತುತಿಯಿಂದ ಯಾರೂ ಸಂತುಷ್ಟರಾಗಲಾರರು. ತಮ್ಮ ಕೆಲಸ ಮಾಡಲರಿಯದವರು ಮುಖಸ್ತುತಿಯಲ್ಲಿ ತೊಡಗುತ್ತಾರೆ. ಶಾಲೆಯಲ್ಲಿಯೇ ಚೆನ್ನಾಗಿ ಕಲಿಸಿದರೆ ಮನೆಪಾಠ ಮಾಡುವ ಅಗತ್ಯವಾದರೂ ಏನು? ನಾವು ಸರಿಯಾಗಿ ಕಲಿಸದಿದ್ದರೆ, ಮನೆಪಾಠ ಬೇಕಾಗುತ್ತದೆ.'

ಶಿವಶಂಕರರು ಮಾತು ಮುರಿದು ಹೇಳಿದರು: 'ಕಡಿಮೆ ಸಂಬಳ ಪಡೆಯುವವರ ಗತಿ ಏನು?'

'ನಿಮಗೇನೋ ಕೈತುಂಬಾ ಸಂಬಳ ಬರುತ್ತದೆ. ಇಲ್ಲಿ ನಮ್ಮ ಜೀವನ ಸಾಗುವುದೇ ಕಠಿಣವಾಗಿದೆ.'

'ತಾವೂ ಹೆಚ್ಚು ವೇತನ ಬೇಡಿ, ದೊರೆಯುವುದು.'

'ಹಾಂ ಹಾಂ ದೊರೆಯುವುದು ವೇತನ ಅಲ್ಲ, ನೌಕರಿಯಿಂದ ಬಿಡುಗಡೆ' ಎಂದರು ವಿಶ್ವನಾಥ.

ನಾನು ಹೇಳಿದೆ: 'ಎಲ್ಲರೂ ಕೂಡಿಕೊಂಡು ಬೇಡಿದರೆ, ಹೇಗೆ ನೌಕರಿಯಿಂದ ತೆಗೆಯುತ್ತಾರೆ? ಅವರು ತೆಗೆಯುವ ಮೊದಲೇ ನೀವೇ ಏಕೆ ಬೇರೆ ಆಗಬಾರದು? ಇಂಥ ವಿಷಯದಲ್ಲಿ ಅನಾಸಕ್ತಿಯನ್ನು ರೂಢಿಸಿಕೊಳ್ಳಿ. ನಾನು ಹಾಗೆಯೇ ಇದ್ದೇನೆ.'

'ಮುಂದೆ ಹೊಟ್ಟೆ ಪಾಡು?' ಎಂದು ಭದ್ರಾಶಂಕರರು ಕೇಳಿದರು.

'ಹೊಟ್ಟೆಪಾಡು? ಹುಟ್ಟಿಸಿದ ದೇವರು ಹುಲ್ಲು ಮೇಯಿಸುವುದಿಲ್ಲ. ಸ್ವಲ್ಪ ಧೈರ್ಯ

ಬೇಕು. ಕೆಲಸಗಳಿಗೇನು ಕೊರತೆ? ಕಸ ಗುಡಿಸಿಯಾದರೂ ನಾನು ಹೊಟ್ಟೆ ಹೊರೆಯಬಲ್ಲೆ. ನಿಮ್ಮಂತೆ ಅರ್ಧ ಹೊಟ್ಟೆಯಿಂದಿರುವುದು ನನ್ನಿಂದಾಗದು. ನಿಮ್ಮದೂ ಒಂದು ಸಂಬಳವೆ?' ಎಂದು ಕೇಳಿದೆ.

ವಿಶ್ವನಾಥ: 'ಒಂದು ಸ್ಥಳ ಖಾಲಿಯಾದರೆ ನೂರು ಜನ ಮುಗಿಬೀಳುತ್ತಾರೆ, ನಿಮಗಿದು ಗೊತ್ತಿದೆಯೆ?'

'ಈ ರೀತಿ ಮುಗಿಬೀಳುವವರನ್ನು ನಾವು ವಿರೋಧಿಸಬೇಕು. ನಾವು 'ಚಾರ್ಜ್' ಕೊಟ್ಟರೆ ತಾನೆ ಅವರು ಕೆಲಸ ಮಾಡುವುದು. ಹೊಸಬರಿಗೆ ನಾವೇಕೆ ನಮ್ಮ 'ಚಾರ್ಜ್' ತೆಗೆದುಕೊಳ್ಳಲು ಬಿಡಬೇಕು? ಇಪ್ಪತ್ನಾಲ್ಕು ಗಂಟೆ ಶಾಲೆಯ ಪಹರೆ ಮಾಡೋಣ. ಆದರೆ ನಾವು ಬಿದ್ದ ತಗ್ಗಿನಲ್ಲಿ ನೀವು ಬೀಳುವುದು ಬೇಡ ಎಂದು ಅವರ ಕಾಲಿಗೆ ಬಿದ್ದು ಬೇಡಿಕೊಳ್ಳೋಣ. ಮಹಾಶಯರೇ ತಿರುಗಿ ಹೋಗಿ. ಬೇರೆ ಕೆಲಸ ಹುಡುಕಿ. ಈ ಉಪವಾಸ ಸಾಯುವ ಕೆಲಸದಲ್ಲಿ ಸಿಕ್ಕಿ ಬೀಳದಿರಿ. ಇದರಿಂದ ದೂರವಿರಿ' ಎಂದು ತಿಳಿಸಿ ಹೇಳೋಣ.

ಎರಡು ಗಂಟೆಯವರೆಗೆ ಹೀಗೆಯೇ ಚರ್ಚೆ ನಡೆಯುತ್ತಿತ್ತು. ಎಲ್ಲ ಶಿಕ್ಷಕರೂ ತುಂಬಾ ಉತ್ಸಾಹದಲ್ಲಿದ್ದರು. ಗುಲಾಮಗಿರಿಯ ಕೆಲವು ಬೇರುಗಳಾದರೂ ಸಡಿಲವಾದವು ಎಂದು ನನಗನ್ನಿಸಿತು.

## 2

ಈಗ ನಾನು ಭೂಗೋಳ ಕಲಿಸುವ ಬಗೆಗೆ ಯೋಚಿಸಲಾರಂಭಿಸಿದೆ. ಭೂಗೋಳದ ಪುಸ್ತಕ ನೋಡಿ ನಿರಾಶೆಯಿಂದ ಅದನ್ನು ಬದಿಗಿಟ್ಟುಬಿಟ್ಟೆ. ಪಠ್ಯಕ್ರಮ ನೋಡಿ ಹತಾಶಗೊಂಡೆ. ಮಕ್ಕಳಿಗೆ ನದಿ, ಪರ್ವತಗಳ ಹೆಸರುಗಳನ್ನೇಕೆ ಬಾಯಿಪಾಠಮಾಡಿಸಬೇಕು? ನನಗಾದರೂ ಇವು ಎಲ್ಲಿ ನೆನಪಿವೆ? ನಿನ್ನೆ ಸ್ವತಃ ಡೆಪ್ಯುಟಿ ಡೈರೆಕ್ಟರ ಸಾಹೇಬರೇ ನಕಾಶೆಯಲ್ಲಿ ಅಸ್ಟ್ರೇಲಿಯಾದ ಮಾರ್ಗವನ್ನು ಹುಡುಕುತ್ತಿದ್ದರು. ಚಿಕ್ಕವರಿದ್ದಾಗ ಬಾಯಿಪಾಠಮಾಡಿದ ಭೂಗೋಳ ಯಾರಿಗೆ ನೆನಪಿರುತ್ತದೆ? ಈ ಭೂಗೋಳವನ್ನು ಕಲಿಸದಿದ್ದರೆ ಏನಾಗುತ್ತದೆ ಎಂದು ಆಲೋಚಿಸಿದೆ. ನಾನು ಆಫ್ರಿಕಾಕ್ಕೆ ಹೋದಾಗಲೇ ನನಗೆ ನಿಜವಾದ ಭೂಗೋಳದ ಪರಿಚಯವಾದದ್ದು. ಆಮೇಲೆಯೇ ನನ್ನ ಭೌಗೋಳಿಕ ಕಣ್ಣು ತೆರೆದದ್ದು. ಇಂದು ನನಗೆ ಭೂಗೋಳವೆಂದರೆ ಬಹಳ ಆಸಕ್ತಿ. ಅದು ಅತ್ಯಂತ ಉಪಯುಕ್ತವಾದದ್ದು ಎಂದು ನನ್ನ ಅಭಿಪ್ರಾಯ. ಆದರೆ ಇದನ್ನೆಲ್ಲ ವಿದ್ಯಾರ್ಥಿಗಳಿಗೆ ಈಗಿಂದಲೇ ಕಲಿಸುವುದೇಕೆ? ಆ ಪಠ್ಯಕ್ರಮವನ್ನಂತೂ ನಾನು ಅನುಸರಿಸಿಲಾರೆ. ಇದನ್ನು ನೋಡಿದರೆ ನಗೆ ಬರುತ್ತದೆ. ಹಾಗಾದರೆ ಡೈರೆಕ್ಟರನ್ನು ಭೆಟ್ಟಿಯಾಗಲೇ? ವಿದ್ಯಾರ್ಥಿಗಳಲ್ಲಿ ಭೌಗೋಳಿಕ ದೃಷ್ಟಿ ಹಾಗೂ ರುಚಿಯನ್ನು ಬೆಳೆಸಲು ಅವರ ಅನುಮತಿ ಕೇಳಲೇ?



ಡೆಪ್ಯುಟಿ ಡೈರೆಕ್ಟರ್ ಬಳಿ ಹೋದೆ.

'ಏಕೆ ಬಂದಿರಿ?' ಎಂದು ಕೇಳಿದರು ಸಾಹೇಬರು.

'ಪಠ್ಯಕ್ರಮದಿಂದ ಈ ಭೂಗೋಳ ವಿಷಯವನ್ನು ತೆಗೆದುಬಿಟ್ಟರಾಗುವದಿಲ್ಲವೇ?' ಎಂದು ಕೇಳಿದೆ.

'ಸಾಧ್ಯವಿಲ್ಲ. ಪಠ್ಯಕ್ರಮದಲ್ಲಿ ಭೂಗೋಳ ಅತ್ಯಂತ ಮಹತ್ವದ ವಿಷಯ. ಇತಿಹಾಸಕ್ಕಿಂತ ಭೂಗೋಳದ ಪ್ರಯೋಜನ ಹೆಚ್ಚಾಗಿದೆ. ನಮ್ಮ ಪ್ರಯೋಗಗಳ ಪ್ರಕಾರ ಯಾವುದೇ ವಿಷಯವನ್ನೂ ಬಿಡುವ ಹಾಗಿಲ್ಲ. ಚೆನ್ನಾಗಿ ಕಲಿಸುವುದು ನಮ್ಮ ಉದ್ದೇಶ. ನಿಮಗೆ ಬೇಕಾದ ರೀತಿಯಿಂದ ಕಲಿಸಬಹುದು. ಭೂಗೋಳ ಒಂದು ಸರಳವಾದ ವಿಷಯ ಎನ್ನುವುದನ್ನು ಬೇರೆ ಶಿಕ್ಷಕರಿಗೆ ತಿಳಿಸಿ ಹೇಳಿ. ನಿಮ್ಮ ಪ್ರಯೋಗಗಳ ಮಹತ್ವ ಇದರಲ್ಲಿಯೇ ಅಡಗಿದೆ ಎಂದು ನನ್ನ ಅಭಿಪ್ರಾಯ' ಎಂದರು.

ಡೈರೆಕ್ಟರ್ ಸಾಹೇಬರು ಅತ್ಯಂತ ಕೌಶಲ್ಯದಿಂದ ನನ್ನ ಬಾಯಿ ಮುಚ್ಚಿಸಿದರು. 'ಅದು ಸರಿ, ಆದರೆ ಈ ಪಠ್ಯಕ್ರಮ, ಈ ಪಠ್ಯಪುಸ್ತಕಗಳನ್ನು ನಾನು ಅನುಸರಿಸಲಾರೆ. ನಾನು ನನ್ನದೇ ರೀತಿಯಿಂದ ತಮ್ಮನ್ನು ನಿರಾಶೆಗೊಳಿಸದಂತೆ ಭೂಗೋಳ ಕಲಿಸುವೆ.'

'ನಾನೆನ್ನುವುದೂ ಅದೇ' ಅಂದರು ಸಾಹೇಬರು.

ಸ್ವಲ್ಪ ಹೊತ್ತಿನ ನಂತರ ಅವರು ನನ್ನನ್ನು ಕೇಳಿದರು: 'ಲಕ್ಷ್ಮೀಶಂಕರ್, ಪರೀಕ್ಷೆಗಳ ಬಗೆಗೆ ನಿಮ್ಮ ಅಭಿಪ್ರಾಯವೇನು? ಹೊಸ ಶಿಕ್ಷಣ ಪದ್ಧತಿಯ ಸಮರ್ಥಕರು ಪರೀಕ್ಷೆಯ ಪದ್ಧತಿಯನ್ನು ರೂಪಿಸುವಾಗ ವಿರೋಧಿಸುತ್ತಾರೆ. ನಿಜವಾಗಿಯೂ ಅದರಿಂದಾಗುವ ಅನಾಹುತಗಳೂ ಅಷ್ಟೇ ಅಧಿಕವಾಗಿವೆ. ಆದರೆ ನಾವು ಶಿಕ್ಷಣ ವಿಭಾಗವನ್ನು ನಡೆಸಬೇಕಾಗಿದೆ. ಪರೀಕ್ಷೆಯನ್ನು ದೂರವಿಡುವುದು ಹೇಗೆ? ನಮಗೆ ಫಲಿತಾಂಶದ ಆವಶ್ಯಕತೆ ಇದೆ. ಪರೀಕ್ಷೆ ತೆಗೆದುಕೊಳ್ಳದೆ ಹೋದರೆ ಶಿಕ್ಷಕರು ಮನಸ್ಸು ಕೊಟ್ಟು ಕಲಿಸುವುದನ್ನೇ ಬಿಟ್ಟಾರು. ಪ್ರಾಮಾಣಿಕನಾದ ಶಿಕ್ಷಕನು ಕಲಿಸುತ್ತಿದ್ದರೆ ಅವನು ಚೆನ್ನಾಗಿ ಕಲಿಸುತ್ತಾನೋ ಇಲ್ಲವೋ ಎನ್ನುವುದು ಪರೀಕ್ಷೆ ತೆಗೆದುಕೊಳ್ಳದೆ ಹೇಗೆ ಗೊತ್ತಾಗುವುದು? ವಿದ್ಯಾರ್ಥಿಯು ಅಭ್ಯಾಸದಲ್ಲಿ ಪ್ರಗತಿ ಸಾಧಿಸಿದ್ದಾನೆಯೋ ಇಲ್ಲವೋ ಎನ್ನುವುದನ್ನು ತಿಳಿಯಲು ಒಂದು ಅಳತೆಗೋಲಾದರೂ ಬೇಕಲ್ಲ. ಈ ಕಠಿಣ ಸಮಸ್ಯೆಯ ಬಗೆಗೆ ನಿಮ್ಮ ಅಭಿಪ್ರಾಯವೇನು?'

ನಾನು ಹೇಳಿದೆ: 'ತಮ್ಮ ಸಮಸ್ಯೆ ನಿಜವಾಗಿಯೂ ಕಠಿಣವಾದದ್ದು. ವಿದ್ಯಾರ್ಥಿಯು ಓದುತ್ತಿರುವವರೆಗೆ, ಶಿಕ್ಷಕನು ಕಲಿಸುತ್ತಿರುವವರೆಗೆ ಪರೀಕ್ಷೆಯ ಆವಶ್ಯಕತೆ ಇದ್ದೇ ಇದೆ. ವಿದ್ಯಾರ್ಥಿಗಳು ಉತ್ಸಾಹದಿಂದ ಓದಲು ಸಿದ್ಧರಾದಾಗ ಶಿಕ್ಷಕನು ಅಷ್ಟೇ ಕೌಶಲ್ಯ, ಉತ್ಸಾಹದಿಂದ ಕಲಿಸಲು ಮುಂದೆ ಬಂದಾಗ ಮಾತ್ರ ಪರೀಕ್ಷೆಯನ್ನು ಕೈಬಿಡಬಹುದು. ಆದರೆ ಇಂದಿನ ಪರಿಸ್ಥಿತಿಯಲ್ಲಿ ಪರೀಕ್ಷೆ ಬೇಕೇಬೇಕು.'

ಡೈರೆಕ್ಟರ ಸಾಹೇಬರು: 'ಈ ವಿಷಯವಾಗಿ ನಾನು ಸುಧಾರಣೆ ಮಾಡಬಯಸುತ್ತೇನೆ.'

ನಾನು ಹೇಳಿದೆ: 'ಈಗ ತಾವು ಕೇವಲ 6 ತಿಂಗಳಿಗೊಮ್ಮೆ ಪರೀಕ್ಷೆ ತೆಗೆದುಕೊಳ್ಳುತ್ತೀರಿ. ಅದರ ಬದಲಾಗಿ ಪ್ರತಿ ತಿಂಗಳು ಪರೀಕ್ಷೆ ತೆಗೆದುಕೊಳ್ಳುವ ವ್ಯವಸ್ಥೆ ಮಾಡಿ. ಪರೀಕ್ಷೆಯ ಒರೆಗಲ್ಲಿನ ಮೇಲೆ ವಿದ್ಯಾರ್ಥಿಯನ್ನು ಅಳೆಯುವುದಾದರೆ ಪರೀಕ್ಷೆಯ ಪರಿಚಯ ಅವರಿಗೆ ಎಷ್ಟು ಹೆಚ್ಚಾಗುತ್ತದೆಯೋ ಅಷ್ಟೂ ಒಳ್ಳೆಯದು. ಅದರ ತೊಂದರೆ ಅಷ್ಟೇ ಕಡಿಮೆ ಆಗುತ್ತದೆ. ಅತಿಪರಿಚಯದಿಂದ ಎಂಥ ಸಂಕಟವೂ ಸಹನೀಯವಾಗುತ್ತದೆ. ಇನ್ನೊಂದು ಮಾತೆಂದರೆ ಪರೀಕ್ಷೆಯನ್ನು ಮಂದ ವಿದ್ಯಾರ್ಥಿಗಳನ್ನು ಚುರುಕುಗೊಳಿಸಲು ತೆಗೆದುಕೊಳ್ಳಬೇಕೇ ವಿನಃ ಜಾಣ ವಿದ್ಯಾರ್ಥಿಗಳ ಪ್ರಗತಿಯನ್ನು ಅಳೆಯುವುದಕ್ಕಲ್ಲ. ಈ ದೃಷ್ಟಿಕೋಣದಲ್ಲಿ ಪರಿವರ್ತನೆ ಬಹಳ ಅವಶ್ಯವಾಗಿದೆ. ಮೂರನೆಯದಾಗಿ ವಿಷಯವನ್ನು ಚೆನ್ನಾಗಿ ತಿಳಿದುಕೊಂಡವರಿಗೆ ಪರೀಕ್ಷೆಯಿಂದ ಬಿಡುಗಡೆ ದೊರೆಯಬೇಕು. ವಿದ್ಯಾರ್ಥಿ ಸ್ವಯಂ ಪ್ರೇರಣೆಯಿಂದ ತನ್ನ ತಪ್ಪುಗಳನ್ನು ತಿದ್ದಿಕೊಳ್ಳಲು ಪರೀಕ್ಷೆ ಕೊಡಬೇಕು. ಯಾರು ಈ ರೀತಿ ಮಾಡುವುದಿಲ್ಲವೋ ಅವರಿಗೆ ಈ ಸದವಕಾಶ ದೊರೆಯಲಾರದು ಎಂದು ತಿಳಿಸಿ ಹೇಳಬೇಕು. ಪರೀಕ್ಷೆಯಲ್ಲಿ ಅವರಿಗೆ ತಮ್ಮ ಪಠ್ಯಪುಸ್ತಕ ನೋಡಿ ಉತ್ತರ ಬರೆಯುವ ಸ್ವಾತಂತ್ರ್ಯ ನೀಡಬೇಕು. ನಿಮಗೆ ನೆನಪಾಗದೆ ಇದ್ದರೆ ಪುಸ್ತಕವನ್ನು ನೋಡಿಕೊಳ್ಳಿ. ಆಮೇಲೆ ಉತ್ತರ ಬರೆಯಿರಿ ಎಂದು ಅವರಿಗೆ ಹೇಳಬೇಕು. ಉತ್ತರ ಕೊಡುವಾಗ ವಿದ್ಯಾರ್ಥಿಗಳು ಪಠ್ಯಪುಸ್ತಕಗಳನ್ನು ಯಾವ ರೀತಿ ಉಪಯೋಗಿಸುತ್ತಾರೆ ಎನ್ನುವುದರಲ್ಲಿ ಅವರ ಪರೀಕ್ಷೆ ಅಡಗಿದೆ. ಇದಲ್ಲದೆ ನಾವು ವಿದ್ಯಾರ್ಥಿಗಳನ್ನು ಮೂರು ವರ್ಗಗಳಲ್ಲಿ ವಿಂಗಡಿಸಬೇಕು. ಮೇಲಿನ ದರ್ಜೆಗೆ ಬಡತಿ ಪಡೆಯಲು ಅರ್ಹರಾದವರು. ಅನರ್ಹರು ಮತ್ತು ಮಂದಬುದ್ಧಿಯವರಾಗಿದ್ದು, ಮುಂದೆ ಚೆನ್ನಾಗಿ ಓದಿ ಅರ್ಹತೆ ಪಡೆಯಬಲ್ಲವರು. ಮೊದಲನೇ ದರ್ಜೆ ಪಾಸು, ಎರಡನೇ ದರ್ಜೆ ಪಾಸು ಮುಂತಾದ ಪದ್ಧತಿಯನ್ನೇ ರದ್ದುಪಡಿಸಬೇಕು.'

'ಹಾಗಾದರೆ ಮುಂದಿನ ವರ್ಷ ನಿಮ್ಮನ್ನು ನನ್ನ ಸಹಾಯಕನನ್ನಾಗಿ ಮಾಡಿಕೊಳ್ಳುವೆ' ಎಂದು ಡೈರೆಕ್ಟರ್ ಹೇಳಿದರು.

ನಾನು ಮುಗುಳುನಕ್ಕು ಮುಂದುವರಿಸಿದೆ: 'ಪರೀಕ್ಷೆಯನ್ನು ಶಿಕ್ಷಕರೇ ನಡೆಸಬೇಕು. ಯಾಕೆಂದರೆ ತಮ್ಮ ವಿದ್ಯಾರ್ಥಿಗಳ ಪರಿಚಯ ಅವರಿಗೇ ಚೆನ್ನಾಗಿರುತ್ತದೆ. ಅವರ ಕುಂದುಕೊರತೆಗಳನ್ನು ಅವರು ಚೆನ್ನಾಗಿ ಬಲ್ಲರು. ಮೇಲಿನ ತರಗತಿಗೆ ಹೋಗಲು ಅವರಲ್ಲಿ ಅರ್ಹತೆ ಇದೆಯೋ ಇಲ್ಲವೋ ಎನ್ನುವುದನ್ನು ಆ ಶಿಕ್ಷಕರು ಮಾತ್ರ ಹೇಳಬಲ್ಲರು. ಒಬ್ಬ ಸಹಾಯಕನ ಆವಶ್ಯಕತೆ ತಮಗಿದೆ. ಪರೀಕ್ಷೆ ತೆಗೆದುಕೊಳ್ಳುವುದಕ್ಕಲ್ಲ. ಶಿಕ್ಷಕರು ಚೆನ್ನಾಗಿ ಪರೀಕ್ಷೆ ತೆಗೆದುಕೊಳ್ಳುತ್ತಾರೋ ಇಲ್ಲವೋ ಎನ್ನುವುದನ್ನು ಗಮನಿಸಲು.'

'ಇದು ಬಹಳ ಅದ್ಭುತವಾದ ಮಾತು.'

'ವಿಷಯ ಸ್ವಲ್ಪ ಹಾಗೆಯೇ ಇದೆ.'

ಪರೀಕ್ಷೆಯ ವಿಷಯವಾಗಿ ಇನ್ನೂ ನನಗೆ ಹೇಳುವುದಿತ್ತು. ಆದರೆ ಸಾಹೇಬರ



ಊಟದ ವೇಳೆ ಆಗಿತ್ತು. ಅವರು ಎದ್ದು ನಿಂತು ಕೊನೆಗೆ ನಗುತ್ತಾ ಹೇಳಿದರು: 'ಆಗಲಿ; ಇದರ ಬಗ್ಗೆ ನಾವು ಇನ್ನೊಮ್ಮೆ ಚರ್ಚಿಸೋಣ. ಒಂದು ಸಲ ನೀವು ಎಲ್ಲ ಶಿಕ್ಷಕರನ್ನುದ್ದೇಶಿಸಿ ಭಾಷಣ ಮಾಡಿ.'

ನಾನು ಅವರಿಗೆ ನಮಸ್ಕರಿಸಿ ಬರಿಯ ಭಾಷಣ ಕೇಳಿ ಸುಧಾರಿಸುವ ಶಿಕ್ಷಕರು ಈಗ ಎಲ್ಲಿದ್ದಾರೆ ಎಂದುಕೊಂಡು ಹೊರಟೆ. ಪರೀಕ್ಷೆಯ ಮೋಹದಿಂದ ಅವರನ್ನು ಬಿಡುಗಡೆ ಮಾಡುವುದು ಬಹಳ ಕಠಿಣವಾಗಿದೆ. ಡೈರೆಕ್ಟರ್ ಸಾಹೇಬರ ಅಜ್ಞೆಯಿಂದ ಇದು ಸಾಧ್ಯವಾಗಬಹುದೇನೋ? ಆದರೆ ಪಾಪ ಅವರ ಕೈಗಳೂ ಕಟ್ಟಿವೆಯಲ್ಲಾ....?

## 3

ನಾಲ್ಕನೆಯ ತರಗತಿಯ ವಿದ್ಯಾರ್ಥಿಗಳಿಗೆ ಭೂಗೋಳ ವಿಷಯದ ಬಗ್ಗೆ ಸ್ವಲ್ಪ ಪರಿಚಯವಿತ್ತು. ನಾನು ನಕಾಶೆಗಳನ್ನು ತರಿಸಿದೆ. ಕಾಠಿಯವಾಡ, ಗುಜರಾತ್ ಮತ್ತು ಮುಂಬೈ ಪ್ರದೇಶಗಳ ನಕಾಶೆಗಳನ್ನು ಗೋಡೆಯ ಮೇಲೆ ನೇತುಹಾಕಿದೆ. ಇಂದಿನವರೆಗೂ ನಾನು ಅವರಿಗೆ ಭೂಗೋಳವನ್ನೇ ಕಲಿಸಿರಲಿಲ್ಲ. ಅವರು ತಮ್ಮ ನೋಟ್ ಪುಸ್ತಕಗಳ ಹಾಳೆ ಹರಿದು ಚಿಕ್ಕ ಕೊಳವೆಗಳನ್ನು ಮಾಡಿ ಬೆರಳಿಗೆ ಸೇರಿಸಿಕೊಳ್ಳುತ್ತಿದ್ದರು. ನಾನು ನೋಡುತ್ತಲೇ ಇದ್ದೆ.

ಭೂಗೋಳ ಶಿಕ್ಷಣ ಅನರ್ಥವನ್ನೇ ಮಾಡಿದೆ. ಸ್ವಲ್ಪ ಹೊತ್ತು ಮನೋವಿನೋದದ ನಂತರ ನಾನು ಮಕ್ಕಳಿಗೆ ಹೇಳಿದೆ. 'ನಕಾಶೆಯಲ್ಲಿ ಭಾವನಗರವನ್ನು ತೋರಿಸಿ'. ಒಬ್ಬ ಹುಡುಗ ಮುಂಬೈ ಪ್ರಾಂತದ ನಕಾಶೆಯ ಮೇಲೆಲ್ಲ ಕಣ್ಣೋಡಿಸಿದ. ಮುಂಬೈ, ಅಹಮದಾಬಾದ, ಹೈದರಾಬಾದ, ಪುಣೆ, ಪೋರಬಂದರ ಹೀಗೆ ಓದುತ್ತ ಹೋದನು. ಹಿಂದೆ ನಿಂತಿದ್ದ ಇಬ್ಬರು ಮೂವರು ಭಾವನಗರವನ್ನು ಗುರುತಿಸಿದರು. ಅದನ್ನು ನಕಾಶೆಯಲ್ಲಿ ತೋರಿಸಲು ಆತುರರಾಗಿದ್ದರು. ಕೊನೆಗೆ ಒಬ್ಬ ಹುಡುಗ ತೋರಿಸಿಯೇ ಬಿಟ್ಟ.

'ಭಾವನಗರ ಯಾವ ದಿಕ್ಕಿಗಿದೆ?' ಎಂದು ಕೇಳಿದೆ.

ಮಕ್ಕಳು ಮೇಲೆ ಕೆಳಗೆ, ಬಲಕ್ಕೆ ಮತ್ತು ಎಡಕ್ಕೆ ಮನಸ್ಸಿನಲ್ಲಿ ಲೆಕ್ಕಹಾಕಿ ಹೇಳಿದರು.

'ಉತ್ತರ ದಿಕ್ಕಿಗೆ ಗುರುಗಳೇ.'

ಇನ್ನೊಬ್ಬನೆಂದ: 'ಉತ್ತರ ಮೇಲಿದೆ? ಅದು ಪೂರ್ವ ದಿಕ್ಕಿಗಿದೆ.'

ನಾನು ನಗುತ್ತ ಹೇಳಿದೆ: 'ಮೇಲೆ ಆಕಾಶವಿದೆ. ಅಲ್ಲಿ ಉತ್ತರವೆಲ್ಲಿದೆ?'

ಮಕ್ಕಳು ಹೇಳಿದರು: 'ಅಲ್ಲ ಗುರುಗಳೇ, ಮೇಲೆ ಉತ್ತರದ ಕೆಳಗೆ ದಕ್ಷಿಣ.'

ಇನ್ನೊಬ್ಬನೆಂದನು: 'ಉತ್ತರ-ದಕ್ಷಿಣ ಉದ್ದ. ಪೂರ್ವ-ಪಶ್ಚಿಮ ಅಗಲ.'

ಮೂರನೆಯವನೆಂದ: 'ಸೂರ್ಯ ಹುಟ್ಟುವುದು ಪೂರ್ವ ದಿಕ್ಕು.'

ನಾನು ಕೇಳಿದೆ: 'ಈ ನಕಾಶೆಯಲ್ಲಿ ಸೂರ್ಯ ಎಲ್ಲಿದ್ದಾನೆ ತೋರಿಸಿ?' ಎಲ್ಲರೂ ಚಿಂತೆಗೊಳಗಾದರು.

ನಾನು ಕೇಳಿದೆ: 'ಶತ್ರುಂಜಯ ನದಿಯನ್ನು ತೋರಿಸಿ.'

ಮಕ್ಕಳು ನದಿಯನ್ನು ತೋರಿಸಿದರು.

'ಇದು ಎಲ್ಲಿ ಹೋಗಿ ಕೂಡುತ್ತದೆ?'

ನಕಾಶೆ ಓದಿ ಅವರು ಹೇಳಿದರು: 'ಬಂಗಾಲ ಉಪಸಾಗರದಲ್ಲಿ.'

'ಅದು ಅರಬ್ಬಿಸಮುದ್ರದಲ್ಲಿ ಯಾಕೆ ಕೂಡುವುದಿಲ್ಲ?' ಎಂದು ಕೇಳಿದೆ.

'ಅದು ಅದರ ಇಚ್ಛೆ; ಅದು ಬಂಗಾಲ ಉಪಸಾಗರದಲ್ಲಿಯೇ ಕೂಡಬೇಕು' ಎಂದು ಒಬ್ಬ ಹೇಳಿದ.

'ಈ ನದಿ ಈ ರೀತಿ ಕೆಳಗೆ ಏಕೆ ಹರಿದು ಹೋಗುತ್ತದೆ?' ಎಂದು ಪ್ರಶ್ನೆ ಹಾಕಿದೆ.

ಹುಡುಗ ಹೇಳಿದ: 'ಅದು ಹಾಗೆಯೇ ಹರಿಯವುದು. ದಕ್ಷಿಣ ಕೆಳಗಿಲ್ಲವೇ?'

ನನಗೆ ಆಶ್ಚರ್ಯವಾಯಿತು. ಕಳೆದ ವರ್ಷ ಕಲಿತ ಭೂಗೋಳವನ್ನು ಮರೆತಿಲ್ಲ. ಬಾಯಿಪಾಠದ ಒಂದು ಉತ್ತಮ ಉದಾಹರಣೆಯನ್ನು ಅವರು ಪ್ರದರ್ಶಿಸಿದ್ದರು.

ನಾನು ಅದೇ ರೀತಿ ಈ ವರ್ಷವೂ ಕಲಿಸಬಹುದಾಗಿತ್ತು. ನಾನು ಮಕ್ಕಳಿಗೆ ಹೇಳಿದೆ: 'ನಕಾಶೆಗಳನ್ನು ಮುಚ್ಚಿಡಿರಿ. ಒಂದು ತಿಂಗಳ ನಂತರ ನಾವು ಭೂಗೋಳದ ಅಭ್ಯಾಸ ಮಾಡೋಣ. ಇನ್ನೂ ಕೆಲವು ದಿನ ನೀವು ಚಿತ್ರ ಬರೆಯಿರಿ.'

ಮಕ್ಕಳು ನನ್ನನ್ನು ನೋಡತೊಡಗಿದರು. ಶಾಲೆಯಲ್ಲಿ ಚಿತ್ರಗಳ ವಿಷಯ ಹೊಸದಾಗಿತ್ತು. ಪಠ್ಯಕ್ರಮದಲ್ಲಿ ಅದಕ್ಕೆ ಸ್ಥಾನವಿರಲಿಲ್ಲ. ಶಾಲೆಯಲ್ಲಿ ಇಂಥ ಒಂದು ಸೃಜನಾತ್ಮಕ ಕ್ರಿಯೆಗೆ ಅವಕಾಶವಿರಲಿಲ್ಲ. ಆದರೆ ನಾನು ಇಂಥದೊಂದನ್ನು ಪ್ರಾರಂಭಿಸಬೇಕಾಗಿತ್ತು.

ಮರುದಿನ ನಾನು ಮಕ್ಕಳಿಗೆ ಹೇಳಿದೆ: 'ನೀವು ಚಿತ್ರ ಬರೆಯಿರಿ. ನೆನಪಿನಿಂದಾದರೂ ಬರೆಯಿರಿ. ಮನುಷ್ಯ, ಪಕ್ಷಿ, ಪತಂಗ, ಗಿಡಗಳು, ಹೂಗಳು, ಆಕಾಶ, ಮನೆ ನಕಾಶೆ ಹೀಗೆ ಬೇಕಾದ್ದನ್ನು ಬರೆಯಿರಿ.' ಇಷ್ಟು ಹೇಳಿದ್ದೇ ಸಾಕು, ಮಕ್ಕಳು ಚಿತ್ರಗಳನ್ನು ಬರೆದಿದ್ದೇ ಬರೆದದ್ದು. ಬೆಳಗಿನ ವೇಳೆ ಚಿತ್ರ ಬರೆಯುವುದರಲ್ಲಿಯೇ ಕಳೆಯಿತು. ಶಾಲೆ ಬಿಡುವ ಗಂಟೆ ಬಾರಿಸುವ ತನಕ ಹೀಗೆಯೇ ನಡೆಯಿತು.

ನಾನು ಮಕ್ಕಳಿಗೆ ಹೇಳಿದೆ: 'ತಂದೆ-ತಾಯಿಗಳು ಕಾಗದ, ಪೆನ್ಸಿಲ್ಲು ಕೊಡಿಸಿದರೆ ಅಂಥವರು ಕಾಗದದ ಮೇಲೆ ಚಿತ್ರ ಬರೆಯಿರಿ. ಉಳಿದವರು ಹಲಗೆಗಳ ಮೇಲೆ ಚಿತ್ರ ಬರೆಯಿರಿ.'

ನಾಲ್ಕಾರು ದಿನಗಳು ಇದೇ ರೀತಿ ಕಳೆದವು. ಈ ನಡುವೆ ಅನೇಕ ಚಿತ್ರಗಳು ಸಿದ್ಧವಾದವು. ಚಿತ್ರಕಾರನು ಕಡೆಗಣ್ಣಿನಿಂದಲೂ ನೋಡಲಾಗದಂತಹ ಚಿತ್ರಗಳು. ಆದರೂ ಆ ಚಿತ್ರಗಳು ಅವರ ಕಲ್ಪನಾಶಕ್ತಿಯ ಮಾಧ್ಯಮಗಳಾಗಿದ್ದವು. ನಾನು ಯೋಚಿಸಿದೆ.



ಈ ಚಿತ್ರಗಳನ್ನು ಸಂಗ್ರಹಿಸಿಡಬೇಕು. ಸಾಹೇಬರನ್ನು ಕಂಡು ರದ್ದಿ ಕಾಗದಗಳನ್ನು ಸಂಗ್ರಹಿಸಿ, ಸಾಹೇಬರಿಂದ ಒಂದೆರಡು ಡಜನ್ ಬಣ್ಣದ ಪೆನ್ಸಿಲ್‌ಗಳನ್ನು ತೆಗೆದುಕೊಂಡೆ. ಸಾಹೇಬರು ನಗುತ್ತ ಹೇಳಿದರು: 'ಕಲಿಸುವುದನ್ನು ಬಿಟ್ಟು ಮತ್ತೆ ಈ ಚಿತ್ರಗಳ ಹೊಸ ವಿಷಯವೊಂದನ್ನು ಪ್ರಾರಂಭಮಾಡಿದ ಹಾಗಿದೆಯಲ್ಲ.'

ಚಿತ್ರದ ವಿಷಯಕ್ಕನುಸಾರವಾಗಿ ಪ್ರತಿಯೊಬ್ಬ ವಿದ್ಯಾರ್ಥಿಯಿಂದ ಅನೇಕ ಕಾಪಿ ಪುಸ್ತಕಗಳನ್ನು ಮಾಡಿಸಿ, ಅದರಂತೆ ಅವರಿಗೆ ಚಿತ್ರಗಳನ್ನು ಬರೆಯಲು ತಿಳಿಸಿದೆ. ಚಿತ್ರದ ವಾತಾವರಣಕ್ಕನುಗುಣವಾಗಿ ನಾನು ಅವರಿಗೆ ಬೇವಿನ ಕಡ್ಡಿ, ಅರಳಿ ಎಲೆ, ತುಳಸಿ, ಮಂಜರಿ ಮುಂತಾದವುಗಳನ್ನು ಸಂಗ್ರಹಿಸಿ ಕೊಟ್ಟೆ. ನನ್ನ ಕೆಲವು ಒಳ್ಳೆಯ ಚಿತ್ರಗಳನ್ನು ತಂದು ತರಗತಿಯಲ್ಲಿ ತೂಗುಹಾಕಿದೆ. ಯಾವಾಗಲೂ ಉಪಯೋಗಕ್ಕೆ ಬರುವಂತಹ ಲೆಕ್ಕಣಿಕೆ, ಡಬ್ಬಿ, ಪೆಟ್ಟಿಗೆ ಮುಂತಾದವುಗಳನ್ನು ವ್ಯವಸ್ಥಿತವಾಗಿಡಿಸಿದೆ. ಒಂದು ಹಲಗೆಯ ಮೇಲೆ ದೊಡ್ಡ ದೊಡ್ಡ ಅಕ್ಷರಗಳಿಂದ ಚಿತ್ರ ಬರೆಯಿರಿ, ನಿಮ್ಮಿಷ್ಟಕ್ಕೆ ನೀವು ಚಿತ್ರ ಬರೆಯಿರಿ, ನಿಮಗೆ ಚಿತ್ರ ಬರೆಯಲು ಬರುತ್ತದೆ' ಎಂದು ಹೇಳಿದೆ. ನಿತ್ಯವೂ ಬರೆದಂತೆ ಚಿತ್ರಗಳು ಸುಂದರವಾಗುತ್ತಾ ಹೋಗುತ್ತವೆ. ಅದಕ್ಕಾಗಿ ಚಿತ್ರ ಬರೆಯಲು ಹೇಳಿದೆ. ಮಕ್ಕಳು ಚಿತ್ರಗಳನ್ನು ಬರೆಯುವುದರಲ್ಲಿಯೇ ಸಂಪೂರ್ಣವಾಗಿ ಮಗ್ನರಾದರು. ಕೆಲವು ಗಿಡಬಳ್ಳಿಗಳನ್ನು ಸುಂದರವಾಗಿ ಅನುಕರಿಸಿದರು. ಕೆಲವರು ನಿಜವಾದ ಹೂವಿನ ಬಣ್ಣವನ್ನು ತಮ್ಮ ಚಿತ್ರದ ಹೂಗಳಲ್ಲಿ ತುಂಬಿದರು. ಕೆಲವರಿಗೆ ಚಿತ್ರವನ್ನೇ ಬರೆಯಲು ಬರುತ್ತಿರಲಿಲ್ಲ. ಸುಮ್ಮನೆ ಬೇರೆಯವರ ಕಡೆಗೆ ಅವರು ಹೇಗೆ ಚಿತ್ರ ಬರೆಯುತ್ತಾರೆ ಎನ್ನುವುದನ್ನು ನೋಡುತ್ತಾ ಕುಳಿತುಕೊಳ್ಳುತ್ತಿದ್ದರು.

ಹದಿನೈದು ದಿನಗಳ ನಂತರ ನಾನು ಹೈಸ್ಕೂಲಿನ ಒಬ್ಬ ಚಿತ್ರಕಲಾ ಶಿಕ್ಷಕರನ್ನು ಕರೆತಂದು ಅವರಿಗೆ ಹೇಳಿದೆ: 'ನೀವು ಚಿತ್ರ ಬರೆಯುವುದನ್ನು ಕಲಿಸುವ ಆವಶ್ಯಕತೆ ಇಲ್ಲ. ಹಲಗೆಯ ಮೇಲೆ ನೀವು ನಿಮಗೆ ಇಷ್ಟ ಬಂದಂತೆ ಚಿತ್ರ ಬರೆಯುತ್ತಾ ಹೋಗಿ. ಆದರೆ ಸಾವಕಾಶವಾಗಿ, ಸ್ವಚ್ಛವಾಗಿ ಚಿತ್ರ ಬರೆಯಿರಿ.' ಚಿತ್ರಕಲಾ ಶಿಕ್ಷಕರು ಹಾಗೆಯೇ ಮಾಡಿದರು. ವಿದ್ಯಾರ್ಥಿಗಳು ಏಕಾಗ್ರತೆಯಿಂದ ನೋಡುತ್ತಿದ್ದರು. ಎರಡನೆಯ ದಿನವೂ ಇದೇ ರೀತಿ ನಡೆಯಿತು. ವಿದ್ಯಾರ್ಥಿಗಳು ಚಿತ್ರ ಬರೆಯುವ ನಿಯಮಗಳನ್ನು ಚೆನ್ನಾಗಿ ಅರಗಿಸಿಕೊಂಡಿದ್ದಾರೆಂದೆನಿಸಿತು. ನಂತರ ನಾನು ಅವರ ಚಿತ್ರಗಳ ಕೆಳಗೆ ತಾರೀಖು ಮತ್ತು ಅವರ ಹೆಸರುಗಳನ್ನು ಬರೆಸಲು ಪ್ರಾರಂಭಿಸಿದೆ.

ಕೆಲವು ದಿನಗಳ ನಂತರ ನಾನು ಚಿತ್ರಕಾರ ಮಹಾಶಯರನ್ನು ಪುನಃ ಆಮಂತ್ರಿಸಿ ರೇಖಾಚಿತ್ರಗಳಲ್ಲಿ ಬಣ್ಣಗಳನ್ನು ಯಾವ ರೀತಿ ತುಂಬಬೇಕೆಂಬುದನ್ನು ಹೇಳಿಕೊಡಿ ಎಂದು ಪ್ರಾರ್ಥಿಸಿದೆ. ಅವರು ನಾಲ್ಕೈದು ಚಿತ್ರಗಳಿಗೆ ತಾವು ಬಣ್ಣ ತುಂಬಿ ಅದರ ವಿಧಾನವನ್ನು ತಿಳಿಸಿ ಹೇಳಿದರು. ವಿದ್ಯಾರ್ಥಿಗಳಿಗೆ ಬಣ್ಣಗಳನ್ನು ತುಂಬುವ ರೀತಿಯ ಪರಿಚಯವಾಯಿತು.

ಕೆಲವು ದಿನಗಳ ನಂತರ ನಾನು ನನ್ನ ಸರ್ವೇಯರ್ ಮಿತ್ರನನ್ನು ಕರೆತಂದೆ. ಅವರಿಗೆ

ನಮ್ಮ ಶಾಲೆಯನ್ನು ಅಳತೆಮಾಡಿ, ಅದರ ನಕಾಶೆಯನ್ನು ತಯಾರಿಸಲು ಕೇಳಿಕೊಂಡೆ. ನಾನು ಮತ್ತು ಅವರು ಪಾಠಶಾಲೆಯ ಉದ್ದಗಲಗಳನ್ನು ಅಳತೆ ಮಾಡುತ್ತಿದ್ದೆವು. ವಿದ್ಯಾರ್ಥಿಗಳು ನಮ್ಮ ಹಿಂದೆ ಹಿಂದೆ ಸುತ್ತುತ್ತಿದ್ದರು. ಮಕ್ಕಳಿಗೆ ನಾವು ಕಾಗದದ ಮೇಲೆ ಮನೆಯ ನಕಾಶೆಯನ್ನು ಬರೆದು ತೋರಿಸಿದೆವು. ಮೂರ್ನಾಲ್ಕು ದಿನ ವಿದ್ಯಾರ್ಥಿಗಳನ್ನು ಸರ್ವೇಯರ್ ಆಫೀಸಿಗೆ ಕಳಿಸಿ ಅಲ್ಲಿ ಅವರು ಓಣಿ, ಹಳ್ಳಿಯ ಸರಹದ್ದಿನ ನಕಾಶೆಯನ್ನು ಯಾವ ರೀತಿ ತಯಾರಿಸುವರೆಂಬುದನ್ನು ತಿಳಿದುಕೊಂಡು ಬರಲು ಹೇಳಿದೆ. ಒಬ್ಬಿಬ್ಬರು ವಿದ್ಯಾರ್ಥಿಗಳನ್ನು ಮೋಜಣಿದಾರರ ಸಂಗಡ ಕರೆದುಕೊಂಡು ಹೋಗಿ ಪ್ರತ್ಯಕ್ಷವಾಗಿ ಹಳ್ಳಿಯ ಎಲ್ಲೆಯನ್ನು ಅಳತೆ ಮಾಡುವುದನ್ನು ತೋರಿಸಿದೆ. ಹೀಗೆ ಮಕ್ಕಳು, ಮನೆ, ಶಾಲೆ, ಓಣಿ, ಬಾವಿ ಮತ್ತು ಶಾಲೆಯ ಚಿತ್ರ ಬರೆಯಲು ಕಲಿತರು. ಅವರಲ್ಲಿ ಚಿತ್ರ ಕಲೆಯ ಪ್ರವೃತ್ತಿಯನ್ನು ಬೆಳೆಸಲು ಆಗಾಗ ನಾನು ಅವರನ್ನು ನಿಸರ್ಗದ ದೃಶ್ಯಗಳನ್ನು ತೋರಿಸಲು ಕರೆದೊಯ್ಯುತ್ತಿದ್ದೆ.


ಯಾವುದೇ ವಸ್ತುವಿನ ಮೇಲೆ ದೃಷ್ಟಿ ಕೇಂದ್ರೀಕರಿಸಲು ಅಭ್ಯಾಸವಾಗುವಂತೆ ಅವರಿಗೆ ಅನೇಕ ಆಟಗಳನ್ನು ಆಡಿಸುತ್ತಿದ್ದೆ. ಯಾವುದಾದರೊಂದು ಗಿಡದ ಮೇಲೆ ದೃಷ್ಟಿ ಇಟ್ಟು ಅದರ ಎಲೆ, ಬೊಡ್ಡೆಗಳನ್ನು ನೋಡಿ ಕಾಗದದ ಮೇಲೆ ಬರೆಯಲು ಹೇಳುತ್ತಿದೆ. ಸೂರ್ಯೋದಯ ಸಮಯದ ವಿವಿಧ ಬಣ್ಣಗಳನ್ನು ವೀಕ್ಷಿಸಲು, ಸಂಜೆಯ ಬೇರೆ ಬೇರೆ ಬಣ್ಣಗಳನ್ನು ನೋಡಲು ಹೇಳುತ್ತಿದ್ದೆ. ಗಿಡವು ದೂರದಿಂದ ಹೇಗೆ ಕಾಣುತ್ತದೆ, ಸಮೀಪದಿಂದ ಹೇಗೆ ಕಾಣುತ್ತದೆ, ಪದಾರ್ಥಗಳು, ಅವುಗಳ ನೆರಳು, ಗುಡ್ಡಗಳು, ಮನುಷ್ಯರು ಇವನ್ನೆಲ್ಲ ಲಕ್ಷ್ಯವಿಟ್ಟು ಗಮನಿಸಲು ಹೇಳಿದೆ. ಈ ರೀತಿ ಕೆಲವು ದಿನ ನನ್ನ ತರಗತಿಯಲ್ಲಿ ಚಿತ್ರಕಲೆಯ ಅಭ್ಯಾಸ ನಡೆಯಿತು.

## 4

ಒಂದು ದಿನ ಹೈಸ್ಕೂಲಿನಿಂದ ಒಂದು ದುರ್ಬೀನ್ ತೆಗೆದುಕೊಂಡು ಬಂದೆ. ದೂರದ ವಸ್ತುಗಳು ಸಮೀಪಕ್ಕೆ ಹೇಗೆ ಕಾಣಿಸುತ್ತವೆ ಎಂಬುದನ್ನು ವಿದ್ಯಾರ್ಥಿಗಳಿಗೆ ತೋರಿಸಿದೆ. ಅವರಿಗೆ ಬಹಳ ಆಶ್ಚರ್ಯವಾಯಿತು. ಇಡೀ ದಿನ ಒಬ್ಬರಾದ ಮೇಲೆ ಒಬ್ಬರು ದುರ್ಬಿನಿನಲ್ಲಿ ನೋಡುತ್ತಲೇ ಕಾಲ ಕಳೆದರು. ರಾತ್ರಿ ಹೊತ್ತು ಗ್ರಹ ಹಾಗೂ ನಕ್ಷತ್ರಗಳನ್ನು ನೋಡಲು ನಾನೊಂದು ದೂರದರ್ಶಕ ತೆಗೆದುಕೊಂಡು ಬಂದೆ. ಅಂತೂ ನೀವು ಬಹಳ ಖಟಪಟಿ ಮನುಷ್ಯರು ಎಂದು ನನ್ನ ಕೆಲ ಸಹೋದ್ಯೋಗಿಗಳು ನುಡಿದರು.

ಅವರೆಲ್ಲ ಇಂಥ ಪ್ರಸಂಗಗಳಲ್ಲಿ ನನ್ನ ಜೊತೆಗೇ ಇರುತ್ತಿದ್ದರು. ನನ್ನನ್ನು ತೆಗಳುವುದನ್ನು ಬಿಟ್ಟು ನನ್ನಿಂದ ಏನಾದರೂ ಕಲಿತುಕೊಳ್ಳಬೇಕೆಂಬ ಇಚ್ಛೆಯವರಾಗಿದ್ದರು. ವಾರದಲ್ಲಿ ಒಂದುದಿನ ಒಂದು ತಾಸು ನನ್ನ ತರಗತಿಗೆ ಬಂದು ನಾನು ಹೇಗೆ ಕೆಲಸ ಮಾಡುತ್ತಿದ್ದೇನೆ ಎಂಬುದನ್ನು ಅರಿತುಕೊಳ್ಳಲು ಡೈರೆಕ್ಟರ್ ಅವರಿಗೆ ಹೇಳಿದ್ದರು.





ರಾತ್ರಿಯಲ್ಲಿ ನಕ್ಷತ್ರಗಳನ್ನು, ಗ್ರಹಗಳನ್ನು ದೂರದರ್ಶಕದ ಮೂಲಕ ನೋಡುತ್ತಿರುವ ಹುಡುಗರ ಜೊತೆ ಲಕ್ಷ್ಮೀಶಂಕರರು.

ರಾತ್ರಿ ನಾನು ವಿದ್ಯಾರ್ಥಿಗಳಿಗೆ ಚಂದ್ರ ಹಾಗೂ ನಕ್ಷತ್ರಗಳನ್ನು ತೋರಿಸಿದೆ. ಎಲ್ಲರೂ 'ಓಹೋ!' ಎಂದು ಸಂತೋಷ ಪಟ್ಟರು.

ಚಂದ್ರನನ್ನು ತೋರಿಸುತ್ತ ನಾನು ಹೇಳಲಾರಂಭಿಸಿದೆ: 'ಚಂದ್ರನಲ್ಲಿ ಆಡು ಮೇಯಿಸುತ್ತಿರುವ ಮುದುಕಿಯಂತೆ ಕಾಣಿಸುತ್ತಿರುವುದು ಚಂದ್ರನ ಮೇಲಿನ ದೊಡ್ಡ ದೊಡ್ಡ ಕೊಳ್ಳಗಳು, ಪರ್ವತಗಳು. ಅಲ್ಲಿ ಎಷ್ಟೊಂದು ಚಳಿ ಇರುತ್ತದೆಂದರೆ ಅಲ್ಲಿ ಮನುಷ್ಯರು ಬದುಕಲು ಸಾಧ್ಯವಿಲ್ಲ.' ವಿದ್ಯಾರ್ಥಿಗಳು ನನ್ನ ಮುಖ ನೋಡಲಾರಂಭಿಸಿದರು.

ನಾನು ಹೇಳಿದೆ: 'ಭೂಮಿ ಮತ್ತು ಚಂದ್ರ ಅಕ್ಕ ತಂಗಿಯರು. ಸೂರ್ಯನು ಇವರ ತಂದೆ.' ವಿದ್ಯಾರ್ಥಿಗಳು ಆಶ್ಚರ್ಯದಿಂದ ನನ್ನ ಕಡೆಗೆ ನೋಡತೊಡಗಿದರು.

ಒಬ್ಬನು ಕೇಳಿದ: 'ಈ ಕತೆಯನ್ನು ಯಾವ ಪುಸ್ತಕದಲ್ಲಿ ಬರೆದಿದ್ದಾರೆ ಗುರುಗಳೇ?'

'ಇದು ಕತೆಯಲ್ಲ, ನಿಜ ಸಂಗತಿ.'

ಮಕ್ಕಳೆಂದರು: 'ಇದು ಸಾಧ್ಯವಿಲ್ಲ.'

ನಾನು ಹೇಳಿದೆ: 'ಸಾಧ್ಯವಿದೆ, ಇದು ನಿಜ ಸಂಗತಿ.'

ಈ ರೀತಿಯಾಗಿ ನಾನು ಸೂರ್ಯನಿಂದ ಭೂಮಿ ಹೇಗೆ ಹುಟ್ಟಿತು ಎಂಬುದನ್ನು

ತಿಳಿಸಿದೆ. ಹೀಗೆ ವಿಷಯ ದಿನದಿನಕ್ಕೆ ಅವರಿಗೆ ಹಿಡಿಸತೊಡಗಿತು. ಭೂಮಿ ಹೇಗೆ ತಂಪಾಯಿತು? ತಗ್ಗು, ದಿಣ್ಣೆ, ಕೊಳ್ಳ, ಪರ್ವತ ಹೇಗೆ ಉಂಟಾದವು ಎನ್ನುವುದನ್ನು ವಿವರಿಸಿದೆ. ಸರೋವರ, ನದಿಗಳು ಹೇಗಾದವು, ಜಲಚರಗಳು, ಮೀನುಗಳು, ಅಡವಿ, ಕಾಡು, ಮಾನವ ಜೀವಿಯ ವಿಕಾಸ ಹೇಗಾಯಿತೆಂಬುದನ್ನು ವಿವರಿಸಿದಾಗ ಅವರಿಗಾದ ಆಶ್ಚರ್ಯ ಅಷ್ಟಿಷ್ಟಲ್ಲ. ತನ್ಮಯರಾಗಿ ಕೇಳುತ್ತಿದ್ದರು. ಮುಖ್ಯಾಧ್ಯಾಪಕರು ಇದನ್ನೆಲ್ಲ ಕೇಳಲು ಏಳನೇ ವರ್ಗದ ವಿದ್ಯಾರ್ಥಿಗಳನ್ನೂ ನಮ್ಮಲ್ಲಿ ಕಳಿಸುತ್ತಿದ್ದರು.

ಒಂದು ದಿನ ಒಂದು ಗ್ಲೋಬು ತಂದು ವಿದ್ಯಾರ್ಥಿಗಳಿಗೆ ತೋರಿಸಿ 'ಇದರ ಮೇಲಿರುವ ವಸ್ತುಗಳು ಹೇಗೆ ಉಂಟಾದವು ಎಂಬುದನ್ನು ಈಗಾಗಲೇ ನಾನು ನಿಮಗೆ ತಿಳಿಸಿರುವೆ' ಎಂದೆ.

ನೀರು ಎಲ್ಲಿದೆ, ನೆಲ ಎಲ್ಲಿದೆ, ಕಪ್ಪು ಜನ, ಬಿಳಿಯ ಜನ ಎಲ್ಲೆಲ್ಲಿ ವಾಸಿಸುತ್ತಾರೆ. ಹಳದಿ ಮತ್ತು ಕೆಂಪು ಜನರ ವಾಸ ಸ್ಥಳಗಳಾವುವು? ಗಿಡ್ಡ, ಎತ್ತರವಾದ ಜನ ಎಲ್ಲಿರುತ್ತಾರೆ ಎಲ್ಲವನ್ನೂ ತಿಳಿಸಿದೆ. ನಂತರ ನಾನು ಭೂಮಿಯ ಪ್ರಾಕೃತಿಕ ವಿಭಾಗಗಳನ್ನೂ ಅವುಗಳ ಹೆಸರುಗಳನ್ನು ತಿಳಿಸಿದೆ. ನಾವು ಏಷ್ಯಾ ಖಂಡದಲ್ಲಿದ್ದೇವೆ. ಏಷ್ಯಾದ ಇಲ್ಲಿ ಕಾಣುತ್ತಿರುವುದು ಭಾರತ, ಭಾರತದಲ್ಲಿ ಈ ಕಾಠಿ ಜನರು ಇರುವ ಸ್ಥಳವೇ ಕಾಠಿಯಾವಾಡ, ನಾವೆಲ್ಲ ಭಾವನಗರದಲ್ಲಿದ್ದೇವೆ' ಎಂದು ತಿಳಿಸಿದೆ.

ನಾನು ವಿದ್ಯಾರ್ಥಿಗಳಿಗೆ : 'ಈ ಗ್ಲೋಬು ತೆಗೆದುಕೊಂಡು ಆ ಪೆಟ್ಟಿಗೆಯಲ್ಲಿದ್ದ ಬೇರೆ ಬೇರೆ ನಕಾಶೆಗಳನ್ನು ತೆಗೆದುಕೊಂಡು ಆ ಪ್ರದೇಶಗಳು ಈ ಗ್ಲೋಬಿನ ಮೇಲೆ ಎಲ್ಲಿರುವವು ಕಂಡು ಹಿಡಿಯಿರಿ' ಎಂದು ಹೇಳಿದೆ.

ವಿದ್ಯಾರ್ಥಿಗಳಿಗೆ ನಿತ್ಯವೂ ಹೊಸ ಹೊಸ ಸಂಗತಿಗಳನ್ನು ಗಮನಿಸಲು ಹೇಳುತ್ತಿದ್ದೆ. 'ನೀವು ನೋಡಿದ ಪಟ್ಟಣಗಳು, ಹಳ್ಳಿಗಳು ಎಲ್ಲಿವೆ ಎಂಬುದನ್ನು ಗುರುತಿಸಿ. ಹಾಗೆಯೇ ಅವುಗಳಿಗೆ ಹೋಗುವ ಮಾರ್ಗಗಳು ಯಾವುವು? ಮಾರ್ಗದಲ್ಲಿ ಬರುವ ನದಿಗಳು ಯಾವುವು? ಎಂಬುದನ್ನು ಕಂಡು ಹಿಡಿಯಿರಿ' ಎಂದು ಹೇಳುತ್ತಿದ್ದೆ.

ಇದು ಒಂದು ರೀತಿಯಾಯಿತು. ನಾನು ಆಫ್ರಿಕಾ ನೋಡಿದ್ದೆ. ಆದ್ದರಿಂದ ಆಫ್ರಿಕಾ ಖಂಡದ ನಕಾಶೆಯನ್ನು ಮುಂದಿಟ್ಟು ಅವರಿಗೆ ಅದರ ಬಗೆಗೆ ವಿವರಿಸತೊಡಗಿದೆ. ವಿಕ್ಟೋರಿಯಾ, ನಿಯಾಂಜಾ, ಟಾಂಗಾನಿಕಾ, ಜಾಂಬಿಯಾಗಳಲ್ಲಿ ಇರುವ ಆನೆ, ಸಿಂಹ, ಮನುಷ್ಯರು, ಈ ಬಗ್ಗೆ ಹೇಳಿದೆ. ಒಂದು ದಿನ ನಾನು ನಮ್ಮಲ್ಲಿನ ಅಹಿರ್ ಜನ, ಕುಂಬಾರರು, ಕುರಿಕಾಯುವವರು ಎಲ್ಲರನ್ನೂ ಗಮನಿಸಲು ಹೇಳಿದೆ. ಅವರನ್ನು ಕರೆದುಕೊಂಡು ಒಂದೆರಡು ಸಲ ಹಳ್ಳಿಗಾಡಿನ ಪ್ರವಾಸ ಮಾಡಿದೆ. ನಮ್ಮ ಹಳ್ಳಿಯ ಸೀಮೆ, ನದಿದಂಡೆ, ಬೆಟ್ಟಗಳನ್ನು ತೋರಿಸಿ ಅವುಗಳ ಬಗೆಗೆ ಕುತೂಹಲ ಮೂಡಿಸಿದೆ.

ಇದಾದ ನಂತರ ನಾನು ಅವರಿಗಾಗಿ ಭೂಗೋಳದ ಬಗ್ಗೆ ಒಂದು ವಾಚನಾಲಯವನ್ನು ಸ್ಥಾಪಿಸುವ ಬಗ್ಗೆ ಆಲೋಚಿಸಿದೆ. ಆದರೆ ಪ್ರವಾಸ ಗ್ರಂಥಗಳು ನಮ್ಮ ಭಾಷೆಯಲ್ಲಿ



ದೊರೆಯಲಿಲ್ಲ. ದೊರೆತ ಕೆಲವೇ ಪುಸ್ತಿಕೆಗಳನ್ನು ತೋರಿಸಿ ಅವುಗಳನ್ನು ಓದುತ್ತ ನಕಾಶೆಗಳನ್ನೂ ನೋಡುತ್ತ ಹೋಗಿ. ಯಾತ್ರಿಕರು ಹೇಗೆ ಹೋಗುತ್ತಾರೋ ಅವರ ಜೊತೆಗೆ ನೀವೂ ಹೋಗಿ ಎಂದೆ.

ವಿದ್ಯಾರ್ಥಿಗಳಿಗೆ ಯಾತ್ರಾ ದರ್ಶನದ ಪುಸ್ತಕಗಳು ಬಹಳ ಹಿಡಿಸುತ್ತವೆ. ಒಬ್ಬೊಬ್ಬರಿಗೆ ಕಾಠಿಯಾವಾಡ ಸರ್ವಸಂಗ್ರಹ ಪುಸ್ತಕ ಬಹಳ ಹಿಡಿಸಿತು. ನಕಾಶೆಯಲ್ಲಿಯ ಒಂದು ಹಳ್ಳಿಯನ್ನಾರಿಸಿ, ಸರ್ವಸಂಗ್ರಹದಲ್ಲಿದ್ದ ಆ ಹಳ್ಳಿಯನ್ನು ಕುರಿತು ಎಲ್ಲ ವಿವರಗಳನ್ನು ಓದತೊಡಗಿದರು. ಈ ರೀತಿ ಅನೇಕ ಪರಿಚಿತ ಮತ್ತು ಅಪರಿಚಿತ ಹಳ್ಳಿಗಳನ್ನು ಅರಿತುಕೊಂಡರು. ಶ್ರೀ ರವಿಶಂಕರ್ ರಾವಲ್ ಅವರ ಚಿತ್ರಗಳು ಅವರಿಗೆ ಅಹಮದಾಬಾದಿನ ಸುಂದರ ಚಿತ್ರಣ ನೀಡಿದವು. ಎಲ್ಲ ಸ್ಥಳಗಳ ಬಗೆಗೆ ಇಂಥ ಸುಂದರ ಚಿತ್ರಗಳು ದೊರೆತರೆ ಎಷ್ಟು ಚೆನ್ನಾಗಿರುತ್ತದೆ ಎಂದುಕೊಂಡೆ. ಒಂದು ದಿನ ಶ್ರೀ ರವಿಶಂಕರರೇ ಬಂದರು. ಅವರ ಹತ್ತಿರ ಮದ್ರಾಸಿನ ದೃಶ್ಯಗಳ ಕೆಲವು ಫಿಲ್ಮ್‌ಗಳಿದ್ದವು. ಅವುಗಳನ್ನು ನಾನು ಆ ವಿದ್ಯಾರ್ಥಿಗಳಿಗೆ ತೋರಿಸಿದೆ. ಒಂದು ರೀತಿಯಿಂದ ಸಿನಿಮಾ ಹಾನಿಕಾರಕವಾದರೆ ಶಿಕ್ಷಣದ ಅಮೂಲ್ಯ ಸಾಧನೆ ದೃಷ್ಟಿಯಿಂದ ಅದು ಬಹಳ ಉಪಯೋಗಿಯಾಗಿದೆ. ದೂರದ ದೃಶ್ಯಗಳನ್ನು ಯಥಾವತ್ತಾಗಿ ತೋರಿಸುವುದರಿಂದ ಮಕ್ಕಳಲ್ಲಿ ಭೌಗೋಳಿಕ ಆಸಕ್ತಿ ಕುದುರುತ್ತದೆ. ಒಂದು ಸಲ ಸಿಜರ್ಸ್ ಸಿಗರೇಟಿನ ಕೆಲವು ಖಾಲಿ ಪ್ಯಾಕ್‌ಗಳು ದೊರೆತವು. ಅವುಗಳ ಮೇಲೆ ದೇಶ ವಿದೇಶಗಳ ಮನುಷ್ಯರ ಚಿತ್ರಗಳಿದ್ದವು. ನಾನು ಮಕ್ಕಳಿಗೆ ಅವುಗಳನ್ನು ನೋಡಲು ಕೊಟ್ಟೆ. ನನ್ನ ಉದ್ದೇಶ ಇಡೀ ಜಗತ್ತಿನ ಪರಿಚಯ ಮಾಡಿಕೊಡುವುದಾಗಿರಲಿಲ್ಲ, ಅವರು ನೆನಪಿನಲ್ಲಿಟ್ಟುಕೊಳ್ಳಬೇಕು ಎನ್ನುವುದೂ ನನ್ನ ಉದ್ದೇಶವಾಗಿರಲಿಲ್ಲ. ಜಗತ್ತು ಬಹಳ ವಿಶಾಲವಾಗಿದೆ ಎಂಬ ಸಂಗತಿಯನ್ನು ಅವರ ಮನಸ್ಸಿನಲ್ಲಿ ಮೂಡಿಸುವುದಾಗಿತ್ತು. ಪ್ರಪಂಚದ ಅನೇಕ ಪ್ರೇಕ್ಷಣೀಯ ಸ್ಥಾನಗಳನ್ನು ನೋಡಲು, ತಿಳಿದುಕೊಳ್ಳಲು ಇಂತಿಂಥ ಸಾಧನಗಳಿವೆ ಎಂಬುದನ್ನು ತಿಳಿಸುವುದಾಗಿತ್ತು.

ನಾನು ಮತ್ತೊಂದು ಆಟವನ್ನು ಪ್ರಾರಂಭಿಸಿದ್ದೆ. ಅದರ ಹೆಸರು 'ನಡೆಯಿರಿ ನಾವು ಪ್ರವಾಸ ಮಾಡೋಣ.' ವಿದ್ಯಾರ್ಥಿಗಳು ಭಾವನಗರದಿಂದ, ಅಹಮದಾಬಾದಿಗೆ, ನಂತರ ದ್ವಾರಕಾ, ಮುಂಬೈ, ಹಿಮಾಲಯ, ಪರದೇಶಕ್ಕೆ ಹೊರಡುತ್ತಿದ್ದರು. ಹೀಗೆ ಹೊರಡುವುದಕ್ಕೆ ಯಾವ ಗಾಡಿಗಳಲ್ಲಿ ಕುಳಿತುಕೊಳ್ಳಬೇಕು? ಎಲ್ಲಿ ಗಾಡಿಗಳನ್ನು ಬದಲಾಯಿಸಬೇಕು? ಅಲ್ಲಿ ನೋಡತಕ್ಕಂತಹ ಸ್ಥಳಗಳು ಯಾವುವು? ಎಷ್ಟು ದಿನಗಳಲ್ಲಿ ಪ್ರವಾಸ ಮುಗಿಯುವುದು? ಯಾರ್ಯಾರನ್ನು ಭೆಟ್ಟಿಯಾಗಬೇಕು? ಏನೇನು ಕೊಂಡುಕೊಳ್ಳಬೇಕು? ಎಷ್ಟು ಹಣ ಖರ್ಚಾಗಬಹುದು? ಎಂಬ ಸಂಗತಿಗಳನ್ನು ಮಾರ್ಗದರ್ಶಿಯಿಂದ ತಿಳಿದುಕೊಳ್ಳುತ್ತಿದ್ದರು. ನಿಜವಾಗಿಯೂ ಪ್ರವಾಸಕ್ಕೆ ಹೊರಟಿರುವವರಂತೆ ಈ ಎಲ್ಲ ಸಂಗತಿಗಳನ್ನು ಗಂಭೀರವಾಗಿ ತಿಳಿದುಕೊಳ್ಳುತ್ತಿದ್ದರು. ಭೂಗೋಳವನ್ನು ಚೆನ್ನಾಗಿ ಅರಿತುಕೊಳ್ಳಲು ನಾನು ಅವರಿಗೆ

ಈ ರೀತಿ ಅಭ್ಯಾಸ ಮಾಡಿಸುತ್ತಿದ್ದೆ. ಅನೇಕ ವಿಷಯಗಳನ್ನು ವಿದ್ಯಾರ್ಥಿಗಳ ಊಹಾಶಕ್ತಿಗೇ ಬಿಡುತ್ತಿದ್ದೆ. ಒಮ್ಮೊಮ್ಮೆ ನಕಾಶೆಯ ಸಹಾಯದಿಂದ ಕಡ್ಡಿಪೆಟ್ಟಿಗೆಗಳು ಎಲ್ಲಿ ತಯಾರಾಗುತ್ತವೆ ಎಂದು ತಿಳಿದುಕೊಳ್ಳಲು ಪ್ರಯತ್ನಿಸುತ್ತಿದ್ದರು. ಇಲ್ಲಿಯ ಹತ್ತಿ ಹೊರದೇಶದಿಂದ ಬರುತ್ತಿದೆಯೆ? ಯಾವ ಯಾವ ಮಾರ್ಗಗಳಿಂದ ಬರುತ್ತದೆ? ಇದನ್ನು ತಿಳಿದುಕೊಳ್ಳಲು ಕಾಲ್ಪನಿಕ ಹತ್ತಿ ಮೂಟೆಗಳ ಮೇಲೆ ಕುಳಿತು ಪ್ರವಾಸಗೈಯುತ್ತಿದ್ದರು. ಒಮ್ಮೊಮ್ಮೆ ಅಂಗಡಿಗೆ ಹೋದಾಗ ಅಲ್ಲಿಯ ವಸ್ತುಗಳು ಎಲ್ಲಿಂದ ಬರುತ್ತವೆ ಎಂಬುದನ್ನು ತಿಳಿಯಲು ಪ್ರಯತ್ನಿಸುತ್ತಿದ್ದರು. ನದಿ, ಪರ್ವತ, ಹಳ್ಳಿ ಪಟ್ಟಣಗಳ ಹೆಸರುಗಳ ಅಂತ್ಯಾಕ್ಷರಿ ಆಟವನ್ನು ಆಡುತ್ತಿದ್ದರು. ಚಿತ್ರಕಲೆಯಲ್ಲಿ ವಿದ್ಯಾರ್ಥಿಗಳು ಆಸಕ್ತಿ ವಹಿಸಿ ಗಿಡಗಳ ಚಿತ್ರ ಬರೆದಂತೆ, ನಕಾಶೆಗಳನ್ನು ಬರೆಯುವುದರಲ್ಲೂ ಅತ್ಯಂತ ಸಂತೋಷಪಡುತ್ತಿದ್ದರು. ತಾವು ಬರೆದ ನಕಾಶೆಗಳಲ್ಲಿ ನದಿ, ಪರ್ವತಗಳನ್ನು ಗುರುತುಹಚ್ಚುತ್ತಿದ್ದರು. ಹೆಚ್ಚು ಹೆಚ್ಚು ಸ್ಥಳಗಳನ್ನು ಕಂಡುಹಿಡಿಯಲು ಭೂಗೋಳ ಓದಿ ಪ್ರಯತ್ನಿಸುತ್ತಿದ್ದರು. ಈ ರೀತಿ ನಮ್ಮ ತರಗತಿಯಲ್ಲಿ ಭೂಗೋಳದ ಅಭ್ಯಾಸ ನಡೆಯುತ್ತಿತ್ತು.

ನನ್ನ ಶಿಕ್ಷಕ ಬಂಧುಗಳು ಒಂದು ದಿನ ನನಗೆ ಹೇಳಿದರು: 'ಈ ಕೆಲಸ ನಿಮ್ಮಿಂದಲೇ ಸಾಧ್ಯ. ಇಷ್ಟೊಂದು ವಿವರಗಳು ನಮಗೆ ಸಹ ಗೊತ್ತಿಲ್ಲ. ಈ ರೀತಿ ಭೂಗೋಳ ಕಲಿಸಲು ನಮಗೆ ಬರುವುದೂ ಇಲ್ಲ.'

ನಾನು ಹೇಳಿದೆ: 'ಎಲ್ಲವೂ ಸಾಧ್ಯವಿದೆ. ನಾವು ಪ್ರಯತ್ನ ಮಾಡಬೇಕು ಅದರ ಜೊತೆಗೆ ಒಂದಿಷ್ಟು ಉತ್ಸಾಹ ಇರಬೇಕು.'

## 5

ವಾರ್ಷಿಕ ಪರೀಕ್ಷೆ ಸಮೀಪಿಸುತ್ತಿತ್ತು. ನಾನು ನನ್ನ ಕೆಲಸದ ಅಂದಾಜು ಮಾಡಲು ಕುಳಿತೆ. ಗಣಿತದ ಬಗ್ಗೆ ವಿಚಾರ ಮಾಡಲಾರಂಭಿಸಿದೆ. ಇಂದಿನವರೆಗೆ ನಾನು ಗಣಿತಕ್ಕೆ ಕೈಯನ್ನೇ ಹಚ್ಚಿರಲಿಲ್ಲ. ಆದರೆ ಇದರ ಬಗ್ಗೆ ಚರ್ಚಿಸುವ ಇಚ್ಛೆ ಇಂದೇ ನನಗುಂಟಾಯಿತು. ಗಣಿತದ ಪರೀಕ್ಷೆ ತೆಗೆದುಕೊಳ್ಳುವ ಉದ್ದೇಶದಿಂದ ನಾನು ನನ್ನ ತರಗತಿಯ ವಿದ್ಯಾರ್ಥಿಗಳಿಗೆ ಉದಾಹರಣೆಗೆ ಕೆಲವು ಲೆಕ್ಕಗಳನ್ನು ಬಿಡಿಸಲು ಹೇಳಿದೆ. ಎಲ್ಲರೂ ಸರಿಯಾಗಿ ಬಿಡಿಸಿದರು. ಇದರಲ್ಲಿ ಎಲ್ಲರೂ ಜಾಣರಿದ್ದರೆಂಬ ನನ್ನ ಊಹೆ ನಿಜವಾಗಿತ್ತು. ಯಾವ ವಿಷಯದಲ್ಲಿ ನನಗೆ ವಿಶೇಷ ಆಸಕ್ತಿ ಇರಲಿಲ್ಲವೋ ಅದನ್ನೇ ವಿದ್ಯಾರ್ಥಿಗಳು ವಿಶೇಷ ಆಯಾಸವಿಲ್ಲದೆ ಬಿಡಿಸಿದ್ದನ್ನು ನೋಡಿ ನನ್ನ ಭಾರ ಕಡಿಮೆ ಆಯಿತು ಎಂದುಕೊಂಡೆ. ಆದರೆ ನಾನು ಕ್ರಮವಾಗಿ ಗಣಿತದ ಮೂಲಭೂತ ಸಿದ್ಧಾಂತಗಳ ಹಿಂದಿದ್ದ ತರ್ಕವನ್ನು ವಿವರಿಸುತ್ತಾ ಕಾರಣವನ್ನು ಕೇಳಿದೆ. ಆಗ ನನ್ನ ಮುಂದೆ ಕತ್ತಲೆ ಕವಿದಂತಾಯಿತು. ವಿದ್ಯಾರ್ಥಿಗಳಿಗೆ ಸಂಕಲನ, ಗುಣಾಕಾರ ಮುಂತಾದವುಗಳ



ತಿಳುವಳಿಕೆಯೇನೋ ಇತ್ತು. ಆದರೆ ಈ ತಿಳುವಳಿಕೆ ಕೃತ್ರಿಮ ಹಾಗೂ ಯಾಂತ್ರಿಕ ಎಂಬುದು ತಿಳಿಯಿತು. ಇದಕ್ಕೇನು ಪರಿಹಾರ ಎಂದು ಯೋಚಿಸಿದೆ. ಸಮಸ್ಯೆಯಲ್ಲಿ ಸಿಲುಕಿದೆ. ಗಣಿತವು ನನ್ನ ಪ್ರೀತಿಯ ವಿಷಯವಲ್ಲ. ಎರಡನೆಯದಾಗಿ ಅದನ್ನು ಕಲಿಸುವಾಗಿನ ದೋಷಗಳ ಅರಿವು ನನಗಿತ್ತು. ಅವುಗಳನ್ನು ಹೇಗೆ ನಿವಾರಿಸಬಹುದು ಎಂಬುದರ ಬಗೆಗೆ ನಾನು ಆಲೋಚಿಸಿಯೇ ಇರಲಿಲ್ಲ. ನಾನೇನು ಮಾಡಬೇಕು ಎಂಬುದು ನನಗೆ ಕಠಿಣ ಸಮಸ್ಯೆಯಾಯಿತು. ಡೆಪ್ಯುಟಿ ಡೈರೆಕ್ಟರರಿಗೆ ಎಲ್ಲ ಸಮಸ್ಯೆಯನ್ನು ಸ್ಪಷ್ಟವಾಗಿ ತಿಳಿಸಿದೆ. 'ಸಾಹೇಬರೇ ಗಣಿತದ ಬಗ್ಗೆ ನನಗೆ ಹೊಸತೇನನ್ನೂ ಮಾಡಿ ತೋರಿಸಲಾಗುವದಿಲ್ಲ, ಮಕ್ಕಳಿಗೆ ಚೆನ್ನಾಗಿ ಕಲಿಸಿ ಪಠ್ಯಕ್ರಮ ಮುಗಿಸಿಕೊಡುವೆ' ಎಂದೆ.

ಡೈರೆಕ್ಟರ್ ಸಾಹೇಬರು 'ಹೀಗೇಕೆ? ಗಣಿತದಲ್ಲಿ ಯಾವ ಸುಧಾರಣೆಗಳಿಗೂ ಅವಕಾಶವಿಲ್ಲವೇ?' ಎಂದು ಕೇಳಿದರು.

ನಾನು ಹೇಳಿದೆ: 'ಅವಕಾಶವೇನೋ ಇದೆ. ಆದರೆ ಆ ಸುಧಾರಣೆ ಮೊದಲಿನಿಂದಲೇ ಆಗಬೇಕು; ಎಣಿಕೆಯನ್ನು ಕಲಿಯುವಾಗಲೇ ವಿದ್ಯಾರ್ಥಿ ಸರಿಯಾದ ಪದ್ಧತಿಯನ್ನು ಆರಿಸಿಕೊಳ್ಳಬೇಕು. ಗಣಿತದ ವಿಷಯ ಹೇಗಿದೆಯೆಂದರೆ ಒಂದು ಸಲ ಸರಿಯಾಗಿ ಮನಸ್ಸಿಗೆ ನಾಟದೆ ಹೋದರೆ ಕೊನೆಯವರೆಗೆ ಅದು ಸರಿಯಾಗಿ ತಿಳಿಯುವುದೇ ಇಲ್ಲ.'

'ನೀವು ಮೊದಲಿಂದಲೇ ಕಲಿಸಲು ಪ್ರಾರಂಭಿಸಬಹುದು' ಎಂದರು ಸಾಹೇಬರು.

'ಇದಕ್ಕೆ ವೇಳೆ ಎಲ್ಲಿದೆ? ಒಂದು ವೇಳೆ ಸಮಯವಿದ್ದರೂ ಈ ವಿದ್ಯಾರ್ಥಿಗಳಿಗೆ ಯಾಂತ್ರಿಕವಾಗಿ ಕೆಲಸ ಮಾಡುವ ಅಭ್ಯಾಸವಾಗಿದೆ. ಇವರು ಗಣಿತದಲ್ಲಿ ಕಾರಣಗಳನ್ನೇ ಹೇಳುವುದಿಲ್ಲ. ಸರಿಯಾದ ರಸ್ತೆಗೆ ಇವರನ್ನು ತರುವುದು ಬಹಳ ಕಠಿಣವಿದೆ.'

'ಅಂದರೆ ಈ ವಿದ್ಯಾರ್ಥಿಗಳ ಗಣಿತ?' ಸಾಹೇಬರು ಪ್ರಶ್ನಿಸಿದರು.

'ಇವರಿಗೆ ಸರಿಯಾಗಿ ಕಲಿಸಲು ಶಕ್ತಿಮೀರಿ ಪ್ರಯತ್ನಿಸುತ್ತೇನೆ. ನಾನು ಹೇಳುವುದಿಷ್ಟೇ. ಇದರಲ್ಲಿಯೂ ಅನೇಕ ಪ್ರಯೋಗಗಳಿಗೆ ಅವಕಾಶವಿದೆ. ಅವುಗಳನ್ನು ನನಗೆ ಮಾಡಲಾಗುವುದಿಲ್ಲ.'

'ನಿಮಗೆ ಮೊದಲನೆಯ ತರಗತಿಯನ್ನು ಕೊಟ್ಟರೆ ಪ್ರಯೋಗಗಳನ್ನು ಮಾಡಬಲ್ಲಿರಾ?' ಎಂದು ಸಾಹೇಬರು ಕೇಳಿದರು.

'ಅದಾಗಬಹುದು. ಒಂದು ಎರಡರ ಎಣಿಕೆಯಿಂದಲೇ ಪ್ರಾರಂಭಿಸಬೇಕು. ಆಗ ಮಾತ್ರ ಅವರಿಗೆ ಈ ಕ್ರಮ ಒಳ್ಳೆಯದು ಎಂದು ಹೇಳಬಲ್ಲೆ.'

'ನನ್ನ ಶಿಕ್ಷಕ ಬಂಧುಗಳಿಗೆ ಗಣಿತ ಕಲಿಸುವಾಗ ತಮ್ಮದೇ ಆದ ವಿಧಾನ ಅನುಸರಿಸುವ ಆಸಕ್ತಿ ಇರುವುದೇನೋ ಸಹಜವೇ. ಮುಂದಿನ ವರ್ಷ ನನಗೆ ಈ ಸದವಕಾಶ ದೊರೆತರೆ ನಾನು ಮತ್ತು ಚಂದ್ರಶೇಖರ ಈ ವಿಷಯವಾಗಿ ಖಂಡಿತವಾಗಿ ಪ್ರಯೋಗಗಳನ್ನು ಮಾಡುವೆವು. ಮೊಂಟಿಸ್ಸೋರಿ ಗಣಿತ ಪದ್ಧತಿ ಒಳ್ಳೆಯದೆಂದು ನನ್ನ ಅಭಿಪ್ರಾಯ. ಅದು ಸ್ವಾಭಾವಿಕವಾಗಿದೆ. ಅದನ್ನು ಮನನ ಮಾಡಿರುವೆ. ಆದರೆ ಅನುಭವ ಪಡೆದಿಲ್ಲ.

ಅವರು ನನ್ನನ್ನು ಕೇಳಿದರು: 'ಮುಂದಿನ ವರ್ಷ ನೀವು ಇಲ್ಲಿಯ ಡೆಪ್ಯುಟಿ ಡೈರೆಕ್ಟರ್ ಮತ್ತು ಶಿಕ್ಷಕ ಹಾಗೂ ಪ್ರಯೋಗ ಕರ್ತೃವಿನ ಸ್ಥಾನ ಅಲಂಕರಿಸುವಿರಾ?'

'ದೇವರ ಇಚ್ಛೆ ಇದ್ದರೆ ಆಗಬಹುದು. ಆದರೆ ಈ ವರ್ಷದ ಮಟ್ಟಿಗೆ ಹೇಳುವುದಾದರೆ ಗಣಿತದ ವಿಷಯದಲ್ಲಿ ವಿಶೇಷ ಪ್ರಯೋಗ ಮಾಡಲಾರೆ ಎಂದಷ್ಟೇ ಹೇಳಬಲ್ಲೆ' ಎಂದು ಉತ್ತರಸಿದೆ.

## 6

ವಾರ್ಷಿಕ ಪರೀಕ್ಷೆ ಸಮೀಪಿಸಿತು. ನಾನು ನನ್ನದೇ ಆದ ರೀತಿಯಿಂದ ನನ್ನ ವಿದ್ಯಾರ್ಥಿಗಳನ್ನು ಪರೀಕ್ಷೆಗಾಗಿ ಅಣಿಗೊಳಿಸುತ್ತಿದ್ದೆ. ವಿದ್ಯಾರ್ಥಿಗಳೂ ಅತ್ಯಂತ ಉತ್ಸಾಹದಿಂದ ಸಿದ್ಧತೆ ನಡೆಸಿದ್ದರು. ಅವರು ಪರೀಕ್ಷೆಯಲ್ಲಿ ಬಹಳ ಯಶಸ್ವಿಯಾಗಿ ಉತ್ತೀರ್ಣರಾಗುವರೆಂದು ನನಗೆ ಸಂಪೂರ್ಣ ನಂಬಿಕೆ ಇತ್ತು.

ಪರೀಕ್ಷೆಯ ದಿನ ಬಂದಿತು. ಅಧಿಕಾರಿಗಳು ಎಲ್ಲ ತರಗತಿಗಳ ಪರೀಕ್ಷೆ ತೆಗೆದುಕೊಂಡರು. ಅಂದು ನನ್ನ ತರಗತಿಯ ಸರದಿ. ನಮ್ಮ ಕರಾರಿನಂತೆ ಸ್ವತಃ ಅವರೇ ನಮ್ಮ ತರಗತಿಯ ಪರೀಕ್ಷೆ ತೆಗೆದುಕೊಳ್ಳಬೇಕಾಗಿತ್ತು. ಅವರು ನಗುತ್ತ 'ಲಕ್ಷ್ಮೀಶಂಕರರೇ ನಾನು ನಿಮ್ಮ ತರಗತಿಯ ಪರೀಕ್ಷೆ ತೆಗೆದುಕೊಳ್ಳುವುದಿಲ್ಲ. ಎಲ್ಲ ವಿದ್ಯಾರ್ಥಿಗಳಿಗೂ ಮೇಲಿನ ತರಗತಿಗೆ ಬಡತಿ ಕೊಡುವೆ ಎಂದು ಹೇಳಿದರು.'

'ಹಾಗಾಗಬಾರದು. ಹೀಗೆ ಮಾಡುವುದರಿಂದ ತಾವು ನನಗೂ ನನ್ನ ವಿದ್ಯಾರ್ಥಿಗಳಿಗೂ ಅನ್ಯಾಯ ಮಾಡಿದಂತಾಗುತ್ತದೆ' ಎಂದು ಹೇಳಿದೆ.

'ಹೇಗೆ?' ಎಂದು ಡೈರೆಕ್ಟರ್ ಸಾಹೇಬರು ಕೇಳಿದರು.

'ಹೌದು, ಓದಲು ಬರದವರನ್ನು ಮೇಲಿನ ದರ್ಜೆಗೆ ನಾನು ಕಳಿಸಲಾರೆ' ಎಂದೆ.

ಡೈರೆಕ್ಟರ್: 'ಆದರೆ ನೀವು ಚೆನ್ನಾಗಿ ಕಲಿಸಿದ್ದೀರಿ ಎಂಬುದರ ಬಗ್ಗೆ ನನಗೆ ಪೂರ್ಣ ಭರವಸೆ ಇದೆ. ನೀವು ಕಲಿಸುವ ರೀತಿಯನ್ನು ನಾನು ಒಪ್ಪಿಕೊಂಡಿದ್ದೇನೆ.'

'ತಾವು ಹೇಳುವುದೇನೋ ನಿಜ. ಆದರೆ ನನ್ನ ಪದ್ಧತಿಯ ಪ್ರಭಾವ ಎಲ್ಲರ ಮೇಲೆ ಒಂದೇ ಬಗೆಯದಾಗಿರುವುದಿಲ್ಲ. ಒಬ್ಬಿಬ್ಬ ವಿದ್ಯಾರ್ಥಿಗಳಿಗಂತೂ ಅದರ ಗಂಧವೇ ಹತ್ತಿಲ್ಲ. ಅವರು ಸಂಪೂರ್ಣವಾಗಿ ಅದರ ಪ್ರಭಾವದಿಂದ ದೂರವೇ ಇದ್ದಾರೆ.'

'ಅಂಥವರ ಬಗ್ಗೆ ನೀವೇನು ಯೋಚಿಸಿರುವಿರಿ?' ಎಂದು ಸಾಹೇಬರು ಕೇಳಿದರು.

'ಅವರಲ್ಲಿ ಕೆಲವರಿಗೆ ಶಾಲೆಯನ್ನೇ ಬಿಡಿಸಬೇಕಾಗುವುದು. ಕ್ಷೌರಿಕನ ಮಗ ರಾಘವನಿಗೆ ಇತಿಹಾಸ, ಭೂಗೋಳ, ಗಣಿತಗಳ ತಳಬುಡವೂ ಗೊತ್ತಿಲ್ಲ. ಅವನು ಶಾಲೆಯಲ್ಲಿ ಎಷ್ಟೊಂದು ಪ್ರಭಾವಶಾಲಿಯಾಗಿದ್ದಾನೆಂದರೆ ನೂರಾರು ಕ್ಷೌರಿಕರನ್ನು ತನ್ನ ಬಳಿ ಕೆಲಸಕ್ಕೆ ಇಟ್ಟುಕೊಳ್ಳಬಲ್ಲ. ಕ್ಷೌರಿಕವಿದ್ಯೆಯಲ್ಲಿ ಪ್ರಾವೀಣ್ಯತೆ ಪಡೆಯಲು ಅವನನ್ನು ಮುಂಬೈಗೆ ಕಳಿಸಿಕೊಡಬೇಕು' ಎಂದು ಹೇಳಿದೆ.



ಡೈರೆಕ್ಟರ್: 'ಸರಿ, ಶಾಲೆಯಲ್ಲಿ ಕಲಿಯಲು ಅನರ್ಹರಾದವರು ಮತ್ತೆ ಯಾರ್‍ಯಾರು ಇದ್ದಾರೆ?'

'ಅವರು ಪಾಠಶಾಲೆಗೆ ಅಯೋಗ್ಯರಲ್ಲ. ಆದರೆ ಪಾಠಶಾಲೆ ಅವರಿಗೆ ಅಯೋಗ್ಯವಾಗಿದೆ. ಅವರಿಗೆ ಯೋಗ್ಯವಾದ ಕೆಲಸವನ್ನು ಶಾಲೆ ಕಲಿಸುತ್ತಿಲ್ಲ' ಎಂದು ವಿವರಿಸಿ ಹೇಳಿದೆ.

ಡೈರೆಕ್ಟರ್, 'ಸರಿ ನೀವೆಂದಂತೆಯೇ ಆಗಲಿ. ಅಂಥವರು ಯಾರ್‍ಯಾರು ಇದ್ದಾರೆ' ಎಂದು ಕೇಳಿದರು.

ನಾನು ಹೇಳಿದೆ: 'ಜೀವನ ಸೇಠ್ ಮಗ ನೇಮಿ ಪೋಲೀಸ್ ವಿಭಾಗ ಸೇರಲು ಲಾಯಕ್ಕಾಗಿದ್ದಾನೆ. ಅವನನ್ನು ಅಖಾಡಕ್ಕೆ ಕಳಿಸಿ, ಸೇಠರು ಅವನ ಖರ್ಚನ್ನು ನೋಡಿಕೊಂಡರೆ ಅವನು ಒಳ್ಳೇ ಫೌಜ್‌ದಾರರ ಹತ್ತಿರ ಇದ್ದು ಸ್ವಲ್ಪ ಕಾಯಿದೆಯನ್ನು ತಿಳಿದುಕೊಂಡರೆ, ಐದು ವರ್ಷಗಳಲ್ಲಿ ಒಳ್ಳೆಯ ಜಮಾದಾರನಾಗುತ್ತಾನೆ (ಸಿಪಾಯಿಗಳ ನಾಯಕ). ಈಗಾಗಲೇ ಅವನು ಅರ್ಧಶಾಲೆಯ ಜಮಾದಾರಿ ಕೆಲಸ ಮಾಡುತ್ತಿದ್ದಾನೆ.'

ಅವರು ಕೇಳಿದರು: 'ಸರಿ ಮತ್ತೆ ಯಾರ್‍ಯಾರು ಮಂದಮತಿಗಳಿದ್ದಾರೆ?'

ನಾನು ಹೇಳಿದೆ: 'ಮೂರ್‍ನಾಲ್ಕು ಜನರಿದ್ದಾರೆ. ರಜಾ ದಿನಗಳಲ್ಲಿ ಅವರನ್ನು ನನ್ನ ಹತ್ತಿರವೇ ಇಟ್ಟುಕೊಂಡು ಮುಂದಿನ ತರಗತಿಗೆ ಬಡತಿ ಪಡೆಯಲು ತಯಾರು ಮಾಡುವೆ. ಸಾಹೇಬರೇ, ನಮ್ಮ ಪಾಠಶಾಲೆಯ ಈಗಿನ ರೀತಿ–ನೀತಿಗಳು, ಪಠ್ಯಕ್ರಮದ ಜಟಿಲತೆಯನ್ನು ಕಡಿಮೆ ಮಾಡಲು ತಾವು ಯಾವುದಾದರೂ ಕ್ರಮ ಕೈಕೊಳ್ಳುವುದಿಲ್ಲವೇ?'

ಡೈರೆಕ್ಟರ್: 'ಸದ್ಯಕ್ಕೆ ಈ ವಿಷಯ ಹಾಗೆಯೇ ಇರಲಿ. ಈ ವಿಷಯದಲ್ಲಿ ನಮ್ಮ ಕೈ ಕಟ್ಟಿವೆ ಎಂದು ಅನೇಕ ಸಲ ನಾನು ನಿಮಗೆ ಹೇಳಿದ್ದೇನೆ. ನಿಮ್ಮ ತರಗತಿಯ ಪರೀಕ್ಷೆ ಮುಗಿಯಿತು ಎಂದು ತಿಳಿಯಲೇ?'

'ಇಲ್ಲ.'

ಡೈರೆಕ್ಟರ್ ಸಾಹೇಬರು ಹೇಳಿದರು: 'ಅರ್ಧವಾರ್ಷಿಕ ಪರೀಕ್ಷೆಯಂತೆ ಈ ಸಲವೂ ನೀವು ಕೆಲವೊಂದು ವಿಶೇಷ ವ್ಯವಸ್ಥೆ ಮಾಡಿದಂತೆ ಕಾಣುತ್ತದೆ. ನಿಮ್ಮ ಎಲ್ಲ ಉಪಾಯಗಳನ್ನು ನಾನು ಬಲ್ಲೆ.'

## 7

ಅಂದು ನಮ್ಮ ಪಾಠಶಾಲೆಯ ಸಮ್ಮೇಳನವಿತ್ತು. ಪರೀಕ್ಷೆಯ ನಂತರ ಪ್ರತಿವರ್ಷ ಇಂಥ ಸಮ್ಮೇಳನ ಜರುಗುತ್ತದೆ. ಆಗ ಹೆಚ್ಚು ಅಂಕಗಳನ್ನು ಪಡೆದು ಪಾಸಾದ ವಿದ್ಯಾರ್ಥಿಗಳಿಗೆ ಬಹುಮಾನಗಳನ್ನು ನೀಡಲಾಗುತ್ತದೆ. ಸಮ್ಮೇಳನದಲ್ಲಿ ಹಳ್ಳಿಯ ಶ್ರೀಮಂತರು, ಅಧಿಕಾರಿಗಳು ಎಲ್ಲರೂ ಹಾಜರಿದ್ದರು. ಸಾಹೇಬರು ಅಂದಿನ ಪ್ರಸಂಗದಲ್ಲಿ ಕಾರ್ಯಕ್ರಮವನ್ನು



ಮೂರು ಕಾಲಿನ ಓಟ

ರೂಪಿಸುವ ಹೊಣೆಯನ್ನು ನನಗೆ ವಹಿಸಿದ್ದರು. ನಾನು ಆ ಕೆಲಸವನ್ನು ವಿದ್ಯಾರ್ಥಿಗಳಿಗೆ ಒಪ್ಪಿಸಿದ್ದೆ. ಅವರು ನನ್ನ ಸಲಹೆ ಸೂಚನೆಯಂತೆ ಕಾರ್ಯಕ್ರಮ ತಯಾರಿಸಿದರು.

ಮೊದಲು ಲಾಠಿಗಳ ತಾಳಕ್ಕನುಗುಣವಾಗಿ ರಾಸಕ್ರೀಡೆ ಪ್ರಾರಂಭವಾಯಿತು. ಅರ್ಧ ಗಂಟೆಯವರೆಗೆ ಅದು ನಡೆಯಿತು. ಆನಂತರ ವಿವಿಧ ಸ್ಪರ್ಧೆಯ ಆಟಗಳು ನಡೆದವು. ಓಡುವ ಸ್ಪರ್ಧೆ, ಕುಂಟುವ ಸ್ಪರ್ಧೆ, ಮೂರು ಕಾಲಿನಿಂದ ಓಡುವ ಸ್ಪರ್ಧೆ, ಮಾಂತ್ರಿಕ ಕುರ್ಚಿಯ ಸ್ಪರ್ಧೆ ಮುಂತಾದವುಗಳು. ಜನರು ಕಣ್ಣು ಮಿಟುಕಿಸದೆ ನೋಡುತ್ತಿದ್ದರು. ಆಟಗಳು ಮುಗಿದ ಮೇಲೆ ಮೂಕ ಅಭಿನಯ ಪ್ರಾರಂಭವಾಯಿತು. ಕೆಲವರು ಹಳ್ಳಿಯ ಸೇಠ್, ಕೆಲವರು ವಿದ್ಯಾಧಿಕಾರಿಗಳು, ಮತ್ತೊಬ್ಬ ಫೌಜುದಾರ, ಇನ್ನೊಬ್ಬ ದೇಶನಾಯಕ ಇವರ ಅಣಕಾಟಗಳನ್ನು ಸುಂದರವಾಗಿ ಮಾಡಿ ತೋರಿಸಿದರು. ನಂತರ ವಿದ್ಯಾರ್ಥಿಗಳು ತಾವೇ ಬರೆದ ಚಿತ್ರಗಳನ್ನು ತಂದು ಒಂದೊಂದಾಗಿ ಎಲ್ಲರಿಗೂ ತೋರಿಸತೊಡಗಿದರು. ಇಡೀ ಸಭೆ ಮಕ್ಕಳ ಚಿತ್ರಗಳನ್ನು ನೋಡುವುದರಲ್ಲಿ ತಲ್ಲೀನವಾಗಿತ್ತು.

ಕೊನೆಗೆ ಬಹುಮಾನ ವಿತರಣೆಯ ಕಾರ್ಯಕ್ರಮವಿತ್ತು. ಪ್ರತಿ ವರ್ಷ 125 ರೂ. ಮೊತ್ತದ ಬಹುಮಾನಗಳನ್ನು ಹಂಚಲಾಗುತ್ತಿತ್ತು. ಇವುಗಳು ವಿದ್ಯಾರ್ಥಿಗಳಿಗೆ ದೊರೆಯುತ್ತಿದ್ದವು.

ಕೊನೆಗೆ ಡೈರೆಕ್ಟರ್ ಸಾಹೇಬರು ಎದ್ದುನಿಂತು ಎರಡು ಮಾತು ಹೇಳಿದರು: 'ಸಭಿಕರೇ, ನನ್ನ ಅಭಿಪ್ರಾಯದಲ್ಲಿ ಇಂದಿನ ಈ ಪಾರಿತೋಷಕ ವಿತರಣಾ ಸಮ್ಮೇಳನ ಭಿನ್ನ ಪ್ರಕಾರದ್ದಾಗಿದೆ. ನನ್ನ ಪಕ್ಕದಲ್ಲಿ ಕುಳಿತ ಮಹಾನುಭಾವರು ಬಹುಮಾನದ ಬಗೆಗೆ ಹೊಸ



ಸಲಹೆ ಮಂಡಿಸಿದ್ದಾರೆ. ಈ ಸಲ 125ರೂ. ಗಳ ಬೇರೆ ಬೇರೆ ಬಹುಮಾನಗಳನ್ನು ಹಂಚುವುದಿಲ್ಲ. ಬದಲಾಗಿ ಶಾಲೆಯಲ್ಲಿ ಒಂದು ವಾಚನಾಲಯವನ್ನು ಸ್ಥಾಪಿಸಲಾಗುವುದು. ಮೇಲಧಿಕಾರಿಗಳಿಂದ ಈ ಬಗೆಗೆ ನಾನು ಅನುಮತಿ ಪಡೆದಿದ್ದೇನೆ. ಇನ್ನು ಮುಂದೆ ಬಹುಮಾನದ ಈ ಮೊತ್ತವನ್ನು ಪ್ರತಿವರ್ಷ ವಾಚನಾಲಯಕ್ಕಾಗಿ ವಿನಿಯೋಗಿಸಲಾಗುವುದು. ಈ ಶುಭವಾರ್ತೆ ತಿಳಿಸಲು ನನಗೆ ಬಹಳ ಸಂತೋಷವಾಗುತ್ತದೆ. ವ್ಯಕ್ತಿಗತ ಬಹುಮಾನಗಳನ್ನು ಕೊಡುವುದರಿಂದ ವಿದ್ಯಾರ್ಥಿಗಳಲ್ಲಿ ಅಹಂಕಾರ, ನಿರಾಶೆ ಹುಟ್ಟುತ್ತದೆ. ಈ ಹೊಸ ವ್ಯವಸ್ಥೆಯಿಂದ ಪ್ರತಿವರ್ಷ ಎಲ್ಲರಿಗೂ ಪ್ರಯೋಜನವಾಗುವುದು. ಬಹುಮಾನಗಳ ನಿರರ್ಥಕತೆಯನ್ನು ತಿಳಿಸಿ ಸತ್‌ಸಂಪ್ರದಾಯಕ್ಕೆ ನಾಂದಿ ಹಾಕಿಕೊಟ್ಟಿರುವ ಈ ಬಂಧುವಿಗೆ ನಾನು ಸಾರ್ವಜನಿಕವಾಗಿ ಆಭಾರ ಸಲ್ಲಿಸುತ್ತೇನೆ.

'ಈ ಪ್ರಸಂಗದಲ್ಲಿ ನಾನು ಇನ್ನೂ ಹೇಳಬಯಸುವುದೇನೆಂದರೆ ಈ ಮಹಾಶಯರು ಒಂದು ವರ್ಷದ ಹಿಂದೆ ನಾಲ್ಕನೆಯ ತರಗತಿಯಲ್ಲಿ ಕೆಲವು ಹೊಸ ಪ್ರಯೋಗಗಳನ್ನು ಮಾಡುವ ಉದ್ದೇಶದಿಂದ ನನ್ನ ಬಳಿ ಬಂದರು. ನಾನು ಆಗ ಇವರನ್ನು ಒಬ್ಬ ಕಲಿತ ಮೂರ್ಖ ಎಂದು ತಿಳಿದಿದ್ದೆ. ಇಂಥ ಹುಚ್ಚರು ಅನೇಕರಿದ್ದಾರೆ. ಪ್ರಸಂಗ ಮೈಮೇಲೆ ಬಂದಿತೆಂದರೆ ತಾವೇ ಓಡಿಹೋಗುತ್ತಾರೆ ಎಂದು ತಿಳಿದು ನಾನು ಇವರಿಗೆ ಪ್ರಯೋಗ ನಡೆಸಲು ಅನುಮತಿ ನೀಡಿದ್ದೆ. ಇವರಲ್ಲಿ ನನಗೆ ವಿಶ್ವಾಸವಿರಲಿಲ್ಲ. ಆದರೆ ಈಗ ನಾನು ಅತ್ಯಂತ ಸಂತೋಷದಿಂದ ಹೇಳಬಯಸುವುದೇನೆಂದರೆ ಇವರ ಪ್ರಯೋಗಗಳು ತುಂಬಾ ಯಶಸ್ವಿಯಾಗಿವೆ. ನನ್ನ ಅಭಿಪ್ರಾಯದಲ್ಲಿ ಇವರು ಬಹಳ ದೊಡ್ಡ ಬದಲಾವಣೆ ಉಂಟುಮಾಡಿದ್ದಾರೆ. ನನ್ನ ಆತ್ಮ ಕೂಗಿ ಹೇಳುತ್ತಿರುವುದೇನೆಂದರೆ ಈ ಹಳೆಯ ಪದ್ಧತಿ ಶೀಘ್ರದಲ್ಲಿಯೇ ನಾಶವಾಗಬೇಕು. ನಮ್ಮಂಥ ಶಿಕ್ಷಕರು, ಅಧಿಕಾರಿಗಳು ಸ್ವಂತ ಇಚ್ಛೆಯಿಂದ ಹಿಂದೆ ಸರಿದು ಇಂಥ ಸೃಜನಾತ್ಮಕ ಶಿಕ್ಷಾವಿದರಿಗೆ, ವಿಚಾರಶೀಲರಿಗೆ ಈ ಸ್ಥಾನಗಳನ್ನು ಒಪ್ಪಿಸಬೇಕು.

'ನನ್ನ ಸಂತೋಷವನ್ನು ಹೇಗೆ ಪ್ರಕಟಿಸಬೇಕೆಂಬುದೇ ನನಗೆ ತಿಳಿಯದಾಗಿದೆ. ಇವರ ತರಗತಿಯ ಈ ವಿದ್ಯಾರ್ಥಿಗಳನ್ನು ನೋಡಿ; ಎಷ್ಟು ಶಿಸ್ತು ಹಾಗೂ ಸಂತೋಷದಿಂದಿದ್ದಾರೆ, ಇವರ ಬುದ್ಧಿಶಕ್ತಿಯ ವಿಕಾಸಕ್ಕೆ ನಾನೇ ಸಾಕ್ಷಿಯಾಗಿದ್ದೇನೆ. ಇವರ ಬಗ್ಗೆ ಇವರ ತಂದೆ-ತಾಯಿಗಳೂ ಸಂತೋಷಪಡುತ್ತಿರುವುದು ನನಗೆ ಗೊತ್ತಿದೆ.'

ಡೈರೆಕ್ಟರ್ ಸಾಹೇಬರ ಭಾಷಣ ಮುಗಿದ ಕೂಡಲೇ ಸಮ್ಮೇಳನದ ಕಾರ್ಯಕ್ರಮ ಕೊನೆಗೊಂಡಿತು. ಎಲ್ಲರೂ ತಮ್ಮ ತಮ್ಮ ಮನೆಗಳಿಗೆ ತೆರಳಿದರು.

ನಾನು ನನ್ನ ಒಂದು ವರ್ಷದ ಯಶಸ್ವೀ ಪ್ರಯತ್ನಗಳ ಬಗೆಗೆ ಸಂತೋಷಪಡುತ್ತಾ ಮನೆಗೆ ಮರಳಿ ಹೊಸ ಶಿಕ್ಷಣ ವ್ಯವಸ್ಥೆಯ, ಉಜ್ವಲ ಭವಿಷ್ಯದ ಮಧುರ ಸ್ವಪ್ನವನ್ನು ಕಾಣುವುದರಲ್ಲಿ ಲೀನನಾದೆ.

1932ರಲ್ಲಿ ಮೂಲತಃ ಗುಜರಾತಿಯಲ್ಲಿ ದಿವಾಸ್ವಪ್ನ ಎಂಬ ಹೆಸರಿನಲ್ಲಿ ಈ ಪುಸ್ತಕ ಪ್ರಕಟಗೊಂಡಿತು. ಅಂತರರಾಷ್ಟ್ರೀಯ ಶಿಕ್ಷಣ ಶಾಸ್ತ್ರದಲ್ಲಿ ಇದೊಂದು ಅಭೂತಪೂರ್ವ ಕಾಣಿಕೆ. ಇದರಿಂದಾಗಿ ಗಿಜುಭಾಯ್ ಬಧೇಕಾ ಅವರು ಶಿಕ್ಷಣ ಕ್ಷೇತ್ರದಲ್ಲಿ ಒಂದು ಧ್ವಜಸ್ತಂಭದಂತೆ ಪ್ರಕಾಶಗೊಂಡರು.

ಉಚ್ಚ ನ್ಯಾಯಾಲಯದ ವಕೀಲರಾಗಿದ್ದ ಶ್ರೀ ಗಿಜುಭಾಯ್ ಬಧೇಕಾ (1855-1939) ಅವರು ತಮ್ಮ ಮಗನ ವಿದ್ಯಾಭ್ಯಾಸದ ಜವಾಬ್ದಾರಿಯನ್ನು ವಹಿಸಿಕೊಂಡು ಮಾಂಟಿಸ್ಸೋರಿ ಶಿಕ್ಷಣ ಕ್ರಮವನ್ನು ಅಧ್ಯಯನ ಮಾಡಿದರು. 1916ರಲ್ಲಿ ಭಾವನಗರದ ದಕ್ಷಿಣಾಮೂರ್ತಿ ಬಾಲ ಮಂದಿರದಲ್ಲಿ ಶಿಕ್ಷಣಕ್ಕೆ ಸಂಬಂಧಿಸಿದ ಪ್ರಯೋಗಗಳನ್ನು ಕೈಗೊಂಡರು. 'ಬಾಲ ದೇವೊ ಭವ' ಎಂಬ ಘೋಷಣೆ ಅವರ ಮಕ್ಕಳ ಶಿಕ್ಷಣದ ಸೂತ್ರವಾಯಿತು. ಅವರು 200ಕ್ಕೂ ಹೆಚ್ಚು ಪುಸ್ತಕಗಳನ್ನು ಬರೆದಿದ್ದಾರೆ. ಅವುಗಳಲ್ಲಿ ಸುಮಾರು 20 ಪುಸ್ತಕಗಳು ವಿದ್ಯಾರ್ಥಿಗಳಿಗೆ ಹಾಗೂ ಶಿಕ್ಷಕರ ಬಳಕೆಗಾಗಿ ಬರೆದವು.

## ಎಲ್ಲಿಯ ನೆಮ್ಮದಿ?

ಎಲ್ಲಿಯವರೆಗೂ ಮಕ್ಕಳು
ಮನೆಯಲಿ ಪೆಟ್ಟುಗಳ ತಿನ್ನುವರೋ
ಶಾಲೆಗಳಲಿ ಬೈಗಳು ತಿನ್ನುವರೋ
ಅಲ್ಲಿಯವರೆಗೂ ನೆಮ್ಮದಿ ನನಗೆಲ್ಲಿಯದು?

ಎಲ್ಲಿಯವರೆಗೂ ಮಕ್ಕಳಿಗೆ
ಶಾಲೆಗಳು, ವಾಚನಾಲಯಗಳು
ವನ-ಉದ್ಯಾನಗಳು, ಕ್ರೀಡಾಂಗಣಗಳು
ನಿರ್ಮಾಣವಾಗುವುದಿಲ್ಲವೋ
ಅಲ್ಲಿಯವರೆಗೆ ನೆಮ್ಮದಿ ನನಗೆಲ್ಲಿಯದು?

ಎಲ್ಲಿಯವರೆಗೂ ಮಕ್ಕಳಿಗೆ
ಪ್ರೇಮ-ಸಮ್ಮಾನಗಳು ದೊರೆಯುವುದಿಲ್ಲವೋ
ಅಲ್ಲಿಯವರೆಗೂ ನೆಮ್ಮದಿ ನನಗೆಲ್ಲಿಯದು?

-ಗಿಜುಭಾಯ್

**ರೂ. 21.00**

**ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ**